ಉಪಾಧ್ಯಕ್ಷರು.—ಪ್ರಸ್ತಾಪವು ಹೀಗಿದೆ.

ಕರ್ನಾಟಕ ಪುರಸಭೆಗಳಿಗೆ (ತಿದ್ದುಪಡಿ) ಸಂಬಂಧಿಸಿದ ವಿಧೇಯಕ 1983 ನ್ನು ಮಂಡಿಸಲು ಸಭೆಯು ಅನುಮತಿಯನ್ನು ನೀಡುವುದು.

ಪ್ರಸ್ತಾಪವು ಅಂಗೀಕರಿಸಲ್ಪಟ್ಟಿತು

ಶ್ರೀ ಎಂ. ಚಂದ್ರಶೇಖರ್.—ನಾನು ಕರ್ನಾಟಕ ಪುರಸಭೆಗಳಿಗೆ (ತಿದ್ದುಪಡಿ) ವಿಧೇಯಕ 1983 ನ್ನು ಮಂಡಿಸುತ್ತೇನೆ.

ಉಪಾಧ್ಯಕ್ಷರು.—ವಿಧೇಯಕವು ಮಂಡಿಸಲಾಗಿದೆ.*

ವಿತ್ತೀಯ ಕಾರ್ಯಕಲಾಪಗಳು

1983-84 ಸಾಲಿನ ಆಯವ್ಯಯದ ಮೇಲಿನ ಸಾಲಿನ ಚರ್ಚೆ

(ಶ್ರೀಮಾನ್ ಪಿ. ರಾಮದೇವ್‌ರವರು ಅಧ್ಯಕ್ಷರ ಪೀಠವನ್ನಲಂಕರಿಸಿದರು)

* ಶ್ರೀ ಹೆಚ್. ಡಿ. ಚೌಡಯ್ಯ (ಕೆರಗೋಡು).—ಸನ್ಮಾನ್ಯ ಅಧ್ಯಕ್ಷರೆ, ಈ ಸದನದ ಮುಂದೆ ಮಂಡಿಸಿರತಕ್ಕ 83-84 ನೇ ಸಾಲಿನ ಆಯವ್ಯಯದ ವಿಷಯದಲ್ಲಿ ನಾನು ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಇಷ್ಟಪಡುತ್ತೇನೆ.

ಪ್ರಥಮವಾಗಿ ಹೇಳುವುದಾದರೆ ಬರಗಾಲದ ವಿಷಯ. ಕರ್ನಾಟಕ ರಾಜ್ಯದ ಮಾನ್ಯ ಆರ್ಥಿಕ ಸಚಿವರೂ ಹಾಗೂ ಮಾನ್ಯ ಮುಖ್ಯ ಮಂತ್ರಿಗಳೂ ಆದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ತಮ್ಮ ಆಯವ್ಯಯ ಭಾಷಣದಲ್ಲಿ ಯುದ್ಧದ ಭರದಲ್ಲಿ ನಾವು ಕಾರ್ಯೋನ್ಮುಖರಾಗಬೇಕೆಂದು – ಪ್ರಸ್ತಾಪಮಾಡಿದ್ದಾರೆ. ಇವತ್ತು ಹಳ್ಳಿಗಾಡಿನಲ್ಲಿ ಬಹಳ ವಿಷಮ ಪರಿಸ್ಥಿತಿ ಇದೆ. ಜನರಿಗೆ ಕುಡಿಯತಕ್ಕ ನೀರಾಗಲಿ, ದನಕರುಗಳಿಗೆ ತಿನ್ನತಕ್ಕ ಮೇವಾಗಲಿ ಜನರಿಗೆ ಬೇಕಾದ ಆಹಾರ ಪದಾರ್ಥಗಳಾಗಲಿ ಸುಲೀಸಾಗಿ ಇವತ್ತು ಸಿಕ್ಕುತ್ತಿಲ್ಲ. ಈ ಮಾತನ್ನು ನಾನು ಹೇಳುತ್ತಿರುವುದರಿಂದ ನಾನು ವಿರೋಧಪಕ್ಷದಲ್ಲಿದ್ದು ರಾಜಕೀಯವಾಗಿ ಹೇಳುತ್ತಿದ್ದೇನೆಂದು ಯಾವ ಮಾನ್ಯ ಸದಸ್ಯರೂ ಕೂಡ ಭಾವಿಸಬಾರದು. ನಾನು ನನ್ನ ಕ್ಷೇತ್ರದ ವಾಸ್ತವ ಪರಿಸ್ಥಿತಿ ಏನು ಎಂಬುದನ್ನು ಹೇಳುತ್ತಿದ್ದೇನೆ. ಬರಗಾಲ ಪ್ರದೇಶದಲ್ಲಿ ಬೆಂಗಾಡು ಪ್ರದೇಶದಲ್ಲಿ ಭಾವಿಗಳನ್ನು ತೋಡುವ ಸಲುವಾಗಿ 2 ರಿಗ್ ಯಂತ್ರಗಳನ್ನು ಕೊಡುತ್ತೇವೆಂದು ಮಾನ್ಯ ಸಚಿವರು ತಿಳಿಸಿದರು ಅದರಂತೆಯೇ ಕೊಟ್ಟರು. ಆದರೆ ಈ ರಿಗ್‌ಗಳು ಕಳೆದ 10-15 ದಿವಸದಿಂದ ಕೆಟ್ಟು ನಿಂತಿವೆ. ಇವತ್ತು ಬೆಳಿಗ್ಗೆ ನಾನು ಈ ವಿಚಾರವನ್ನು ಮಾನ್ಯ ಅಭಿವೃದ್ಧಿ ಖಾತೆ ಸಚಿವರ ಜೊತೆಯಲ್ಲಿ ಪ್ರಸ್ತಾಪ ಮಾಡಿದೆ. ದನಗಳಿಗೆ ಮೇವನ್ನು ಒದಗಿಸುವ ವಿಚಾರದಲ್ಲಿ ಕೇಳಿದಾಗ ನಮ್ಮ ಮಾನ್ಯ ಜಿಲ್ಲಾಧಿಕಾರಿಗಳು ಏನು ಹೇಳಿದರು ಎಂದರೆ ಜಿಲ್ಲೆಯ ಹೊರಗಡೆಯಿಂದಾಗಲಿ, ಅಥವಾ ಜಿಲ್ಲೆಯ ಒಳಗಾಗಲಿ ದನಗಳಿಗೆ ಬೇಕಾದ ಮೇವನ್ನು ಯಾರಾದರೂ ತರುವುದಾದರೆ ನಾವು ಲಾರಿಗಳನ್ನು ಕೊಡುತ್ತೇವೆಂದು ಹೇಳಿದರು. ಆದರೆ ಈಗ ಏನು ಹೇಳುತ್ತಿದ್ದಾರೆಂದರೆ ನಾವು ಲಾರಿಗಳನ್ನು ಕೊಡುವುದಕ್ಕಾಗುವುದಿಲ್ಲ, ಕೇವಲ ಡೀಸಲ್‌ನ್ನು ಮಾತ್ರ ಕೊಡುತ್ತೇವೆ, ನೀವೇ ಎಲ್ಲಾದರೂ ಲಾರಿಗಳನ್ನು ತೆಗೆದುಕೊಂಡು ಬನ್ನಿ ಎಂದು.

ಮಾನ್ಯ ಅಧ್ಯಕ್ಷರೇ, ಜನತಾ ಪಕ್ಷದವರು ತಮ್ಮ ಪ್ರಣಾಳಿಕೆಯಲ್ಲಿ ಏನು ಹೇಳಿದ್ದಾರೆಂದರೆ ಯಾರು ವ್ಯವಸಾಯ ಕಾರ್ಮಿಕರಿದ್ದಾರೆ ಅವರಿಗೆಲ್ಲಾ ನಾವು ಕೆಲಸವನ್ನು ಒದಗಿಸುತ್ತೇವೆ. ಒಂದು ವೇಳೆ ಕೆಲಸವನ್ನು ಒದಗಿಸದೆ ಹೋದರೆ ದಿನಕ್ಕೆ 2 ರೂ ನಂತೆ ನಗದು ಹಣವನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ನಾನೂ ಮತ್ತು ಮಾನ್ಯ ಸದಸ್ಯರಾದ ದೊಡ್ಡಬೋರೇಗೌಡರು ಇಬ್ಬರೂ ಒಂದೇ ಜಿಲ್ಲೆಯವರು. ಅವರು ಆಡಳಿತಪಕ್ಷದಲ್ಲಿದ್ದಾರೆ, ನಾನು ವಿರೋಧ ಪಕ್ಷದಲ್ಲಿದ್ದೇನೆ. ಎನ್. ಆರ್. ಇ.ಪಿ ಯಲ್ಲಿ ಕಳೆದ 4 ತಿಂಗಳಿಂದ ಕೂಲಿಗಳು ಏನು ಕೆಲಸವನ್ನು ಮಾಡಿದ್ದಾರೆ ಅವರಿಗೆ ಹಣವನ್ನು ಕೊಡುವುದಕ್ಕೆ ಅಲ್ಲಿ ಹಣವೇ ಇಲ್ಲ. ಹೊಸ ಕಾಮಗಾರಿಯನ್ನು ತೆಗೆದುಕೊಳ್ಳುವುದಕ್ಕೂ ಹಣ ಇಲ್ಲ; ಹಿಂದಿನ ಹಣವನ್ನು ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ ರೆವಿನ್ಯೂ ಹೆಡ್ 285 ರಲ್ಲಿ ಏನು ಹಣವನ್ನು ಕೊಡುತ್ತಿದ್ದೀರಿ ಅದರಲ್ಲಿ ಕೂಡ ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ. ಇಂಥ ಕ್ಷಾಮಪೀಡಿತ ಪ್ರದೇಶದಲ್ಲಿ ಯುದ್ಧದ ಭರದಲ್ಲಿ ಕಾರ್ಯೋನ್ಮುಖರಾಗಿದ್ದೇವೆಂಬ ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿರುವುದು ಸತ್ಯಕ್ಕೆ ದೂರವಾದ ಮಾತು. ಈಗ ಒಬ್ಬೊಬ್ಬ ಸಚಿವರಿಗೆ ಒಂದೊಂದು ಜಿಲ್ಲೆಯ ಅಭಿವೃದ್ಧಿ ಕಾರ್ಯಗಳನ್ನು ನೋಡಿಕೊಳ್ಳಲು ಏನು ಅಧಿ

*ಅನುಬಂಧಗಳು (4 ರಿಂದ 6)

ಕಾರವನ್ನು ಕೊಟ್ಟಿದ್ದಾರೆ ಅದು ಸ್ವಾಗತಾರ್ಹ. ಆದರೆ ಅವರು ಇನ್ನು ಮುಂದೆ ಪ್ರತಿಯೊಂದು ಊರಿನಲ್ಲೂ ಕನಿಷ್ಟ 2 3 ದಿನಸವಾದರೂ ಓಡಾಡುವಂತೆ ಮಾಡಬೇಕು ಹಾಗೆ ಮಾಡಿದರೆ ಅಲ್ಲಿನ ಪರಿಸ್ಥಿತಿ ಏನೆಂಬುದು ಚೆನ್ನಾಗಿ ಅರ್ಥವಾಗುತ್ತದೆ. ಬರಗಾಲವನ್ನು ಹೋಗಲಾಡಿಸಲು "ಅಭಿವೃದ್ಧಿ ಮಂಡಲಿಗಳನ್ನು" ರಚನೆ ಮಾಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಇದೂ ಕೂಡ ಸ್ವಾಗತಾರ್ಹವಾದುದು ಆದರೆ ಅಭಿವೃದ್ಧಿ ಮಂಡಲಿಗಳನ್ನು ಮಾಡುವಾಗ ಆಲೋಚನಾ ಬ್ಯಾಂಕ್‌ನ್ನು ಮಾಡಿರುವ ರೀತಿಯಲ್ಲಿ ಕೇವಲ ಬೆಂಗಳೂರಿನ ಜನರನ್ನೇ ಹಾಕಿ ರಚನೆ ಮಾಡುವುದಾದರೆ ಅದರಿಂದ ಏನೇನೂ ಪ್ರಯೋಜನವಾಗುವುದಿಲ್ಲ ಸ್ಥಳೀಯ ಜನರನ್ನು ಅದರಲ್ಲೂ ಜನರ ಕಷ್ಟಸುಖಗಳನ್ನು ತಿಳಿದುಕೊಂಡಿರುವವರನ್ನು ಹಾಕಿದರೆ ಇನ್ನೂ ಹೆಚ್ಚಿನ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ.

ಇನ್ನು ಲೋಕೋಪಯೋಗಿ ಮತ್ತು ನೀರಾವರಿ ಖಾತೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಈ ಖಾತೆಯ ಸಚಿವರು ಈ ಬಗ್ಗೆ ಕೆಲವು ದಿನಸಗಳ ಹಿಂದೆ ಎಲ್ಲ ಮಾನ್ಯ ಸದಸ್ಯರಿಗೂ ಪತ್ರಗಳನ್ನು ಬರೆದು ಪ್ರತಿಯೊಬ್ಬ ಸದಸ್ಯರೂ ಅವರವರ ಕ್ಷೇತ್ರದಲ್ಲಿ 5 ಲಕ್ಷ ರೂ. ಅಂದಾಜಿನ ಕೆಲಸಗಳನ್ನು ಸೂಚಿಸಬೇಕೆಂದು ತಿಳಿಸಿದ್ದಾರೆ ಅದರ ಪ್ರಕಾರ ಸ್ಥಳೀಯ ಅಧಿಕಾರಿಗಳ ಮುಖಾಂತರ ನಾವು ಉತ್ತರಗಳನ್ನು ಕೊಟ್ಟಿದ್ದೇವೆ ಆದರೆ ಈಗ ಬಡ್ಜೆಟ್‌ನಲ್ಲಿ ನೋಡಿದರೆ ಸಣ್ಣ ನೀರಾವರಿ, ರಸ್ತೆ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಒಂದು ಹೊಸ ಪುಸ್ತಕವನ್ನು ಮಾಡಿದ್ದಾರೆ. ಈ ಬಗ್ಗೆ ನಾನು ಸಂಬಂಧಪಟ್ಟ ಸಚಿವರ ಜೊತೆ ಮಾತನಾಡಿದ್ದೇನೆ. ಆದರೂ ನಾನು ನನ್ನ ಅಭಿಪ್ರಾಯವನ್ನು ಸದನಕ್ಕೆ ಹೇಳಬೇಕಾಗಿದೆ ಇದು ಕೇವಲ ನನ್ನ ಕ್ಷೇತ್ರದ ಪರಿಸ್ಥಿತಿಯಲ್ಲ. ಇದು ಎಲ್ಲರ ಕ್ಷೇತ್ರದಲ್ಲೂ ಇದೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ತೆಗೆದುಕೊಂಡಿರತಕ್ಕ ಸೇತುವೆ ಮತ್ತು ರಸ್ತೆ ಕೆಲಸಕ್ಕೆ ಸುಮಾರು 35 ಲಕ್ಷ ರೂ. ಆಗುತ್ತದೆ ಹಿಂದಿನ ಸರ್ಕಾರದಲ್ಲಿ ಪ್ರತಿಯೊಬ್ಬ ಸದಸ್ಯರ ಕ್ಷೇತ್ರದಲ್ಲೂ 15 ಲಕ್ಷ ರೂ. ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಅನುಮತಿಯನ್ನು ನೀಡಿದ್ದರು. ನಮ್ಮ ಜಿಲ್ಲೆಯಲ್ಲಿ 9 ಜನ ಶಾಸಕರಿದ್ದೇವೆ. ಪ್ರತಿಯೊಬ್ಬರ ಕ್ಷೇತ್ರದಲ್ಲೂ 15 ಲಕ್ಷ ರೂ. ಗಳ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಅನುಮತಿಯನ್ನು ಕೊಟ್ಟರೆ ಒಟ್ಟು 1.35 ಕೋಟಿ ರೂ. ಮಾತ್ರ ಆಗುತ್ತದೆ, ಈಗ ನೀವು ಕೊಟ್ಟಿರತಕ್ಕ ಸೂಚನೆಯ ಪ್ರಕಾರ ಕೇವಲ 5 ಲಕ್ಷ ರೂ. ಕಾಮಗಾರಿ ಎಂದರೆ ಅದು ಯಾವ ಮೂಲೆಗೂ ಸಾಲುವುದಿಲ್ಲ. ಈ ವಿಚಾರವನ್ನು ಸಚಿವರ ಜೊತೆ ಮಾತನಾಡಿದಾಗ ಇದು ಬಹುಶಃ ಅಧಿಕಾರಿಗಳು ಮಾಡಿರತಕ್ಕ ತಪ್ಪು ಎಂದು ಕಾಣುತ್ತದೆ. ಇದನ್ನು ಸರಿಪಡಿಸಬೇಕಾಗಿದೆ. ಎಂದು ಹೇಳಿದರು

ಶ್ರೀ ಕೆ. ರಾಮಭಟ್.—ನಿಮ್ಮ ಸರ್ಕಾರ ಇದ್ದಾಗ ಹಿಂದಿನ ವರ್ಷ ಇದಕ್ಕಾಗಿ ಎಷ್ಟು ಹಣ ಇಟ್ಟಿದ್ದಿರಿ ಸ್ವಾಮಿ ?

ಶ್ರೀ ಹೆಚ್. ಡಿ ಚೌಡಯ್ಯ.—ಹಿಂದಿನ ಸರ್ಕಾರದ ವಿಚಾರವನ್ನು ಬಿಟ್ಟು ಬಿಡಿ. ಈಗ ಹೊಸ ಸರ್ಕಾರ ಬಂದಿದೆ. ನಾವೂ ಹೊಸದಾಗಿ ಬಂದಿದ್ದೇವೆ. ಸರ್ವರಿಗೂ ಸಮಬಾಳನ್ನು ನಡೆಸಲು ಅವಕಾಶ ಮಾಡಿಕೊಡುತ್ತೇವೆಂದು ಹೇಳತಕ್ಕ ಸರ್ಕಾರ ಇದು. ಆದ್ದರಿಂದ ಈ ಅಸಮಾನ್ಯತೆ ಏನು ಇದೆ, ತಾರತಮ್ಯ ಏನಿದೆ, ಇದನ್ನು ಮೊದಲು ಸರಿಪಡಿಸಬೇಕು. ಇಲ್ಲಿ ಈ ಖಾತೆಗೆ ಸಂಬಂಧ-ಪಟ್ಟ ಸಚಿವರು ಇಲ್ಲದಿದ್ದರೂ ಮಾನ್ಯ ಅಧ್ಯಕ್ಷರ ಮುಖಾಂತರ ಈ ವಿಷಯವನ್ನು ಸಚಿವರ ಗಮನಕ್ಕೆ ತರುತ್ತಿದ್ದೇನೆ.

ನಮ್ಮ ಜಿಲ್ಲೆಯಲ್ಲಿ ಮೂರು ಕಾರ್ಖಾನೆಗಳು ಇವೆ. ಕೇವಲ ಒಂದು ಕಾರ್ಖಾನೆಯ ಏರಿಯಾದಲ್ಲಿ ಸುಮಾರು ಆರು ಲಕ್ಷ ಅರವತ್ತು ಸಾವಿರ ಎಕರೆ ಕಾಮಗಾರಿಗೆ ಒಳಪಟ್ಟಿದೆ. ಹೀಗಿದ್ದರೂ ಮೈಸೂರು ಶುಗರ್ ಕಾರ್ಖಾನೆ ಪಾಂಡವಪುರ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ ಈ ತಾರತಮ್ಯ ಕೂಡದು ಎಂದು ಈ ಸಂದರ್ಭದಲ್ಲಿ ನಿಷ್ಠೂರವಾಗಿ ಹೇಳಲು ಇಷ್ಟಪಡುತ್ತೇನೆ. ಇದನ್ನೂ ಕೂಡ ಸರಿಪಡಿಸಬೇಕು.

ಇನ್ನು ಕಟ್ಟಡಗಳ ವಿಷಯದಲ್ಲಿ ಹೇಳುವುದಾದರೆ ಒಂದೊಂದು ಕಟ್ಟಡವನ್ನು ಮಂಡ್ಯ ಜಿಲ್ಲೆಯಲ್ಲಿ ತೆಗೆದುಕೊಂಡರೆ ಬಹುತೇಕ ಕಟ್ಟಡಗಳು 100 ವರ್ಷಗಳಿಗೂ ಮೇಲ್ಪಟ್ಟು ಆಗಿರುತ್ತದೆ. ಲೋಕೋಪಯೋಗಿ ಇಲಾಖೆಯವರೂ ಕೂಡ ಸರ್ಟಿಫೈ ಮಾಡಿರುತ್ತಾರೆ. ಒಂದೊಂದು ಕಟ್ಟಡ ಆಫೀಸ್‌ನ್ನು ನಡೆಸಲು ನಾಲಾಯಕ್ ಆಗಿರುತ್ತದೆ. ಅರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ ಹೊಸ ಕಟ್ಟಡವನ್ನು ಕಟ್ಟಲು ಬ್ಲೂಪ್ರಿಂಟಿಂಗ್ ಅಂದಾಜು ತಯಾರುಮಾಡಿ ಈ ಸಾಲಿನ ಬಡ್ಜೆಟ್‌ನಲ್ಲಿ ಸೇರಿಸಿರುತೇವೆ ಎನ್ನುವ ಮಾತನ್ನು ಕೂಡ ಹೇಳಿದ್ದರು. ಆದರೆ ಪುಸ್ತಕ ನೋಡಿದರೆ ಅದನ್ನು ಕೈಬಿಟ್ಟಿರತಕ್ಕಂಥದ್ದು ಕಂಡುಬಂದಿತು. ಆದ್ದರಿಂದ ಸರ್ಕಾರದ ಹಿತದೃಷ್ಟಿಯಿಂದ ಮತ್ತು ಅಲ್ಲಿ ಆ ಕಟ್ಟಡದ ಒಳಗಡೆ ಕುಳಿತುಕೊಂಡು ಕೆಲಸ ಮಾಡತಕ್ಕಂಥ ಅಧಿಕಾರಿಗಳ ರಕ್ಷಣೆಯ ದೃಷ್ಟಿಯಿಂದ, ಸಾರ್ವಜನಿಕ ದೃಷ್ಟಿಯಿಂದ ಈ ಒಂದು ಕಟ್ಟಡದ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಈ ವರ್ಷದ ಬಜೆಟ್‌ನಲ್ಲಿ ಸೇರಿಸಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳಲು ಇಚ್ಛೆಪಡುತ್ತೇನೆ.

ಇನ್ನು ನೀರಾವರಿಯ ವಿಷಯದಲ್ಲಿ ಹೇಳವುದಾದರೆ ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದಂತೆ ಕಾಲುವೆ ಜಲಾನಯನ ಪ್ರದೇಶದಲ್ಲಿ ನೀರು ಇದೆ. ಅದನ್ನು ನಾವು ಆದಷ್ಟು ಪರಿಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು. ಹಿಂದಿನ ಸರ್ಕಾರ 28 ಕೋಟಿ ರೂಪಾಯಿ ಹಣವನ್ನು ಒದಗಿಸಿತ್ತು. ಸುಮಾರು 12 ಕೋಟಿ ರೂಪಾಯಿಗಳನ್ನು ಒಂದೇ ವರ್ಷದಲ್ಲಿ ಉಪಯೋಗಿಸಿತ್ತು. ಅದೇ ಪ್ರಮಾಣದಲ್ಲಿ ಉಪಯೋಗಿಸಬೇಕಾಗಿತ್ತೆಂದು ಹೇಳಿದರು. ಈಗಿನ ಸರ್ಕಾರ ನಾಲ್ಕುವರೆ ಕೋಟಿ ರೂಪಾಯಿಗಳನ್ನು ಇಟ್ಟಿರುತ್ತದೆ. 1974 ಕ್ಕೆ ತಮಿಳುನಾಡು, ಕೇರಳ, ಹಾಗೂ ಕರ್ನಾಟಕ ಸರ್ಕಾರಕ್ಕೆ ಆಗಿದ್ದ ಒಂದು ಒಪ್ಪಂದ ಮುಗಿಯಿತು ಈ ಒಂದು ಒಪ್ಪಂದ ಮುಗಿದು ಸುಮಾರು 9–10 ವರ್ಷಗಳಾದರೂ ಕೂಡ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗಲಿಲ್ಲ. ನಮ್ಮ ಉದ್ದೇಶವಾದರೂ ಕೂಡ, ಸರ್ಕಾರದ ಉದ್ದೇಶವಾದರೂ ಕೂಡ, ಜನತೆಯ ಉದ್ದೇಶವಾದರೂ ಕೂಡ, ಆದಷ್ಟು ಜಾಗ್ರತೆ ಕಾವೇರಿ ಜಲಾನಯನವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂಬುದೇ ಆಗಿರುತ್ತದೆ. ಬೆಂಗಾಡು ಜಮೀನನ್ನು ನೀರಾವರಿ ಮಾಡಿ ಖುಷ್ಕಿ ಜಮೀನನ್ನಾಗಿ ಮಾಡಬೇಕೆಂಬುದು ಎಲ್ಲರ ಒಂದು ಸರ್ವವಿಧವಾದ ಅಭಿಪ್ರಾಯವಾಗಿದೆ. ಈ ಒಂದು ನಿರ್ಣಯವನ್ನು ಕೂಡ ಕೊನೆಯಲ್ಲಿ ದಯವಿಟ್ಟು ನಮ್ಮ ವಿರೋಧ ಪಕ್ಷದ ನಾಯಕರು ಕೊಟ್ಟಂಥ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಸುಮಾರು 60–65 ಕೋಟಿ ರೂಪಾಯಿಗಳು ಕಾವೇರಿ ಜಲಾನಯನ ಪ್ರದೇಶಕ್ಕೆ ಖರ್ಚಾಗುವುದು ಇರುತ್ತದೆ. ಇದರಲ್ಲಿ ಹೇಮಾವತಿ ಎಡದಂಡೆ ನಾಲೆಯು ಇರುತ್ತದೆ. ಇದನ್ನು 1984 ನೇ ಇಸವಿಯ ಒಳಗೆ ಮುಗಿಸುತ್ತೇವೆಂದು ಭರವಸೆಯನ್ನು ಕೊಡಬೇಕು. ಇದು ಸರ್ಕಾರದ ಕರ್ತವ್ಯ ಎನ್ನುವ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳಿ ಇದಕ್ಕೆ ಹೆಚ್ಚು ಹಣವನ್ನು ಒದಗಿಸಿಕೊಡತಕ್ಕಂಥ ರಾಜ್ಯದ ಹಿತದೃಷ್ಟಿಯಿಂದ ಬಹು ಮುಖ್ಯವಾದಂಥದ್ದು ಎನ್ನುವ ಮಾತನ್ನೂ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ

ಇನ್ನು ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣ ಯೋಜನೆಯ ವಿಷಯದಲ್ಲಿ ನೊನ್ನೆ ತಾನೆ ಮೇಲ್ಮಟ್ಟದಲ್ಲಿ ಪ್ರಸ್ತಾಪಮಾಡಿರುತ್ತಾರೆ. ನೀರಾವರಿ ಮಂತ್ರಿಗಳನ್ನು ಒತ್ತಾಯಮಾಡಿ ಹೇಳುವುದೇನೆಂದರೆ ಕೇವಲ 197, ರಲ್ಲಿ ಈ ಒಂದು ಒಪ್ಪಂದವಾಗಿದ್ದರೂ ಕೂಡ 4–5 ವರ್ಷಗಳಲ್ಲಿ ಆಧುನೀಕರಣ ಯೋಜನೆಯನ್ನು ಮುಗಿಸುವುದಕ್ಕೆ ಸರ್ಕಾರ ಒಪ್ಪಿದ್ದರೂ ಕೂಡ ಮಂದಗತಿಯಲ್ಲಿ ನಡೆಯುತ್ತಿರುತ್ತದೆ. ಒಂದು ಸಂತೋಷದ ವಿಷಯವೇನೆಂದರೆ ಕಳೆದ ಒಂದು ಕೋಟಿ ಐವತ್ತು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದು ಈ ವರ್ಷದಲ್ಲಿ ಒಂದು ಕೋಟಿ ಹೆಚ್ಚುವರಿ ಹಣವನ್ನು ಸರ್ಕಾರ ಒದಗಿಸಿರುವುದಕ್ಕೆ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಇದೇ ವೇಗದಲ್ಲಿ ಆಧುನೀಕರಣ ಮುಗಿಯಬೇಕಾದರೆ ಇನ್ನೂ 35 ವರ್ಷಗಳ ಕಾಲ ಬೇಕಾಗುತ್ತದೆ. ಯಾವುದೇ ಒಂದು ಯೋಜನೆ 35 ವರ್ಷಗಳ ಕಾಲ 50 ವರ್ಷಗಳ ಕಾಲಕ್ಕೆ ಮುಗಿದರೆ ಆ ಪ್ರದೇಶದ ರೈತರಿಂದ ಸರ್ಕಾರಕ್ಕೆ ಎಷ್ಟರ ಮಟ್ಟಿಗೆ ನೆರವು ಬರುತ್ತದೆ ಎನ್ನುವುದನ್ನೂ ಕೂಡ ಈ ಸಂದರ್ಭದಲ್ಲಿ ಯೋಚನೆಮಾಡಬೇಕಾಗುತ್ತದೆ. ಕನಿಷ್ಟ ಪಕ್ಷ 4–5 ವರ್ಷಗಳಲ್ಲಿ 65 ಕೋಟಿ ರೂಪಾಯಿಗಳ ಅಂದಾಜನ್ನು ಮುಗಿಸಲು ದೊಡ್ಡ ಪ್ರಮಾಣದಲ್ಲಿ ಕೆಲಸ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಕೃಷಿ ವಲಯವನ್ನು ತೆಗೆದುಕೊಂಡರೆ ಈ ವಿಷಯದಲ್ಲಿ ನಮ್ಮ ಕರ್ನಾಟಕ ರಾಜ್ಯದ ರೈತರು ಸಂಘದ ಪದಾಧಿಕಾರಿಗಳು ನೆನ್ನೆ ಮೊನ್ನೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದನ್ನು ಏತಕ್ಕೋಸ್ಕರವಾಗಿ ಹೇಳುತ್ತಿದ್ದೇನೆಂದರೆ ಜನತಾ ಸರ್ಕಾರ ಅಧಿಕಾರಕ್ಕೆ ಬರಬೇಕಾದರೆ ರಾಜ್ಯದ ರೈತರೇ ಅಧಿಕಾರಕ್ಕೆ ತಂದು ಕುಳಿಸಿದ್ದಾರೆಂದರೆ ತಪ್ಪಾಗಲಾರದು. ಆದರೆ ಈವತ್ತಿನ ದಿವಸ ರೈತನಿಗೆ ಏನು ಅನುಕೂಲವಾಗಿದೆ ಎಂಬುದನ್ನು ಬಹಳ ಸಂಕಟದಿಂದ ಹೇಳಬೇಕಾಗಿದೆ. ಕಳೆದ 2–3 ವರ್ಷಗಳಿಂದ ಅಚಲವಾದ ನಂಬಿಕೆಯನ್ನಿಟ್ಟುಕೊಂಡು ಸತತವಾಗಿ ರಾಜ್ಯದ ರೈತರು ಯಾವ ಪಕ್ಷಕ್ಕೂ ಸೇರದೆ ಪಕ್ಷಾತೀತವಾಗಿ ಹೋರಾಟ ಮಾಡಿಕೊಂಡು ಬಂದಿರತಕ್ಕಂಥವರಿಗೆ ಸರ್ಕಾರ ಕೊಟ್ಟಿರತಕ್ಕಂಥವರ ಬಹಳ ನಿರಾಶಾದಾಯಕವಾಗಿದೆ. ಅವರ ತಲೆಯಮೇಲೆ ಚಪ್ಪಡಿ ಎಳೆದಂತಾಗಿದೆ. 35 ಕೋಟಿ ರೂಪಾಯಿಗಳನ್ನು ಪರಿಹಾರ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ಪ್ರಾಯೋಗಿಕವಾಗಿ ನೋಡುವುದಾದರೆ ಮೂರು ಕೋಟಿ ರೂಪಾಯಿಗಳೂ ಕೂಡ ಅವರು ದೊರಕಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ, 30–6–83 ರೊಳಗಾಗಿ ಯಾರು ಸಹಕಾರಿ ಸಂಘಗಳಲ್ಲಿ ಸಾಲಗಾರರಾಗಿರುತ್ತಾರೋ; ಅವರು ಪೂರ್ತಿ ಹಣವನ್ನು ಪಾವತಿ ಮಾಡಿದರೆ ಅವರಿಗೆ ಪೂರ್ಣವಾಗಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ಏನು ಸ್ವಾಮಿ ಇದು ತಾವೇ ಬಜೆಟ್‌ನಲ್ಲಿ ಹದಿನಾರು ಜಿಲ್ಲೆಗಳು ಬರಗಾಲಕ್ಕೆ ಸಿಕ್ಕಿ ನರಳುತ್ತಿದೆ ಎಂದು ಹೇಳಿದ್ದೀರಿ. ಈ ಹದಿನಾರು ಜಿಲ್ಲೆಗಳಲ್ಲಿರತಕ್ಕಂಥ ರೈತರು 1982–83 ರ ಒಳಗೆ ಸಾಲವನ್ನು ತೀರಿಸುವುದಕ್ಕೆ ಸಾಧ್ಯವೇ ಎನ್ನುವುದನ್ನು ತಾವು ಯೋಚನೆಮಾಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮುಂಡ್ಯ ಜಿಲ್ಲೆಯವರು ತೀರಿಸಬಹುದು.

ಶ್ರೀ ಹೆಚ್. ಡಿ. ಚೌಡಯ್ಯ.—ಮಾನ್ಯ ಸಹಕಾರಿ ಸಚಿವರಿಗೆ ಹೇಳುತ್ತಿದ್ದೇನೆ, ದೊಡ್ಡ ರೈತರಿಗೆ ರಿಯಾಯಿತಿ ಕೊಡುವುದರ ಬದಲಾಗಿ, ಸಣ್ಣ ರೈತರು, ಮಧ್ಯಮ ವರ್ಗದ ರೈತರು ಯಾರು ಇದ್ದಾರೆ ಅವರಿಗೆ ಸಾಲವನ್ನು ವಜಾ ಮಾಡಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಚೌಡಯ್ಯನವರು ಸಹಕಾರಿ ಕ್ಷೇತ್ರದಲ್ಲಿ ದುಡಿದಿರತಕ್ಕಂಥವರು. ರೈತರು ಮಾಡಿರತಕ್ಕಂಥ ಸಾಲವನ್ನು ಸರ್ಕಾರ ವಜಾಮಾಡಬೇಕು ಎನ್ನುವ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಸರ್ಕಾರಿ ಕ್ಷೇತ್ರದಲ್ಲಿ ದುಡಿದಿರತಕ್ಕಂಥ ಅವರನ್ನೇ ಕೇಳುತ್ತೇನೆ ಯಾವ ಸರ್ಕಾರವೇ ಆಗಲಿ ಸಾಲವನ್ನು ವಜಾ ಮಾಡಲಿಕ್ಕೆ ಸಾಧ್ಯವೇ?

ಶ್ರೀ ಹೆಚ್. ಡಿ ಚೌಡಯ್ಯ.—ಇದರಲ್ಲಿ ಒಂದಾಗುತ್ತದೆ. ರೈತರು ಸಂಕಷ್ಟದಲ್ಲಿರುವಾಗ ಸರ್ಕಾರಿ ಸಂಘವೇ ಆಗಲಿ ಸಹಕಾರಿ ಬ್ಯಾಂಕಾಗಲೀ ಆಗಲಿ, ಕಮರ್ಷಿಯಲ್ ಬ್ಯಾಂಕ್‌ಗಳೇ ಆಗಲಿ ಸರ್ಕಾರ ಮುಖ್ಯವಲ್ಲ ಎನ್ನುವ ಮಾತನ್ನು ನೆನೆಯಬೇಕು ರೈತರು ಸಂಕಷ್ಟದಲ್ಲಿರತಕ್ಕಂಥ ಕಾಲದಲ್ಲಿ ಪರಿಹಾರ ಒದಗಿಸತಕ್ಕಂಥದ್ದು ಬಹಳ ಮುಖ್ಯ. ಬೇರೆ ದಿಕ್ಕಿನಲ್ಲಿ ಯೋಚನೆ ಮಾಡತಕ್ಕಂದದ್ದು ಸರಿಯಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಶ್ರೀ ಚೌಡಯ್ಯನವರು ನನ್ನ ಹಾಗೆ ಎಲ್ಲ ಸಹಕಾರಿ ರಂಗದಲ್ಲೂ ಕೆಲಸ ಮಾಡಿದವರಾಗಿರುತ್ತಾರೆ. ರೈತರಿಗೆ ಕೊಟ್ಟಿರತಕ್ಕಂಥ ಹಣ ಸಹಕಾರಿ ಸಂಘಗಳ ಮುಖಾಂತರ ಕೊಟ್ಟಿರತಕ್ಕಂಥ ಹಣ ಈ ಹಣವನ್ನು ಸರ್ಕಾರದವರು ಕೊಟ್ಟಿಲ್ಲ ಶಾರ್ಟ್‌ಟರ್ಮ್ ಲೋನ್, ಲಾಂಗ್ ಟರ್ಮ್ ಲೋನ್, ಜಿಲ್ಲಾ ಬ್ಯಾಂಕುಗಳಿಂದ ಅಪೆಕ್ಸ್ ಬ್ಯಾಂಕುಗಳಿಂದ ಮತ್ತು ರಿಸರ್ವ್ ಬ್ಯಾಂಕ್‌ನಿಂದ ಕೊಟ್ಟಿರುತ್ತಾರೆ ಇವೆಲ್ಲಾ ಬ್ಯಾಂಕ್‌ಗಳು ತಮ್ಮ ಶಕ್ತಿ ಮೀರಿ ಕೊಟ್ಟಿರುತ್ತಾರೆ. ಶಾರ್ಟ್ ಟರ್ಮ್ ಲೋನ್ 24–25 ಪರ್ಸೆಂಟ್ ಕೊಟ್ಟಿರುತ್ತಾರೆ. ಲಾಂಗ್‌ಟರ್ಮ್ ಲೋನ್ ಸುಮಾರು 12 ಪರ್ಸೆಂಟ್ ಕೊಟ್ಟಿರುತ್ತಾರೆ. ನಮ್ಮ ರಾಜ್ಯದಲ್ಲಿ ಸುಮಾರು 36 ಲಕ್ಷ ಅಗ್ರಿಕಲ್ಚರ್ ಫ್ಯಾಮಿಲಿ ಇದೆ. ಒಂದು ವೇಳೆ ರೈತರಿಗೆ ಕೊಟ್ಟಿರತಕ್ಕಂಥ ಸಾಲವನ್ನು ವಜಾ ಮಾಡಿದರೆ ಮುಂದೆ ಹಣವನ್ನು ಒದಗಿಸುವುದಾದರು ಹೇಗೆ ಎಂಬುದನ್ನು ತಾವು ಯೋಚನೆ ಮಾಡಬೇಕು.

ತಮಗೆಲ್ಲಾ ತಿಳಿದಿರುವಂತೆ ಸಾಲವನ್ನಾಗಲೀ ಮತ್ತು ಸಾಲದ ಮೇಲಿನ ಬಡ್ಡಿಯನ್ನಾಗಲೀ ನ್ಯಾಷನಲ್ ಅಗ್ರಿಕಲ್ಚರಲ್ ರೀ-ಫೈನಾನ್ಸ್ ಕಾರ್ಪೊರೇಷನ್ ಅವರು ವಜಾ ಮಾಡುವುದಕ್ಕೆ ಇಷ್ಟಪಡುವುದಿಲ್ಲ ಒಂದು ವೇಳೆ ಮಾಡಿದರೆ you are doing unilater ಆದ್ದರಿಂದ ಅದು ನಿಮ್ಮ ಹಣೆಬರಹ, ನಾವೇನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಇದೇ ವಿಚಾರದಲ್ಲಿ ಈಗ ತಮಿಳುನಾಡಿನಲ್ಲಿ ಏನಾಗಿದೆ, ಮಹಾರಾಷ್ಟ್ರದಲ್ಲಿ ಏನಾಗಿದೆ ಎಂಬುದು ತಮಗೆ ಗೊತ್ತಿದೆ. ಆದ್ದರಿಂದ ತಾವು ಇವನ್ನೆಲ್ಲಾ ಯೋಚನೆ ಮಾಡಿ ಸಲಹೆ ಕೊಟ್ಟರೆ ಪರಿಶೀಲನೆ ಮಾಡಬಹುದು.

ಶ್ರೀ ಎಚ್. ಡಿ ಚೌಡಯ್ಯ.—ಸನ್ಮಾನ್ಯ ಸಹಕಾರ ಮಂತ್ರಿಗಳು ಹೇಳಿದಂತೆ ರೈತರಿಗೆ ಕೊಡುವಂತಹ ಸಾಲದ ಮೂಲ ಯಾವುದೆಂಬುದು ನಮಗೆ ಗೊತ್ತಿದೆ. ಆದರೆ ಇವೊತ್ತಿನ ದಿವಸ ಈ ರಾಜ್ಯದ ರೈತರು ಒಕ್ಕೊರಲಿನಿಂದ ಕೆಲವು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟು ಒತ್ತಾಯ ಮಾಡುತ್ತಿರುವುದರಿಂದ ಮತ್ತು ಚಳುವಳಿ ಮಾಡುತ್ತಿರುವುದರಿಂದ ಅವರ ಜೊತೆಗೆ ನಾನೂ ಕೂಡ ಧ್ವನಿಗೂಡಿಸುತ್ತೇನೆ. ಇಲ್ಲಿ ಪ್ರತಿ ವರ್ಷವು ಸಾಲವನ್ನು ಮನ್ನಾ ಮಾಡುವ ಪರಿಸ್ಥಿತಿ ಬರುವುದಿಲ್ಲ. ಈಗಿನ ಬರದ ಸಂಧಿಗ್ಧ ಪರಿಸ್ಥಿತಿಯಲ್ಲಿ ಇರುವಂತಹ ಸಾಲದ ಬಾಕಿಯನ್ನು ಲೆಕ್ಕ ಹಾಕಿದರೆ 50 ಕೋಟಿ ಇಲ್ಲವೇ 60 ಕೋಟಿಯಾಗಬಹುದು ಆದ್ದರಿಂದ ಇದನ್ನು ಒಂದು ಸಲ ವಜಾ ಮಾಡಿ ಇನ್ನು ಮುಂದೆ ಈ ರೀತಿ ವಜಾ ಮಾಡುವುದಿಲ್ಲವೆಂದು ರೈತರಿಗೂ ತಿಳುವಳಿಕೆ ಕೊಡಬಹುದು ಈ ಕಾರಣದಿಂದ ಈಗ ದೊಡ್ಡ ರೈತರಿಗೂ ಸಹ ಏನು ಪರಿಹಾರ ಕೊಡಲು ಹೊರಟಿದ್ದೀರಿ, ಅದನ್ನು ವಾಪಸ್ ಪಡೆದು ಸಣ್ಣ ರೈತರ ಮತ್ತು ಅತಿ ಸಣ್ಣ ರೈತ ಸಾಲವನ್ನು ವಜಾ ಮಾಡಬೇಕೆಂದು ಹೇಳುತ್ತೇನೆ. ನೀರಾವರಿ ಪ್ರದೇಶದ ರೈತರಿಗೂ ಈ ಒಂದು ಪರಿಹಾರ ಸಿಗಬೇಕೆಂದು ನಾನು ಹೇಳುವುದಿಲ್ಲ. ಆದರೆ ಸಂಕಷ್ಟದಲ್ಲಿರುವವರಿಗೆ ಪರಿಹಾರ ಸಿಗಬೇಕೆಂದು ನಾನು ಬಿಚ್ಚು ಮನಸ್ಸಿನಿಂದ ಹೇಳುತ್ತಿದ್ದೇನೆ. ಇಂತಹವರಿಗೆ ಪರಿಹಾರ ದೊರಕಿಸಿಕೊಡುವುದು ಸರ್ಕಾರದ ಹೊಣೆಯಾಗಿದೆ.

ಇನ್ನು ಇಲ್ಲಿ ಏನು ಹೇಳಿದ್ದಾರೆಂದರೆ: 'ರೈತರು ತಮ್ಮ ಸಹಕಾರಿ ಸಾಲವನ್ನು ತೀರಿಸಲು ತನ್ನ

---

* ಈ ಚಿಹ್ನೆಯು ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂಬುದನ್ನು ಸೂಚಿಸುತ್ತದೆ.

ಕೃಷಿ ಉತ್ಪನ್ನವನ್ನು ಉಪಯೋಗಿಸಿಕೊಳ್ಳುವುದಾದರೆ, ಪ್ರಾಥಮಿಕ ಕೃಷಿ ಸಾಲ ನೀಡಿಕೆ ಸಂಘಗಳ ಮೂಲಕ ಮಾರಾಟ ಮಾಡಿದ ತಮ್ಮ ಕೃಷಿ ಉತ್ಪನ್ನದ ಮೌಲ್ಯದ ಶೇ. 5 ರಷ್ಟರವರೆಗೆ ಸರ್ಕಾರದಿಂದ ಪ್ರೋತ್ಸಾಹಕ ಸಬ್ಸಿಡಿ ನೀಡಿಕೆ ಎಂದು ಹೇಳಿದ್ದಾರೆ. ಆದರೆ ಇದನ್ನೂ ಕೂಡ ಕಾರ್ಯರೂಪದಲ್ಲಿ ತರಲಿಲ್ಲ ಸಾಧ್ಯವೇ ಎಂಬುದನ್ನು ನೋಡಬೇಕಾಗಿದೆ. ಏಕೆಂದರೆ ಕಳೆದ 30-40 ವರ್ಷಗಳಿಂದ ಹಳ್ಳಿಯಿಂದ ದಿಲ್ಲಿಯವರೆಗೆ ಇರುವಂತಹ ಸಹಕಾರ ಸಂಘಗಳ ಮೂಲಕ ಇದನ್ನು ಜಾರಿಗೆ ತರಬೇಕೆಂದು ಸತತವಾಗಿ ಪ್ರಯೋಗ ಮಾಡಿಕೊಂಡು ಬಂದರೂ ಸಹ ಅದನ್ನು ಕಾರ್ಯಗತ ಮಾಡಲು ಸಾಧ್ಯವಾಗದಿಲ್ಲ. **This linking of credit with marketing is totally a failure in this country unfortunately.** ಆದರೂ ಸಹ ಇವೊತ್ತಿನ ದಿವಸ ಇಲ್ಲಿ ತೋರಿಕೆಗೆ ಇದನ್ನು ಹೇಳಿದ್ದಾರೆ. ಆದರೆ ಇದು ಕಾರ್ಯಗತವಾಗುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಕಳೆದ ನಲವತ್ತು ವರ್ಷಗಳಿಂದ ಇದನ್ನು ಜಾರಿಗೆ ತರಲು ಸಾಧ್ಯವಾಗಲಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದರೆ ಮಾರ್ಕೆಟ್ ದರಕ್ಕಿಂತ 5 ಪರ್ಸೆಂಟ್ ಜಾಸ್ತಿ ಕೊಡುತ್ತೇವೆಂದು ಇಲ್ಲಿಯವರೆಗೆ ಯಾವ ಸರ್ಕಾರವೂ ಹೇಳಿರಲಿಲ್ಲ. ಅದೇ ರೀತಿ ಈ ಕೃಷಿ ಉತ್ಪನ್ನವನ್ನು ಕೊಳ್ಳುವಂತಹ ಈ ಹಿಂದಿನ ಸಹಕಾರಿ ಸಂಸ್ಥೆಗಳಿಗೆ ಎರಡು ಪರ್ಸೆಂಟ್ ಸಬ್ಸಿಡಿ ಕೊಡುತ್ತೇವೆಂದು ಯಾವ ಸರ್ಕಾರವೂ ಹೇಳಿರಲಿಲ್ಲ. ಈ ಬಗ್ಗೆ ಪ್ರಯತ್ನ ಮಾಡಿ ನೋಡೋಣ. ತಾಲ್ಲೂಕ್ ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಸೊಸೈಟಿಯವರೇ ಆಗಲೀ ಅಥವಾ ಬೇರೆ ಸೊಸೈಟಿಯವರೇ ಆಗಲೀ ಕೊಳ್ಳಲು ಮುಂದೆ ಬಂದರೆ ಅವರಿಗೆ ಅಲ್ಪಾವಧಿ ಸಾಲ ಕೊಟ್ಟು ಪ್ರೋತ್ಸಾಹ ನೀಡೋಣ.

ಶ್ರೀ ಎಚ್. ಡಿ. ಚೌಡಯ್ಯ.—ಸನ್ಮಾನ್ಯ ಮಂತ್ರಿಗಳು ಪ್ರಯೋಗ ಮಾಡಿ ನೋಡೋಣ ಎಂದು ಹೇಳಿದರು. ಆದರೆ ಕಳೆದ 40 ವರ್ಷಗಳಿಂದ ಪ್ರಯೋಗಮಾಡಿ ನೋಡಿದ್ದಾಗಿದೆ. ಆದ್ದರಿಂದ ಮತ್ತು ಮುಗ್ಧ ರೈತರ ಮೇಲೆ ಪ್ರಯೋಗ ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ನಾವು ಪ್ರಯೋಗ ಮಾಡುವುದರ ಮೂಲಕ ರೈತರಿಗೆ ತೊಂದರೆ ಕೊಡುತ್ತಿಲ್ಲ. ಇಲ್ಲಿ ನಾವು ಗಿನಿಪಿಗ್ಸ್ ಉಪಯೋಗ ಮಾಡುತ್ತಿಲ್ಲ. ಇದರಿಂದ ಯಾರಿಗೂ ನಷ್ಟವಿಲ್ಲ. ಏನಾದರು ಬಂದರೆ ಲಾಭ ಬರುತ್ತದೆ ಅಷ್ಟೆ.

ಶ್ರೀ ಎಚ್. ಡಿ. ಚೌಡಯ್ಯ.—ಇದು ಏನಿದ್ದರೂ ಕನ್ನಡಿಯೊಳಗಿನ ಗಂಟಾಗಿದೆ. ರೈತರಿಗೆ 36 ಕೋಟಿ ರೂಪಾಯಿಗಳಷ್ಟು ಪರಿಹಾರ ಕೊಡುತ್ತಿದ್ದೇವೆಂದು ಹೇಳುತ್ತಿರುವುದು ಸರಿಯಾದುದಲ್ಲ. ಸಂಕಷ್ಟದಲ್ಲಿರುವ ರೈತರನ್ನು ನಿಜವಾಗಿಯೂ ನೀವು ನಡುನೀರಿನಲ್ಲಿ ಕೈ ಬಿಡುತ್ತಿದ್ದೀರಿ. ಈ ವಿಚಾರದಲ್ಲಿ ಈಗಾಗಲೇ ಕರ್ನಾಟಕ ರಾಜ್ಯದ ರೈತ ಸಂಘದವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅವರ ಅಭಿಪ್ರಾಯ ಏನೇ ಇರಲಿ, ಈಗ ನಮ್ಮ ಮುಂದೆ ಶ್ರೀ ಬಂಗಾರಪ್ಪ ಸಮಿತಿ ವರದಿ ಮತ್ತು ಶ್ರೀ ಬೊಮ್ಮಾಯಿ ಸಮಿತಿ ವರದಿ ನಮ್ಮ ಮುಂದೆ ಇವೆ. ಈ ಎರಡೂ ವರದಿಗಳನ್ನು ಕ್ರೋಢೀಕರಿಸಿ ಹಾಗೂ ಪುನರ್ವಿಮರ್ಶೆ ಮಾಡಿ ನಿಜವಾಗಿಯೂ ರೈತರಿಗೆ ಅನುಕೂಲವಾಗುವಂತಹ ಪರಿಹಾರಗಳನ್ನು ಒದಗಿಸಬೇಕೆಂದು ಹೇಳುತ್ತೇನೆ. ಈ ರೀತಿ ಮಾಡಲು ಕಾಲ ಮೀರಿಲ್ಲ. ಆದ್ದರಿಂದ ದಯಮಾಡಿ ಇದರ ಕಡೆಗೆ ಗಮನಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಬೆಲೆಗಳನ್ನು ನಿಗದಿ ಮಾಡುವ ಬಗ್ಗೆ ಇಲ್ಲಿ ಖಚಿತವಾಗಿ ಹೇಳಿಲ್ಲ. ಮೊನ್ನೆ ತಾನೆ ಆಂಧ್ರದ ಮುಖ್ಯಮಂತ್ರಿಗಳು ಈ ವಿಷಯವನ್ನು ರೈತರಿಗೇ ಬಿಡಲಾಗಿದೆ ಎಂದು ಹೇಳಿದ್ದಾರೆ. ಅದರಂತೆ ಇಲ್ಲಿಯೂ ಸಹ ನೀವು ರೈತರಿಗೇ ಬಿಡಿ.

ಶ್ರೀ ಬಿ. ಎಲ್. ಗೌಡ.—ಇದು ಕೇಂದ್ರ ಸರ್ಕಾರದ ಕೈಯಲ್ಲಿದೆ.

ಶ್ರೀ ಎಚ್. ಡಿ. ಚೌಡಯ್ಯ.—ಆಂಧ್ರದ ಮುಖ್ಯ ಮಂತ್ರಿಗಳು ಪ್ರಕಟಣೆ ಮಾಡಿರುವಂತೆ ನೀವೂ ಮಾಡಿ.

ಶ್ರೀ ಬಿ. ಎಲ್. ಗೌಡ.—ಇವೊತ್ತು ವ್ಯವಸಾಯೋತ್ಪನ್ನಗಳ ಬೆಲೆ ನಿಗದಿ ಮಾಡುವ ಅಧಿಕಾರ ಕೇಂದ್ರದ ವ್ಯಾಪ್ತಿಯಲ್ಲಿದೆ. ಆದ್ದರಿಂದ ಆಂಧ್ರದವರು ಏನಾದರೂ ಮಾಡಿದರೆ ಅದು ತಪ್ಪು.

ಶ್ರೀ ಎಚ್. ಗಂಗಾಧರನ್.—ಹಾಗಿದ್ದರೆ ಕೇಂದ್ರವನ್ನು ಬದಲಾವಣೆ ಮಾಡೋಣ.

ಶ್ರೀ ಎಚ್. ಡಿ. ಚೌಡಯ್ಯ.—ಮಾನ್ಯ ವ್ಯವಸಾಯ ಮಂತ್ರಿಗಳು ಮತ್ತು ಮಾನ್ಯ ಸಹಕಾರ ಮಂತ್ರಿಗಳು ಕಟ್ಟಾ ವ್ಯವಸಾಯಗಾರರಾಗಿದ್ದಾರೆ ಮತ್ತು ನನ್ನ ಮಿತ್ರರೂ ಕೂಡ ಆಗಿದ್ದಾರೆ. ಈಗ ತಾವು ಮಂತ್ರಿಗಳಾದ ಮೇಲೆ ಈ ಬಗ್ಗೆ ಹಠಹಿಡಿದು ಕೂಡಬೇಡಿ.

ಶ್ರೀ ಆರ್. ಎಲ್. ಜಾಲಪ್ಪ.—ತಾವು ಕಳೆದ ಮೂರು ವರ್ಷಗಳಿಂದ ಈ ಕಡೆಯೇ ಇದ್ದಿರಿ. ಆಗ ನಿಮಗೆ ಈ ಹಿಂದಿನ ಮಂತ್ರಿಮಂಡಲವನ್ನು ಒಪ್ಪಿಸುವುದಕ್ಕಾಗಲಿಲ್ಲ. ಈಗ ನಮಗೆ ಹೇಳುತ್ತಿದ್ದೀರಿ.

ತಾವು ಮೊದಲು ರೈತರಾಗಿದ್ದು ಈಗ ಮಂತ್ರಿಗಳಾಗಿದ್ದೀರಿ. ಅದ್ದರಿಂದ ರೈತರಿಗೆ ಏನೇನು ಸಹಾಯ ಮಾಡಬೇಕೋ ಅದನ್ನೆಲ್ಲಾ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅದರ ಮೇಲೆ ತಾವು ಭರವಸೆ ಇಡಬಹುದು.

ಶ್ರೀ ಹೆಚ್. ಡಿ. ಚೌಡಯ್ಯ.—ನಾನು ಕಳೆದ 5 ವರ್ಷಗಳಿಂದ ಆ ಕಡೆ ಮತ್ತು ಈ ಕಡೆ ಕುಳಿತು ರೈತರ ಪರವಾಗಿ ಏನೇನು ಮಾತನಾಡಿದ್ದೇನೆಂಬುದೆಲ್ಲಾ ಪ್ರೊಸೀಡಿಂಗ್ಸ್‌ನಲ್ಲಿದೆ. ಅದನ್ನು ತಾವು ಬೇಕಾದರೆ ನೋಡಬಹುದು. ನಾನು ಪಕ್ಷಬೇಧವಿಲ್ಲದೆ ಕೇವಲ ಶಾಸಕನಾಗಿ ರೈತರಿಗೆ ಅನುಕೂಲವಾಗುವ ದಿಕ್ಕಿನಲ್ಲಿ ಮಾತನಾಡಿದ್ದೇನೆ. ಈ ವಿಚಾರದಲ್ಲಿ ನಾನು ಆಡಳಿತ ಪಕ್ಷ ಅಥವಾ ವಿರೋಧ ಪಕ್ಷ ಎಂಬತಕ್ಕಂಥ ಭಾವನೆಯನ್ನಿಟ್ಟುಕೊಂಡು ಇಲ್ಲಿಯೂ ಮಾತನಾಡಿಲ್ಲ ಮತ್ತು ಹೊರಗಡೆಯೂ ಮಾತನಾಡಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ರಾಜ್ಯದ ಹೆದ್ದಾರಿಗಳ ಮೇಲಿರುವ ಸೇತುವೆಗಳಿಗೆ ಸುಂಕ ವಿಧಿಸುವ ವಿಧೇಯಕದ ಅವಧಿ ಮುಗಿದಿರುವ ಕಾರಣ ಅದನ್ನು ಪುನಃ ಮುಂದಿಸಲು ಉದ್ದೇಶಿಸಲಾಗಿದೆ ಎಂದು ಇಲ್ಲಿ ಹೇಳಿದ್ದೀರಿ. ದಯವಿಟ್ಟು ಇದನ್ನು ತರಬೇಡಿ. ಅದನ್ನು ತಂದರೆ ನಾವು ವಿರೋಧ ಮಾಡುತ್ತೇವೆ.

ಇನ್ನು ವೃತ್ತಿತೆರಿಗೆಯನ್ನು ಶಾಸಕರ ಮೇಲೂ ತರುವುದರಲ್ಲಿ ಏನೇನೂ ಅರ್ಥವಿಲ್ಲ. ಈ ವೃತ್ತಿ ತೆರಿಗೆಯನ್ನೇ ರದ್ದು ಮಾಡುವುದಾಗಿ ತಾವು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಆದರೆ ಈ ಸರ್ಕಾರ ಇದನ್ನು ರದ್ದು ಮಾಡಲಿಲ್ಲವೆಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ ಆದ್ದರಿಂದ ನೀವು ಚುನಾವಣಾ ಸಮಯದಲ್ಲಿ ಜನತೆಗೆ ಕೊಟ್ಟ ಮಾತಿನ ಪ್ರಕಾರ ಇದನ್ನು ವಜಾ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಅತಿ ಪ್ರಾಮುಖ್ಯವಾದಂಥ ವಿಷಯವೆಂದರೆ, ಕಡುಬಡವರಿಗೆ ಮತ್ತು ಆರ್ಥಿಕವಾಗಿ ಹಿಂದುಳಿದಿರುವವರಿಗೆ ಮನೆಗಳನ್ನು ಕಟ್ಟಿಸಿಕೊಡುವ ಯೋಜನೆ ಏನಿದೆ, ಅದನ್ನು ಈಗಿನ ಸರ್ಕಾರದವರು ಮುಂದುವರಿಸಬೇಕು. 1981-82 ನೇ ಸಾಲಿಗೆ ಮಂಜೂರಾದಂಥ ಮನೆಗಳಿಗೆ ಹಣವನ್ನು ಇನ್ನೂ ಬಿಡುಗಡೆ ಮಾಡಬೇಕಾಗುತ್ತಿದೆ. 1982-83 ನೇ ಸಾಲಿಗೆ ಮಂಜೂರು ಮಾಡಲಾಗಿದ್ದ ಮನೆಗಳಿಗೆ ನೆನ್ನೆಯವರೆಗೆ ಒಂದು ಬಿಡಿಗಾಸನ್ನೂ ಬಿಡುಗಡೆ ಮಾಡಿಲ್ಲ. ಈ ವರ್ಷ ಕೊನೆಯಾಗಲು ಇನ್ನು 15 ದಿವಸಗಳು ಮಾತ್ರ ಉಳಿದಿದೆ.

ಶ್ರೀ ಆರ್. ಎಲ್. ಜಾಲಪ್ಪ.—1982-83 ನೇ ಸಾಲಿಗೆ ಸುಮಾರು ಒಂದು ಲಕ್ಷ ಎರಡು ಸಾವಿರ ಮನೆಗಳನ್ನು ಕಟ್ಟಲು ಈ ಹಿಂದಿನ ಸರ್ಕಾರದವರು ಮಂಜೂರಾತಿ ನೀಡಿದರೂ ಸಹ ಒಂದು ಬಿಡಿಗಾಸನ್ನೂ ಸಹ ಬಿಡುಗಡೆ ಮಾಡಲಿಲ್ಲ. ಇದು ನಮಗೆ ಬಂದಿರುವ ಕಷ್ಟ. ನೀವು ಕಷ್ಟಕಾಲದಲ್ಲಿ ಅಧಿಕಾರ ವಹಿಸಿಕೊಂಡಿದ್ದೀರಿ ಅದನ್ನು ಒಪ್ಪಿಕೊಳ್ಳೋಣ.

3-30 P. M.

ಶ್ರೀ ಬಿ. ಬೈರಪ್ಪಾಜಿ.—ಜನತಾ ಮನೆಗಳಿಗೆ ಹಣವನ್ನು ಮಂಜೂರು ಆದಮೇಲೆ ಕೊಟ್ಟಿಲ್ಲವೆಂದು ಮಾನ್ಯ ಜಾಲಪ್ಪನವರು ಹೇಳುತ್ತಿದ್ದಾರೆ. ಅದು ಸರಿಯಲ್ಲ, ಹಂತ ಹಂತವಾಗಿ ಕೊಡುತ್ತಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—ನಾನು ಹೇಳುತ್ತಿರುವುದು ನಿಜ. ತಾಲ್ಲೂಕು ಕಛೇರಿಗಳಲ್ಲಿ ಹೋಗಿ ರೆಕಾರ್ಡ್ ತೆಗೆಸಿನೋಡಿದರೆ ಗೊತ್ತಾಗುತ್ತದೆ. ಒಂದು ಕಾಸನ್ನೂ ರಿಲೀಸ್ ಮಾಡಿಲ್ಲ, ಇದು ಅಕ್ಷರಶಹ ನಿಜ.

ಶ್ರೀ ಎಚ್. ಡಿ. ಚೌಡಯ್ಯ.—ನಾನು ನಿಮ್ಮ ಚುನಾವಣಾ ಪ್ರಣಾಳಿಕೆಯನ್ನು ಓದಿದ್ದೇನೆ. ಕಾಂಗ್ರೆಸ್‌ನವರು ಅದು ಮಾಡಿಲ್ಲ, ಇದು ಮಾಡಿಲ್ಲವೆಂದು ಹೇಳಿದ್ದೀರಿ. ನೀವು ಅದನ್ನು ಸಂಪಾದಿಸಿ. 1982-83 ರಲ್ಲಿ ಮಂಜೂರಾದ ಯೋಜನೆಗಳಿಗೆ ನೀವು ಹಣವನ್ನು ರಿಲೀಸ್ ಮಾಡಿಲ್ಲ. 1983-84 ರ ಆಯವ್ಯಯ ಪತ್ರದಲ್ಲಿ ನಿಮ್ಮ ಕಾರ್ಯಕ್ರಮವೇನು ಎಂಬುದನ್ನು ಹೇಳಿಲ್ಲ. ರಾಜ್ಯದ ಜನರ ಪರಿಸ್ಥಿತಿ ಏನಾಗುತ್ತಿದೆ ? ಮಾನ್ಯ ಅರ್ಥಮಂತ್ರಿಗಳು ಬಡವರಿಗಾಗಿ ಕೈಗೊಂಡಿರತಕ್ಕ ಕೆಲಸ ಕಾರ್ಯಗಳ ಬಗ್ಗೆ ಅದು ಮೂರ್ನಾಲ್ಕು ವರ್ಷಗಳ ಹಿಂದಿನ ಕಾರ್ಯಕ್ರಮವಾಗಬಹುದು ಬಡವರಿಗಾಗಿ ಮನೆಗಳನ್ನು ಕಟ್ಟತಕ್ಕ ವಿಚಾರದಲ್ಲಿ ಶ್ವೇತಪತ್ರವನ್ನು ಹೊರಡಿಸಬೇಕು.

ಇನ್ನು ವೃದ್ಧಾಪ್ಯವೇತನ ಕೊಡುತ್ತಿದ್ದಾರೆ. ವೃದ್ಧಾಪ್ಯವೇತನ ಕೊಡುವ ವಿಚಾರದಲ್ಲಿ ಲೋಪದೋಷಗಳಿವೆ. ಬೆಳಿಗ್ಗೆ ಆಗುವುದರೊಳಗೆ ಮುದುಕ ಮುದುಕಿಯರು ನಮ್ಮ ಹತ್ತಿರ ಬರುತ್ತಾರೆ. ಗಂಡು ಮಕ್ಕಳು ಇಲ್ಲದಿದ್ದರೆ ಮಾತ್ರ ಅಂತಹವರಿಗೆ ವೃದ್ಧಾಪ್ಯವೇತನ ಕೊಡಬೇಕೆಂದು ನಿಯಮವನ್ನು ಇಟ್ಟುಕೊಂಡಿದ್ದಾರೆ. ಅವರು ಬಂದು ಹೇಳುತ್ತಾರೆ, ನನ್ನ ಮಗ ಇದ್ದ ಅವನು ಹೊರಟುಹೋಗಿ 20-30 ವರ್ಷಗಳಾಯಿತು ನಮಗೆ ಸಿಕ್ಕಿಲ್ಲವೆಂದು ಹೇಳುತ್ತಾರೆ, ಆ ವಿಷಯ ನಮಗೂ ಗೊತ್ತಿರುತ್ತದೆ. ಗಂಡು ಮಕ್ಕಳು ಇಬ್ಬರು ಇರುತ್ತಾರೆ, ಇಬ್ಬರೂ ಮನೆ ಬಿಟ್ಟು ಹೊರಟುಹೋಗಿರುತ್ತಾರೆ ಇಂತಹ ವಿಷಯಗಳಲ್ಲಿ ನಿಯಮವನ್ನು ಸಡಿಲಿಸಿ ಅವರಿಗೂ ವೃದ್ಧಾಪ್ಯವೇತನ ನೀಡತಕ್ಕ ವ್ಯವಸ್ಥೆಯಾಗಬೇಕು.

ಛೇರ್ಮನ್.—ಬೆಂಗಳೂರು ನಗರದಲ್ಲಿ ಅಂತಹ ಕೇಸುಗಳು ಇದ್ದರೆ ಅದನ್ನು ರೆವಿನ್ಯೂ ಇನ್ಸ್‌ಪೆಕ್ಟರ್ ಮಹಜರ್ ಮಾಡಿ ಸರ್ಟಿಫಿಕೇಟ್ ಕೊಟ್ಟರೆ ಅಂತಹವರಿಗೆ ವೃದ್ಧಾಪ್ಯವೇತನ ಕೊಡಲಾಗುತ್ತಿದೆ.

ಶ್ರೀ ಎಚ್. ಡಿ. ಚೌಡಯ್ಯ.—ಹಾಗಾದರೆ ರೆವಿನ್ಯೂ ಇನ್ಸ್‌ಪೆಕ್ಟರ್‌ಗಳಿಗೆ ಸಕಾಲದಲ್ಲಿ ಕೊಡಿ. ಈ ಆಯವ್ಯಯಪತ್ರ ರಾಜ್ಯದ ಜನತೆಗೆ ಸಮಗ್ರವಾದಂತಹ ಸರ್ವತೋಮುಖವಾದ ಬಜೆಟ್ ಅಲ್ಲ. ಕರ್ನಾಟಕದ ರೈತರನ್ನು ನಡುನೀರಿನಲ್ಲಿ ಬಿಟ್ಟಿದ್ದೀರಿ. ರೈತರ ಕಷ್ಟಗಳನ್ನು ನಿವಾರಿಸತಕ್ಕ ಕಾಲ ಇನ್ನೂ ಮೀರಿಲ್ಲ, ಜನರಿಗೆ ಅನುಕೂಲವನ್ನು ದೊರಕಿಸಿ ಕೊಡಿ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಮಾನ್ಯ ಉಪಾಧ್ಯಕ್ಷರೇ ಮಾನ್ಯ ಅರ್ಥ ಸಚಿವರ ಭಾಷಣದಲ್ಲಿ ಹೇಳಿರುವಹಾಗೆ ಜನಗಳ ನಿರೀಕ್ಷೆಯಂತೆ ಜನತಾ ಪಕ್ಷ ಅಧಿಕಾರಕ್ಕೆ ಬಂದಮೇಲೆ ಬಹಳ ದೊಡ್ಡದಾದ ಇಲ್ಲಿಯವರೆಗೆ ಸಾಧನೆ ಮಾಡದೇ ಇರತಕ್ಕ ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವ ಅಭಿಪ್ರಾಯ ಅವರ ಆಸೆ ಆ ರೀತಿ ಇದೆ. ಅವರ ಆಸೆಗೆ ತಕ್ಕಂತೆ ಇವತ್ತಿನ ಪರಿಸ್ಥಿತಿಯಲ್ಲಿ ಸಾಧ್ಯವೇ ಎನ್ನುವುದನ್ನು ನಾನು ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊಟ್ಟ ಮೊದಲು ನಮ್ಮ ರಾಜ್ಯದ ವಿಶೇಷ ಪರಿಸ್ಥಿತಿ ಏನೆಂದರೆ ದಕ್ಷಿಣದ ಗುಂಡ್ಲುಪೇಟೆಯಿಂದ ಉತ್ತರದ ಸೋಲ್ಲಾಪುರದ ವರೆಗೆ ಆಗಿಂದಾಗ್ಗೆ ಕ್ಷಾಮ ಬರತಕ್ಕ ಪ್ರದೇಶಗಳು ಇವೆ. ಮಧ್ಯೆ ಮಧ್ಯೆ ದೊಡ್ಡ ದೊಡ್ಡ ಕಾಮಗಾರಿಗಳು ಇರುವುದರಿಂದ ಅಲ್ಲಿ ಕ್ಷಾಮ ಇದರೂ ನೋಡುವವರಿಗೆ ಗೊತ್ತಾಗುವುದಿಲ್ಲ. ಉದಾಹರಣೆಗೆ ಗುಂಡ್ಲುಪೇಟೆಯಿಂದ ಹೊರಟರೆ ಮೈಸೂರು ಮಂಡ್ಯ ಭಾಗದಲ್ಲಿ ನೀರಾವರಿ ಇರುವಂತಹ ಪ್ರದೇಶಗಳು ಇವೆ. ಅಲ್ಲಿ ಕ್ಷಾಮ ಇಲ್ಲ ಎನ್ನುವ ಹಾಗೆ ಕಾಣುತ್ತದೆ, 40 ವರ್ಷಗಳ ಹಿಂದೆ ಅದೇ ಮಂಡ್ಯ ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತಿದ್ದರೆ ಜನಗಳು ಹೇಗಿದ್ದರು ? ಅಷ್ಟೆ ಕಷ್ಟದಲ್ಲಿದ್ದ ಪ್ರದೇಶ ಉತ್ತರಕ್ಕೆ ಹೋದಾಗ ತುಂಗಭದ್ರಾ ಅಣೆಕಟ್ಟು ಇರುವುದರಿಂದ ಅಲ್ಲೂ ಸ್ವಲ್ಪಭಾಗ ನೀರಾವರಿ ಪ್ರದೇಶವಾಗಿದೆ. ಅಲ್ಲಿಂದ ಮುಂದಕ್ಕೆ ಹೋದರೆ ಯಥಾಪ್ರಕಾರ ಒಣ ಪ್ರದೇಶ ಅಲ್ಲಿನ ಜನಗಳು ಬಹಳ ಸಂಕಷ್ಟದಲ್ಲಿದ್ದಾರೆ. ಕುಡಿಯುವ ನೀರು ಸಹ ಇಲ್ಲ, ದನಗಳಿಗೆ ಮೇವೂ ಇಲ್ಲ. ಕುಡಿಯುವ ನೀರಿನ ಬಗ್ಗೆ ಈ ಸರ್ಕಾರ ಮಾಡಿದ ತಕ್ಕ ಪ್ರಯೋಜನ ಶ್ಲಾಘನೀಯವಾಗಿದೆ. ಮೊನ್ನೆ ತಾನೇ ಅಧಿಕಾರಕ್ಕೆ ಬಂದಿದ್ದಾರೆ. ಇವರು ಅಧಿಕಾರಕ್ಕೆ ಬಂದ ಕೂಡಲೇ ಕುಡಿಯುವ ನೀರಿಗಾಗಿ ಸುಮಾರು 150ರ ಮೇಲೆ ರಿಗ್ ಯಂತ್ರಗಳನ್ನು ತೆಗೆದುಕೊಂಡು ಕುಡಿಯುವ ನೀರು ಇಲ್ಲದೇ ಇರುವ ಸ್ಥಳಗಳಿಗೆ ಕುಡಿಯುವ ನೀರನ್ನು ದೊರಕಿಸಿರುವುದರಿಂದ ನೀರಿನ ಅಭಾವ ಸ್ವಲ್ಪ ಸುಧಾರಿಸಿದೆ, ಇಲ್ಲಿಯವರೆಗೂ ಕೊಳವೆ ಬಾವಿಗಳನ್ನು ತೆಗೆಯುವುದರಲ್ಲಿ ಬಹಳ ಲೋಪದೋಷಗಳು ಕಂಡು ಬರುತ್ತಿದ್ದೊ. 120–150 ಅಡಿ ಆಳ ಬಾವಿ ತೆಗೆಯುವ ಕಡೆ 70–80 ಅಡಿ ತೆಗೆದರೆ ಅದನ್ನು ನೋಡತಕ್ಕಂತಹ ವ್ಯವಸ್ಥೆ ಇರಲಿಲ್ಲ. ಕೊಳವೆ ಬಾವಿಗೆ ಪೈಪನ್ನು 100 ಅಡಿ ಹಾಕುವ ಕಡೆ 40 ಅಡಿ ಪೈಪನ್ನು ಹಾಕಿದ್ದಾರೆ. ಅಂತಹ ಕಡೆಗಳಲ್ಲಿ ವಿಚಾರಣೆ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಂಡ ಹಾಗೆ ಕಾಣುವುದಿಲ್ಲ, ಹಿಂದಿನ ಸರ್ಕಾರ ಕೊಳವೆ ಬಾವಿಗಳನ್ನು ತೋಡತಕ್ಕ ಸಂದರ್ಭದಲ್ಲಿ ಇದನ್ನೆಲ್ಲಾ ವಿಚಾರಣೆ ಮಾಡುತ್ತಿತ್ತೊ ಇಲ್ಲವೋ ಗೊತ್ತಿಲ್ಲ. ಇರತಕ್ಕ ತೊಂದರೆಗಳನ್ನು ಗಮನಿಸಿದಾಗ ಮಾಡುತ್ತಿರಲಿಲ್ಲವೆಂದು ಕಾಣುತ್ತದೆ. ಹಿಂದೆ ಹಾಕಿರತಕ್ಕ ಕೊಳವೆ ಬಾವಿಗಳು ಕೆಟ್ಟುಹೋಗುತ್ತಿವೆ. ಆ ಕೊಳವೆ ಬಾವಿಗಳಲ್ಲಿ ನೀರಿನ ಜೊತೆ ಮಣ್ಣು ಬರುವ ಪರಿಸ್ಥಿತಿ ಇದೆ. ಗಟ್ಟಿ ನೆಲ ಸಿಗುವವರೆಗೆ ಕೇಸಿಂಗ್ ಪೈಪು ಹಾಕುತ್ತಿರಲಿಲ್ಲ.

ಶ್ರೀ ಸಿ. ಭೈರೇಗೌಡ.—ಕೋಲಾರ ಜಿಲ್ಲೆಯಲ್ಲಿ ಕೊಳವೆ ಬಾವಿಗಳನ್ನು ತೋಡುತ್ತಿದ್ದಾರೆ. ಅಲ್ಲಿರತಕ್ಕ ಜೂನಿಯರ್ ಇಂಜಿನಿಯರ್ ಬೆಂಗಳೂರಿನಲ್ಲಿ ಮನೆ ಕಟ್ಟುತ್ತಿದ್ದಾರೆ ಅವರ ಮನೆ ಮುಂದೆ ಕೊಳವೆಬಾವಿಯ ಪೈಪುಗಳು ಇದ್ದವು. ಅದೇ ರೀತಿ ಸೂಪರ್‌ಇನ್‌ಟೆಂಡಿಂಗ್ ಇಂಜಿನಿಯರ್ ಮತ್ತು ಚೀಫ್ ಇಂಜಿನಿಯರ್ ಮನೆಗಳನ್ನು ಜಪ್ತಿಮಾಡುತ್ತಾರೆ, ಅವರ ಮನೆಗಳಲ್ಲಿ 30-40 ಲಕ್ಷ ರೂಪಾಯಿ ಹಣ ಸಿಗುತ್ತದೆ. ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನ ಉದ್ದೇಶವಾದರೂ ಇಷ್ಟೆ, ಲೋಪದೋಷಗಳಿಗೆ ಸಂಬಂಧಪಟ್ಟ ಅಧಿಕಾರಿಗಳನ್ನು ತನಿಖೆಮಾಡಿ ಅವರಿಗೆ ಶಿಕ್ಷೆ ಆಗಬೇಕಾಗಿತ್ತು ಎಂದು ನಾನು ಭಾವಿಸುತ್ತೇನೆ. ಮುಖ್ಯಮಂತ್ರಿಗಳು ಇನ್ನೊಂದು ಮಾತು ಹೇಳಿದ್ದಾರೆ. ಏನು ಹೇಳಿದ್ದಾರೆಂದರೆ ಕ್ಷಾಮ ಪರಿಹಾರಕ್ಕೆ ಒಂದು ತುರ್ತು ಬೋರ್ಡನ್ನು ರಚನೆ ಮಾಡಬೇಕು ಎನ್ನುವ ವಿಚಾರವನ್ನು ತಿಳಿಸುತ್ತಾ ಈ ವಿಚಾರವನ್ನೂ ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆಂದೂ, ಕ್ಷಾಮ ಪರಿಹಾರಕ್ಕೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಅದನ್ನು ವಿಚಾರಮಾಡಿ ಆಗಿಂದಾಗ್ಗೆ ಕಾರ್ಯಗತ ಮಾಡತಕ್ಕಂತಹ ವ್ಯವಸ್ಥೆ ಮಾಡುವುದಕ್ಕೋಸ್ಕರ

ಒಂದು ಕಾಯಂ ಮಂಡಳಿಯನ್ನು ಏರ್ಪಾಡು ಮಾಡಬೇಕೆಂದು ಹೇಳಿದ್ದಾರೆ. ಕ್ಷಾಮ ಬಂದಾಗ ಕೇವಲ ಆಹಾರ ಧಾನ್ಯಗಳನ್ನು ಒದಗಿಸಿ ಕೊಟ್ಟರೆ ಸಾಲದು, ಅಲ್ಲಿ ಕೆಲವೊಂದು ಕೆಲಸ ಕಾರ್ಯಗಳನ್ನು ಮಾಡಿದರೆ ಕಾಲದು ಕ್ಷಾಮಪೀಡಿತ ಪ್ರದೇಶಗಳಲ್ಲಿ ಮತ್ತೆ ಕ್ಷಾಮ ಬಾರದೆ ಇರುವ ಹಾಗೆ ಶಾಶ್ವತವಾದ ಒಂದು ಯೋಜನೆಯನ್ನು ಹಾಕಿ ತೊಂದರೆಯನ್ನು ತಪ್ಪಿಸಬೇಕು ಎನ್ನುವ ಗುರಿ ಇದೆ ಎಂದು ಹೇಳಿದ್ದಾರೆ. ಮೊಟ್ಟ ಮೊದಲನೆಯದಾಗಿ ನೀರಾವರಿ ಸೌಲಭ್ಯಗಳನ್ನು ಒದಗಿಸಿಕೊಡತಕ್ಕದ್ದು. ನಮ್ಮ ರಾಜ್ಯದಲ್ಲಿ ಹೇಮಾವತಿ ನೀರಿನಿಂದ ಕೆಲವು ಭಾಗಗಳಿಗೆ ನೀರನ್ನು ಒದಗಿಸಿ ತೊಂದರೆಯನ್ನು ತಪ್ಪಿಸಬಹುದು ಅದೇ ರೀತಿ ಅಪ್ಪರ್ ಕೃಷ್ಣಾದಿಂದ ಕೆಲವು ಭಾಗಗಳಿಗೆ ನೀರನ್ನು ಒದಗಿಸಿ ಇರತಕ್ಕ ತೊಂದರೆಯನ್ನು ತಪ್ಪಿಸಬಹುದು. ತುಂಗಭದ್ರಾ ಅಣೆಕಟ್ಟು ನೀರಿನಿಂದ ಕೆಲವು ಭಾಗಗಳಿಗೆ ನೀರನ್ನು ಒದಗಿಸಬಹುದು. ಹೀಗೆ ಹಲವಾರು ದೊಡ್ಡ ದೊಡ್ಡ ನೀರಾವರಿ ಅಣೆಕಟ್ಟುಗಳಿಂದ ನೀರನ್ನು ಒದಗಿಸಿ ಇರತಕ್ಕ ತೊಂದರೆಯನ್ನು ನಿವಾರಣೆ ಮಾಡಬಹುದು. ಅದಕ್ಕಾಗಿ ಒದಗಿಸಿರತಕ್ಕ ಹಣ ಬಹಳ ಕಡಿಮೆ ಎಂದು ನನ್ನ ಭಾವನೆ.

ಸ್ವಾಮಿ ತಾವು ಇವತ್ತು ಯಾವುದಾದರೊಂದು ಬಾಬಿನಲ್ಲಿ ಒಂದು 4 ಕೋಟಿ ರೂಪಾಯಿಗಳು ಅಥವಾ 10 ಕೋಟಿ ರೂಪಾಯಿಗಳನ್ನು ಜಾಸ್ತಿ ಮಾಡಿದರೆ ಅದರಿಂದ ರೈತರಿಗೆ ಏನೂ ಪ್ರಯೋಜನವಾಗುವುದಿಲ್ಲ. ಆದರೆ ನಮ್ಮ ಪಕ್ಕದ ರಾಜ್ಯವಾದ ಆಂಧ್ರ ಪ್ರದೇಶದಲ್ಲಿ ನಾಗಾರ್ಜುನ ಸಾಗರದ ಡ್ಯಾಮ್‌ಗೆ ಬೇಕಾದಷ್ಟು ಹಣವನ್ನು ಖರ್ಚು ಮಾಡಿ ಅಲ್ಲಿನ ರೈತರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಹೇಮಾವತಿ, ತುಂಗಭದ್ರಾ, ಅಪ್ಪರ್‌ಕೃಷ್ಣಾ, ಕಬಿನಿ ಹಾರಂಗಿ ಇತ್ಯಾದಿ ಜಲಾಶಯನಗಳಿಗೆ ನಮ್ಮ ಸರ್ಕಾರದವರು ಹೆಚ್ಚು ಹೆಚ್ಚು ಹಣವನ್ನು ಒದಗಿಸಿಕೊಟ್ಟು ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸಿದರೆ ಆಗ ನಮ್ಮ ರೈತರು ಪಡತಕ್ಕಂಥ ಶ್ರಮವನ್ನು ಕೇವಲ 5-6 ವರ್ಷಗಳಲ್ಲಿ ತಪ್ಪಿಸಬಹುದೆಂದು ನನ್ನ ಭಾವನೆ. ಆದ್ದರಿಂದ ನಮ್ಮ ಸರ್ಕಾರದವರು ನೀರಾವರಿ ಸೌಲಭ್ಯಗಳಿಗೆ ಹೆಚ್ಚು ಹೆಚ್ಚು ಹಣವನ್ನು ಒದಗಿಸಿಕೊಡಬೇಕೆಂದು ಸಲಹೆ ಮಾಡುತ್ತೇನೆ.

ಇದೇ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಾದರೆ ಹೇಮಾವತಿ ಮತ್ತು ಕಾವೇರಿ ನೀರಿನ ವಿಷಯದಲ್ಲಿರತಕ್ಕಂಥ ಒಂದು ದೊಡ್ಡ ಪ್ರಶ್ನೆಯನ್ನು ನಮ್ಮ ಸರ್ಕಾರ ಧೈರ್ಯದಿಂದ ಎದುರಿಸಬೇಕಾಗಿದೆ. ತಾವು ಈ ಒಂದು ಪರಿಸ್ಥಿತಿಯನ್ನು ಎದುರಿಸದೆಹೋದರೆ ಮುಂದೆ ತಾವು ಒಂದು ಶಾಶ್ವತವಾದ ಅಪಕೀರ್ತಿಗೆ ಗುರಿಯಾಗಬೇಕಾಗುತ್ತದೆ ಎನ್ನುವ ಒಂದು ಎಚ್ಚರಿಕೆಯಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಕೊಡ ಬಯಸುತ್ತೇನೆ. ನಮ್ಮ ಕರ್ನಾಟಕ ರಾಜ್ಯಕ್ಕೂ ಮತ್ತು ಮದ್ರಾಸ್ ರಾಜ್ಯಕ್ಕೂ ಈ ನೀರಿನ ವಿಷಯದಲ್ಲಿ ಒಂದು ದೊಡ್ಡ ಸಮಸ್ಯೆಯುಂಟಾಗಿದೆ. ಈ ಸಮಸ್ಯೆಯನ್ನು 1974 ನೇ ಇಸವಿಯಲ್ಲಿ ದಿವಂಗತ ಶ್ರೀಮಾನ್ ದೇವರಾಜ ಅರಸ್‌ರವರು ಬಹಳ ಧೈರ್ಯದಿಂದ ಎದುರಿಸಿದ್ದಾರೆ. ಇಲ್ಲದೆ ಹೋಗಿದ್ದರೆ ನಮ್ಮ ರಾಜ್ಯದ ರೈತರಿಗೆ ಇದರಿಂದ ಬಹಳ ತೊಂದರೆಯಾಗುತ್ತಿತ್ತು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿರುವಂಥ ಕಬಿನಿ, ಹಾರಂಗಿ, ಹೇಮಾವತಿ, ತುಂಗಾ, ಕೃಷ್ಣಾ ಜಲಾಶಯಗಳಿಗೆ ಹೆಚ್ಚು ಹೆಚ್ಚು ಹಣವನ್ನು ಒದಗಿಸಿಕೊಟ್ಟು ನಮ್ಮ ರಾಜ್ಯದ ಅಭಿವೃದ್ಧಿಗೆ ಸರ್ವ ಪ್ರಯತ್ನವನ್ನು ಮಾಡಬೇಕೆಂದು ನಾನು ಹೇಳುತ್ತೇನೆ ಆದರೆ ತಮಿಳುನಾಡು ಸರ್ಕಾರದವರು ಕಾವೇರಿ ನೀರಿನ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಕೊಟ್ಟು, ನಾವು ಚಳುವಳಿಯನ್ನು ಮಾಡುತ್ತೇವೆ ಎನ್ನುವ ಬೆದರಿಕೆಯನ್ನು ಕೂಡ ಹಾಕಿದ್ದಾರೆ. ಆದ್ದರಿಂದ ನಮ್ಮ ರಾಜ್ಯದ ಮೇಲೆ ಕೇಂದ್ರ ಸರ್ಕಾರದವರು ಏನಾದರೂ ಒತ್ತಡ ತಂದರೆ, ಒಂದು ವೇಳೆ ಅವರ ಪರವಾಗಿ ಏನಾದರೂ ಕೇಂದ್ರ ಸರ್ಕಾರ ತೀರ್ಮಾನ ತೆಗೆದುಕೊಳ್ಳುವುದಾದರೆ, ಒಂದು ವೇಳೆ ಕೇಂದ್ರ ಸರ್ಕಾರ ತಮಿಳುನಾಡು ಸರ್ಕಾರಕ್ಕೆ ಸಹಾಯ ಮಾಡುವುದಾದರೆ ಆಗ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದ ಒತ್ತಾಯಕ್ಕೆ ಏನಾದರೂ ಮಣಿಯುವುದಾದರೆ ನಮ್ಮ ಕರ್ನಾಟಕ ರಾಜ್ಯದ ಜನತೆಗೆ ತಾವು ಮೋಸಮಾಡಿದಂತೆ ಆಗುತ್ತದೆ. ಅವರು ಹೆಚ್ಚು ತೊಂದರೆಯನ್ನು ಅನುಭವಿಸಬೇಕಾಗುತ್ತದೆ ಆದ್ದರಿಂದ ಕೇಂದ್ರ ಸರ್ಕಾರ ಅಂಥಾ ಒಂದು ನಿರ್ಧಾರ ಏನಾದರೂ ತೆಗೆದುಕೊಂಡರೆ ಆಗ ತಾವು ಕೇಂದ್ರ ಸರ್ಕಾರದ ವಿರುದ್ಧ ನಿಂತು ನಮ್ಮ ಹಕ್ಕು ನಾವು ಚಲಾವಣೆ ಮಾಡುತ್ತೇವೆ ಎನ್ನುವ ಮಾತನ್ನು ಧೈರ್ಯವಾಗಿ ಹೇಳಬೇಕು ಇದರಲ್ಲಿ ತಾವು ಎಳ್ಳಷ್ಟು ಭಿನ್ನಾಭಿಪ್ರಾಯ ತೋರಿಸಬಾರದು. ಈ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಬೇಕಾದರೆ ಒಂದು ದಿವಸ ವಿಧಾನಸಭೆಯನ್ನು ಕರೆಸಬಹುದು. ಆಗ ಮಾನ್ಯ ಸದಸ್ಯರ ಒಪ್ಪಿಗೆಯನ್ನು ಪಡೆದು ನಮ್ಮ ಸರ್ಕಾರ ಒಂದು ತೀರ್ಮಾನಕ್ಕೆ ಬಂದರೆ ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ. ಮತ್ತು ಇದರ ಬಗ್ಗೆ ಸರ್ಕಾರ ಸೂಕ್ತವಾದಂಥ ಕಾರ್ಯಕ್ರಮ ಹಾಕಿಕೊಳ್ಳಬೇಕು. ಮತ್ತು ಅಪ್ಪರ್ ಕೃಷ್ಣಾ, ತುಂಗಭದ್ರಾ, ನೀರಿನ ಕಾಮಗಾರಿಗಳನ್ನು ಆದಷ್ಟು ಬೇಗ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಇನ್ನು ತುಮಕೂರು ಉತ್ತರ ಭಾಗದಲ್ಲಿರತಕ್ಕಂಥ ಪ್ರದೇಶಗಳ ಪರಿಸ್ಥಿತಿ ಇವತ್ತು ಚಿಂತಾಜನಕವಾಗಿದೆ.

ಆ ಪ್ರದೇಶದಲ್ಲಿ ಪ್ರತಿಯೊಂದು ವರ್ಷದಲ್ಲಿಯೂ ಕೂಡ 5 ಅಂಗುಲ ಮಳೆಯಾಗುವುದಿಲ್ಲ. ಅಲ್ಲಿನ ರೈತರ ವಾತಾವರಣ ಬಹಳ ಹದಗೆಟ್ಟಿದೆ. ಅಂದರೆ ತುಮಕೂರಿನ ಶಿರಾ, ಪಾವಗಡ, ಮಧುಗಿರಿ, ಇತ್ಯಾದಿ ಸ್ಥಳಗಳಲ್ಲಿ ಪರಿಸ್ಥಿತಿ ಬಹಳ ಭೀಕರವಾಗಿದೆ. ಅಲ್ಲಿಗೆ ಜಯಮಂಗಲಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅಪ್ಪರ್ ಕೃಷ್ಣಾ ನೀರನ್ನು ಆ ಭಾಗಕ್ಕೆ ಉಪಯೋಗಿಸಿಕೊಳ್ಳಬಹುದೆಂದು ಅನೇಕ ಜನ ಹಿರಿಯ ತಜ್ಞರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಅನೇಕ ಜನ ತಜ್ಞ ಇಂಜನೀಯರ್‍ಸ್ ಕೂಡ ಅಭಿಪ್ರಾಯ ಪಟ್ಟಿದ್ದಾರೆ. ಆದ್ದರಿಂದ ಸರ್ಕಾರದವರು ಈ ಕೃಷ್ಣಾನದಿಯ ನೀರನ್ನು ಈ ಭಾಗದ ಜನರಿಗೆ ಒದಗಿಸಿಕೊಡುವುದಕ್ಕೆ ಅತ್ಯಗತ್ಯವಾದಂತೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ ಇನ್ನು ನಮ್ಮ ಮಾನ್ಯ ಮಂತ್ರಿಗಳು ಪ್ರಶ್ನೆಯೊಂದಕ್ಕೆ ಉತ್ತರ ನೀಡುತ್ತಾ ನೀರಾವರಿ ಯೋಜನೆಗಳಿಗೆ ನಮ್ಮ ಸರ್ಕಾರ 350 ಕೋಟಿ ರೂಪಾಯಿಗಳನ್ನು ಒದಗಿಸಿಕೊಡುತ್ತದೆ ಎನ್ನುವ ಮಾತನ್ನು ಹೇಳಿದರು. ಆದ್ದರಿಂದ ಹೇಮಾವತಿ ಜಲಾಶಯಕ್ಕೆ ಆಗುವಂಥ ಹಣವನ್ನು ಖರ್ಚು ಮಾಡಿ ಕೆಲಸ ಪೂರೈಸಬೇಕು. ಮತ್ತು ನಮ್ಮ ರಾಜ್ಯದಲ್ಲಿ ಬಾಂಬೆ ಕರ್ನಾಟಕ ಹಳೆಯ ಮೈಸೂರು ಭಾಗದಲ್ಲಿ ಎಂಥ ಪರಿಸ್ಥಿತಿ ಇದೆಯೆಂದು ಮಾನ್ಯ ಮಂತ್ರಿಗಳು ಅರ್ಥಮಾಡಿ ಕೊಳ್ಳಬೇಕು ಆ ಭಾಗದ ಜನರ ಕಷ್ಟ ಕಾರ್ಪಣ್ಯಗಳು ಯಾವ ರೀತಿಯಲ್ಲಿ ಇವೆ. ಅವರ ಆದಾಯ ಯಾವ ರೀತಿಯಲ್ಲಿ ಇದೆ ಎನ್ನುವುದನ್ನು ಸರ್ಕಾರದವರು ತಿಳಿದುಕೊಳ್ಳಬೇಕು. ಈ ಎಲ್ಲಾ ವಿಷಯಗಳನ್ನು ಸರ್ಕಾರದವರು ತಿಳಿದುಕೊಂಡು ಸಮಗ್ರವಾದಂಥ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಅದೇ ರೀತಿಯಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ನಾಲ್ಕು ರೆವಿನ್ಯೂ ಡಿವಿಜನ್‌ಗಳನ್ನು ಮಾಡಿದ್ದಾರೆ ಈ ಮಂಡಲಿಗಳಿಗೆ ಸಾಕಷ್ಟು ಹಣವನ್ನು ಒದಗಿಸಿಕೊಟ್ಟು ಹೆಚ್ಚು ಅಧಿಕಾರವನ್ನು ಕೊಡಬೇಕೆಂದು ನಾನು ತಿಳಿಸುತ್ತೇನೆ. ಮತ್ತು ಮಾನ್ಯ ಮಂತ್ರಿಗಳು ಸೂಕ್ತವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ತಾವು ಅಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳದಿದ್ದರೆ ಇನ್ನು 5 ವರ್ಷಗಳಾದರೂ ರೈತರ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತೇನೆ.

ಇನ್ನು ನಮ್ಮ ಮಾನ್ಯ ಮಂತ್ರಿಗಳು ಅವರ ಆಯವ್ಯಯ ಪಟ್ಟಿಯಲ್ಲಿ ತಿಳಿಸಿರುವಂತೆ ಶ್ರಮಜೀವಿ ವರ್ಗವೆಂದು ಏನು ಹೇಳಿದ್ದಾರೆ ಈ ಶ್ರಮವನ್ನು ತಪ್ಪಿಸಬೇಕಾದರೆ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಕೂಡ ಈ ಕಷ್ಟಕಾರ್ಪಣ್ಯಗಳನ್ನು ಹೋಗಲಾಡಿಸುವುದಕ್ಕೆ ಎಷ್ಟೇ ಕಾರ್ಯಕ್ರಮಗಳನ್ನು ಹಾಕಿಕೊಂಡರೂ ಕೂಡ ಸಾಕಾಗುವುದಿಲ್ಲ. ಪಟ್ಟಣಗಳಲ್ಲಿರತಕ್ಕಂಥ ಕಾರ್ಮಿಕರೂ ಸಂಘಟಿತರು. ಆದರೆ ಹಳ್ಳಿಗಳಲ್ಲಿರತಕ್ಕಂಥ ರೈತರು ಅಸಂಘಟಿತರು. ಹಳ್ಳಿಯಲ್ಲಿ ವಾಸ ಮಾಡತಕ್ಕಂಥ ಕೂಲಿಕಾರರು ಅಸಂಘಟಿತರು. ಆದರೆ ಯಾವುದೇ ಕಾರಣದಿಂದ ರೈತರು ಸಂಘಟಿತರಲ್ಲ ಸಾಮಾನ್ಯವಾಗಿ ಹಳ್ಳಿಯಲ್ಲಿ ವಾಸಮಾಡತಕ್ಕಂಥ ರೈತನಿಗೆ ಅವನ ಕಷ್ಟ ಗೊತ್ತು. ಪಟ್ಟಣಗಳಲ್ಲಿ ವಾಸ ಮಾಡಿಕೊಂಡಿದ್ದು ನಂತರ ಹಳ್ಳಿಗೆ ಹೋಗಿ ಕೆಲಸ ಮಾಡದೆ ಮತ್ತೆ ಪಟ್ಟಣಗಳಿಗೆ ವಾಪಸ್ ಬಂದು ಕಾರ್ಪೊರೇಷನ್‌ನಲ್ಲಿ ಕಸ ಗುಡಿಸುವ ಕೆಲಸಕ್ಕೆ ಅರ್ಜಿಯನ್ನು ಹಾಕಿಕೊಂಡಿದ್ದಾರೆ. ಇಂಥ ಪರಿಸ್ಥಿತಿ ಇವತ್ತು ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ತುಂಬಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಇರುವಂಥ ರೈತನಿಗೆ ವರ್ಷದಲ್ಲಿ 200 ದಿನಗಳು ಕೂಲಿ ಸಿಗುವುದಿಲ್ಲ. ಅವರು 150 ದಿನಗಳಲ್ಲಿ ಮಾಡಿದ ಕೂಲಿಯಿಂದ 365 ದಿವಸಗಳು ಜೀವನ ಸಾಗಿಸಬೇಕಾಗುತ್ತದೆ. ಇಂಥ ಕಷ್ಟ ಪರಿಸ್ಥಿತಿಯಲ್ಲಿ ಇವತ್ತು ರೈತ ಬಳಲುತ್ತಿದ್ದಾನೆ. ಸುಮಾರು ಎರಡು ಮೂರು ದಿವಸಗಳ ಹಿಂದೆ ನಾಲ್ಕೈದು ಜನ ಹುಡುಗರು ಬಂದು ಸಾರ್ ನಾನು ಕಾರ್ಪೊರೇಷನ್‌ನಲ್ಲಿ ಕಸಗುಡಿಸುವಕೆಲಸಕ್ಕೆ ಅರ್ಜಿಯನ್ನು ಹಾಕಿಕೊಂಡಿದ್ದೇನೆ. ನನಗೆ ಆ ಕೆಲಸವಾದರೂ ಪರವಾಗಿಲ್ಲ ಕೊಡಿಸಿ ಎಂದು ಕೇಳಿಕೊಳ್ಳುವವರು ಇದ್ದಾರೆ. ಆಗ ನಾನೂ ಕೂಡ ಅವರ ಜೊತೆಯಲ್ಲಿ ಸಂಕಟಪಟ್ಟುಕೊಂಡಿದ್ದೇನೆ. ನಮ್ಮ ರಾಜ್ಯದಲ್ಲಿ ಸುಮಾರು 30 ವರ್ಷಗಳಿಂದ ಈಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ರೈತರ ಕಷ್ಟ ಸುಖಗಳನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಒಂದು ವರ್ಷ ನಾನು ಬಂದ ಕಾಲದಲ್ಲಿ ಮಾತ್ರವಲ್ಲ ಸಾಮಾನ್ಯವಾಗಿ ಸೆಪ್ಟೆಂಬರ್, ಅಕ್ಟೋಬರ್ ತಿಂಗಳಲ್ಲಿ ಎಲ್ಲಾ ಕಡೆಯಲ್ಲಿ ಕೆಲಸವೇ ಇರುವುದಿಲ್ಲ. ಅವರು ಜೀವನವನ್ನು ಹೇಗೆ ಮಾಡಬೇಕು ? ಆದಕ್ಕೋಸ್ಕರ ದಿವಂಗತ ದೇವರಾಜ ಅರಸುರವರು ಏನು ಹೇಳಿದ್ದರೆಂದರೆ ಪ್ರತಿವರ್ಷವೂ ಹಳ್ಳಿಗಾಡಿನಲ್ಲಿ ಯಾವುದಾದರೂ ಕೆಲಸ ಜನರಿಗೆ ಸಿಗುವಂತಿದ್ದರೆ ಅದು ಉದ್ಯೋಗದ ದೃಢೀಕರಣದ ದಿಟ್ಟ ಯೋಜನೆ ಯಾಗುತ್ತದೆ ಇದರಿಂದ ಎಲ್ಲರಿಗೂ ಕೆಲಸ ಒದಗಿಸತಕ್ಕಂಥ ಪರಿಸ್ಥಿತಿ ಬರಬಹುದು. ಇಡೀ ರಾಜ್ಯದಲ್ಲಿ ಇರತಕ್ಕಂಥ ವ್ಯವಸಾಯ ಕೂಲಿಗಾರರಿಗೆ ಕೆಲಸ ಒದಗಿಸಬೇಕಾಗಿದೆ. ವ್ಯವಸಾಯಗಾರರಿಗೆ ಇವತ್ತು ಪೂರ್ಣ ಉದ್ಯೋಗ ಇಲ್ಲ. ನೀರಾವರಿ ಪ್ರದೇಶದಲ್ಲಿ ಜೀವನ ನಿರ್ವಹಣೆ ಬಹಳ ಕಷ್ಟಕರವಾಗಿದೆ. ನಮ್ಮಲ್ಲಿ ಐದು ಎಕರೆ ವ್ಯವಸಾಯ ಯೋಗ್ಯ ಭೂಮಿಯುಳ್ಳವರು ಶೇಕಡಾ 70 ರಷ್ಟು ಜನರು ಇದ್ದಾರೆ. ನಾವು ಕನಿಷ್ಠ ವೇತನ ಎಂದು ಏನು ಹೇಳುತ್ತೇವೆ, ಹಳ್ಳಿಗಾಡಿನ ರೈತರ ಉತ್ಪಾದನೆ ಎಷ್ಟು ಇರಬಹುದು ಎಂದು ಯಾರಾದರೂ ಯೋಚನೆ ಮಾಡಿರುವುದು ಉಂಟೊ ? ಅವರ ಜೀವನೋಪಾಯ, ಮಕ್ಕಳ ವಿದ್ಯಾಭ್ಯಾಸ

ಯಾವ ರೀತಿಯಿಂದಲೂ ಅವರು ಜೀವನವನ್ನು ಉತ್ತಮ ಪಡಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಅಂತಹವರಿಗೆ ಸರ್ಕಾರದವರು ಏನು ಮಾಡುತ್ತೀರಿ ? ಇವರ ಮಕ್ಕಳಿಗೆ ಕೈಗಾರಿಕೆಗಳಲ್ಲಿ ಪ್ರಾಶಸ್ತ್ಯ ಕೊಟ್ಟು ನೇಮಕ ಮಾಡುವ ಮನಸ್ಸು ಸರಕಾರಕ್ಕೆ ಬರಬೇಕು. ದಿವಂಗತ ದೇವರಾಜ ಅರಸು ಅವರು ಏನು ಹೇಳುತ್ತಿದ್ದರು ಎಂದರೆ ಯಾವ ಕುಟುಂಬಕ್ಕೆ ಒಂದು ನಿಶ್ಚಿತ ವರಮಾನ ಇಲ್ಲವೋ ಅಂತಹ ಕುಟುಂಬಕ್ಕೆ ಒಂದು ಉದ್ಯೋಗವನ್ನು ಒದಗಿಸಿಕೊಡುವಂತಹ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. ಈ ರೀತಿ ಮಾಡಿ ಅವರ ಕುಟುಂಬಕ್ಕೆ ರಕ್ಷಣೆಯನ್ನು ಕೊಡಬೇಕು.

ಅರ್ಥ ಮಂತ್ರಿಗಳು ತಮ್ಮ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಪ್ರತಿ ಗ್ರಾಮದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಐದು ಕುಟುಂಬಗಳನ್ನು ಗುರುತಿಸಿ ಅವರಿಗೆ ಉದ್ಯೋಗ ದೊರಕಿಸಿಕೊಡುತ್ತೇವೆ ಎಂದು ಹೇಳಿದ್ದಾರೆ. ಇದು ಎಷ್ಟರ ಮಟ್ಟಿಗೆ ಸಾಧ್ಯವಾದೀತೋ ಎಂದು ನನಗೆ ಅನುಮಾನ ಇದೆ. ಒಂದು ಊರಿಗೆ ಐದು ಕುಟುಂಬ ಎಂದರೆ ನಮ್ಮ ರಾಜ್ಯದಲ್ಲಿ 33-35 ಸಾವಿರ ಗ್ರಾಮಗಳಿವೆ. ಪ್ರತಿ ಗ್ರಾಮದಲ್ಲಿ ಐದು ಕುಟುಂಬಗಳಿಗೆ ಕೆಲಸ ಒದಗಿಸುವುದು ಎಂದರೆ ಸುಮಾರು ಒಂದೂವರೆ ಲಕ್ಷ ಒದಗಿಸಬೇಕು. ಪ್ರತಿ ಗ್ರಾಮದಲ್ಲೂ ಐದು ಕುಟುಂಬಗಳಿಗೆ ಉದ್ಯೋಗ ಕಲ್ಪಿಸಿಕೊಡುವುದು ಬಹುಶಃ ಒಂದು ದೊಡ್ಡ ಸಾಧನೆಯಾದೀತೆಂದು ನನ್ನ ಭಾವನೆ. ಈ ರೀತಿ ಉದ್ಯೋಗ ಒದಗಿಸಬೇಕಾದರೆ ಎಷ್ಟು ವರ್ಷ ಬೇಕಾಗುತ್ತದೆ ? ಅದಕ್ಕೆ ಬೇರೆ ಯೋಚನೆಮಾಡಬೇಕು. ನನ್ನ ಅಭಿಪ್ರಾಯದಲ್ಲಿ ಹಳ್ಳಿಗಳಲ್ಲಿ ಇಂಡಸ್ಟ್ರೀಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ಗಳನ್ನು ಮಾಡಬೇಕು ಅಲ್ಲಿ ನೂರಕ್ಕೆ ಎಂಭತ್ತು ಭಾಗ ಕೆಲಸವನ್ನೇ ಕಲಿಸಿಕೊಡುವ ವ್ಯವಸ್ಥೆ ಇರಬೇಕು, ಓದುವುದು ಅವಶ್ಯಕತೆ ಇರುವುದಿಲ್ಲ. ಹಳ್ಳಿಗಳಲ್ಲಿರುವ ತರುಣರಿಗೆ ಶಿಕ್ಷಣ ಕೊಟ್ಟು ಕೈಗಾರಿಕೆಗಳಲ್ಲಿ ಕೆಲಸ ಸಿಗುವ ಹಾಗೆ ಮಾಡಬೇಕು. ಹಳ್ಳಿಗಳಿಂದ ಪಟ್ಟಣಗಳಿಗೆ ವಲಸೆ ಬರುತ್ತಾರೆ ಎಂದು ಹೇಳುತ್ತಾರೆ. ಅವರು ಸುಮ್ಮಸುಮ್ಮನೆ ಪಟ್ಟಣಗಳಿಗೆ ಬರುವುದಿಲ್ಲ. ಹಳ್ಳಿಗಳಲ್ಲಿ ಇವತ್ತು ಜೀವನ ನಿರ್ವಹಣೆ ಬಹಳ ಕಷ್ಟವಾಗಿದೆ. ನಮ್ಮ ತಂದೆತಾಯಿಗಳು ತಮ್ಮ ಕಷ್ಟವನ್ನು ಸಹಿಸಿಕೊಂಡಿದ್ದರು. ಆದರೆ ಈಗಿನ ಯುವಕರು ಕಷ್ಟವನ್ನು ಸಹಿಸುವುದಿಲ್ಲ ಅವರು ಸುಮ್ಮನೆ ಕೂತುಕೊಳ್ಳುವುದಿಲ್ಲ. ಆದ್ದರಿಂದ ರೈತರಿಗೆ ಸಾಕಷ್ಟು ಉದ್ಯೋಗ ಸಿಗುವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ, ಈ ವಿಷಯದಲ್ಲಿ ನಿದ್ರಾವಸ್ಥೆಯಲ್ಲಿ ಇರುವುದಾದರೆ, ಸರ್ಕಾರವೇ ಆಗಲಿ ಯಾವ ಸರ್ಕಾರವೇ ಆಗಲಿ, ಬಹಳ ದಿವಸ ನಡೆಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇಂತಹ ಪರಿಸ್ಥಿತಿ ಬಂದಿದೆ. ಈ ಕಡೆ ಸರ್ಕಾರದವರು ಲಕ್ಷ್ಯಕೊಟ್ಟು ನಿರುದ್ಯೋಗಿಗಳಿಗೆ, ಅವಿದ್ಯಾವಂತ ಯುವಕರಿಗೆ ಹಳ್ಳಿಗಾಡಿನ ವ್ಯವಸಾಯ ಕಾರ್ಮಿಕರಿಗೆ ಪಟ್ಟಣಗಳಲ್ಲಿ ಜನರಿಗೆ ಸಿಗುವಷ್ಟೇ ಪ್ರಮಾಣದಲ್ಲಿ ಬೇಕಾದ ಸವಲತ್ತುಗಳನ್ನು ಉದ್ಯೋಗ ಸೌಲಭ್ಯಗಳನ್ನು ದೊರಕಿಸಿ ಕೊಡಲು ಗಮನ ಕೊಡಬೇಕಾಗಿದೆ

ಇನ್ನು, ನೌಕರಿಯನ್ನು ಮೀಸಲಾಗಿಡತಕ್ಕಂಥ ಪದ್ಧತಿ ಎಷ್ಟು ದಿವಸಗಳವರೆಗೆ ಇರಬೇಕು ? ಈ ಪ್ರಶ್ನೆ ಸಹಜವಾಗಿ ನಮ್ಮ ಎದುರು ಬರುತ್ತದೆ ಎಲ್ಲಿಯವರೆಗೆ ಅಂದರೆ ಹಿಂದುಳಿದ ವರ್ಗಗಳಿಗೆ ಸೇರಿದಜನರು ನೌಕರಿ ದೊರೆತು, ಇತರರ ಜೊತೆಯಲ್ಲಿ ಸರಿಸಮಾನರಾಗಿ, ಹೊಟ್ಟೆ ಬಟ್ಟೆಗಾದರೂ ಸಿಗುವಹಾಗೆ ಅನುಕೂಲತೆ ಪಡೆಯುವವರೆಗೆ ಈ ಪದ್ಧತಿಯನ್ನು ಇಟ್ಟುಕೊಳ್ಳಬೇಕು. ನನ್ನ ಒಂದು ಸೂಚನೆ ಏನೆಂದರೆ ಈಗ ಹರಿಜನ ಗಿರಿಜನರಾಗಲೀ, ಹಿಂದುಳಿದ ವರ್ಗಗಳಾಗಲೀ ಯಾರಿಗೆ ಉದ್ಯೋಗವನ್ನು ಮೀಸಲಾಗಿಟ್ಟುಕೊಡುತ್ತಾರೋ, ಒಂದು ಸಾರಿ ಯಾರಿಗೆ ಉದ್ಯೋಗ ಸಿಗುತ್ತದೆಯೋ, ಅವರ ಮಕ್ಕಳು ಮನೆಯವರಿಗೇ ಮತ್ತೆ ಉದ್ಯೋಗಗಳು ಸಿಗುವಂತಹ ಪರಿಸ್ಥಿತಿಯನ್ನು ಕಣ್ಣಾರೆ ಕಾಣಬಹುದು. ಯಾವುದೇ ಒಂದು ಕುಟುಂಬಕ್ಕೆ ಮೀಸಲಾತಿಯ ಸೌಲಭ್ಯ ಮೀಸಲಾಗಿರಬಾರದು. ಏಕೆಂದರೆ ನನ್ನ ಉದಾಹರಣೆಯನ್ನೇ ಹೇಳಬೇಕೆಂದರೆ ನನ್ನ ಅಣ್ಣನ ಮಗ ಊರಿನಲ್ಲಿ ಓದಿದವನು. ನನ್ನ ಮಗ ಬೆಂಗಳೂರಿನಲ್ಲಿ ಓದಿದವನಿಗೂ ಅಷ್ಟೇ ವ್ಯತ್ಯಾಸ ಇದೆ. ಈಗ ಪ್ರತಿಯೊಂದೂ ಮೆರಿಟ್ ಮೇಲೆ ಇರುತ್ತದೆ. ಇವತ್ತು ಪಟ್ಟಣದಲ್ಲಿರುವ ಮಕ್ಕಳಿಗೆ ಬೇಗ ಕೆಲಸ ಸಿಗುತ್ತದೆ. ಹಳ್ಳಿಗಾಡಿನಲ್ಲಿರುವ ಮಕ್ಕಳಿಗೆ ಕೆಲಸ ಸಿಗುವುದಿಲ್ಲ. ನನ್ನ ಸ್ನೇಹಿತರು ಒಬ್ಬರಿದ್ದಾರೆ. ಅವರಿಗೆ ಐದು ಗಂಡು ಮಕ್ಕಳು. ಅವರೆಲ್ಲರಿಗೂ ಕೆಲಸ ಇದೆ. ಐದು ಜನ ಸೊಸೆಯಂದಿರಿಗೂ ಕೆಲಸ ಇದೆ. ತಮ್ಮ ಆರನೆಯ ಮಗನಿಗೆ ಕೆಲಸಕ್ಕೋಸ್ಕರ ನನ್ನ ಹತ್ತಿರ ಬಂದಿದ್ದರು

ಶ್ರೀ ಸಿ. ಭೈರೇಗೌಡ.—ನೀವು ಕೆಲಸವನ್ನು ಕೊಡಿಸಿದಿರಾ ?

ಶ್ರೀ ಹುಚ್ಚಮಾಸ್ತಿಗೌಡ.—ನಾನು ಸಹಾಯ ಮಾಡುವುದು ಬಿಡುವುದು ನನ್ನ ವೈಯಕ್ತಿಕ ವಿಷಯ. ಆದ್ದರಿಂದ ನಾನು ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ ಬೇರೆ ಯಾವ ಸವಲತ್ತುಗಳೂ ಸಿಗದಿರುವಂತಹ ಕುಟುಂಬಗಳಿಗೆ ಇವುಗಳು ಸಿಗುವಹಾಗೆ ಮಾಡಬೇಕು. ಇನ್ನೆರಡು ವಿಷಯಗಳ ಬಗ್ಗೆ ನಾನು ಮಾತನಾಡಬೇಕಾಗಿದೆ. ರೇಷ್ಮೆ ವ್ಯವಸಾಯ ನಮ್ಮ ರಾಜ್ಯದಲ್ಲಿ ಬಹಳ ಜನಕ್ಕೆ ದೊಡ್ಡ ಉದ್ಯೋಗ. ವ್ಯವಸಾಯಗಾರರಿಗೆ ಹಣ ಒದಗಿಸಿಕೊಡುವ ಇದು ಉಪ ಕಸುಬಾದರೂ ಮುಖ್ಯವಾದ ಕಸುಬಾಗಿದೆ. ಆನೇಕಲ್‌ನಲ್ಲಿ

ಒಂದು ಸಣ್ಣ ಬೀಜ ಕೇಂದ್ರ ಇದೆ. ಅಲ್ಲಿ 23 ವಾಹನಗಳು ಇವೆ. ಈ ಒಂದು ಸಣ್ಣ ಕೇಂದ್ರಕ್ಕೆ 23 ವಾಹನಗಳು ಏಕೆ ಬೇಕು? ಇವುಗಳನ್ನು ಉಪಯೋಗ ಮಾಡುವ ಅಧಿಕಾರಿಗಳು ಎಷ್ಟು ಖರ್ಚು ಮಾಡುತ್ತಿದ್ದಾರೆ, ಇದರ ಮೇಲ್ವಿಚಾರಣೆ ಬೇಡವೆ ? ನಾನು ಅಲ್ಲಿಯ ಆಫೀಸಿಗೆ ಹೋಗಿದ್ದೆ. ಅಲ್ಲಿ ಅವರು ಉಪಯೋಗಿಸತಕ್ಕ ಪಿಠೋಪಕರಣಗಳು ಮಂತ್ರಿಗಳ ಕಛೇರಿಗಳಲ್ಲಿ ಇದೆಯೋ ಇಲ್ಲವೋ ಗೊತ್ತಿಲ್ಲ.

4-00 P M.

ಆ ತರಹ ಸೌಕರ್ಯಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ವಿಶ್ವ ಬ್ಯಾಂಕಿನಿಂದ ಸಾಲಮಾಡಿದ್ದಾರೆ. ಇದನ್ನು ಯೋಚನೆ ಮಾಡಬೇಕು. ಅದನ್ನು ತಪ್ಪಿಸಿ ಮುಂದೆ ಅಭಿವೃದ್ಧಿ ಕಾರ್ಯಕ್ಕೆ ಆಗತಕ್ಕಂತಹ ನಿಗದಿತ ಸಾಲವನ್ನು ತೆಗೆದುಕೊಂಡಿದ್ದಾರೆ. ಆ ಕೆಲಸ ನಿಲ್ಲದ ಹಾಗೆ ಮಾಡಬೇಕು. ಬಾಕಿ ಕೇಂದ್ರಗಳನ್ನು ಮಾಡಿದ್ದಾರೆ. ಚುನಾವಣೆ ಸಮಯದಲ್ಲಿ ಅಲ್ಲಿಗೆ ಹೋಗಿ ನೋಡಿದ್ದೇನೆ ಯಾರೂ ದಿಕ್ಕು ಇಲ್ಲದಂತಹ ಸ್ಥಳಗಳಲ್ಲಿ ಬಾಕಿ ಕೇಂದ್ರಗಳನ್ನು ಮಾಡಿದ್ದಾರೆ. ಒಂದೊಂದು ಕೇಂದ್ರಕ್ಕೂ 15 ರಿಂದ 20 ಸಾವಿರ ರೂಪಾಯಿಗಳ ಮೇಲೆ ಖರ್ಚು ಮಾಡಿ ನಿರುಪಯುಕ್ತವಾದ ಸ್ಥಳದಲ್ಲಿ, ಊರು ಇಲ್ಲದೇ ಇರತಕ್ಕಂತಹ ಕಡೆ ಅಲ್ಲಿ ಹೋಗಿ ಮಾಡಿದ್ದಾರೆ. ವಿಶ್ವಬ್ಯಾಂಕಿನಿಂದ ಪಡೆದಂತಹ ಸಾಲ ಅಭಿವೃದ್ಧಿಗಾಗಿ ಜನಗಳ ಹಿತಕ್ಕಾಗಿ. ಈ ರೇಷ್ಮೆ ವ್ಯವಸಾಯದ ಕಸಬು ಏನಿದೆ ಇದನ್ನು ಹೆಚ್ಚಾಗಿ ಅವಲಂಬಿಸಿ ಜನಗಳು ತಮ್ಮ ವೃತ್ತಿ ಕೆಲಸ ಎಂಬುದಾಗಿ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆಯೋ ಅದರ ಸದ್ವಿನಿಯೋಗವಾಗಿದೆಯೇ ಎಂಬುದರ ಕಡೆ ಗಮನಕೊಡಿ ಎಂಬುದಾಗಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಅಲ್ಲಿ ರೇಷ್ಮೆ ಮಾರುಕಟ್ಟೆಗಳಿವೆ. ಅಲ್ಲಿಗೆ ತಂದಂತಹ ಗೂಡನ್ನು ಕೊಂಡುಕೊಳ್ಳುವುದಕ್ಕೆ ಬಂದಂತಹವರು ಒಂದು ಕೆ ಜಿ ಗೆ 100 ರೂ. ಕೊಟ್ಟು ತೆಗೆದುಕೊಳ್ಳುತ್ತೇನೆಂದರೂ ಹೇಳಿದರೂ ರೈತನು ಮಾರಾಟಮಾಡುವುದಕ್ಕೆ ಅವಕಾಶಕೊಡುತ್ತಿಲ್ಲ ಮಧ್ಯ ಅಧಿಕಾರಿಗಳು ಹಾಗೂ ದಳ್ಳಾಳಿಗಳು ಸೇರಿಕೊಂಡು ಅವರವರೇ ಬೆಲೆಯನ್ನು 70 ರೂಪಾಯಿಗಳಿಗೋ ಅಥವಾ 80 ರೂಪಾಯಿಗಳಿಗೋ ಕೊಡಿಸುತ್ತಾರೆ. ಉಳಿದ 20-30 ರೂಪಾಯಿಗಳನ್ನು ಅವರೇ ಇಟ್ಟುಕೊಳ್ಳುತ್ತಾರೆ ಅಥವಾ ರೈತನಿಗೆ ಆ 20-30 ರೂಪಾಯಿಗಳಷ್ಟು ಕಡಿಮೆಯಾಗುತ್ತದೋ ಗೊತ್ತಿಲ್ಲ ನಾನೂ ಕೂಡ ಅಲ್ಲಿಗೆ ಹೋಗಿ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಇರತಕ್ಕಂತಹ ವಾಸ್ತವಾಂಶವನ್ನು ಗಮನಿಸಿದ್ದೇನೆ ಆದರೂ ಉಪಯೋಗವಾಗಲಿಲ್ಲ. ಆಗ ನಾನು ಶಾಸನ ಸಭಾ ಸದಸ್ಯನಾಗಿರಲಿಲ್ಲ. ಈಗೇನಾದರೂ ನನ್ನ ಮಾತು ನಡೆಯುತ್ತದೆಯೋ ಎಂಬುದಾಗಿ ಪರೀಕ್ಷೆ ಮಾಡುತ್ತೇನೆ. ಸಂಬಂಧಪಟ್ಟ ಮಂತ್ರಿಗಳಿಗೂ ತಿಳಿಸುತ್ತೇನೆ. ಹೀಗೆ ರೈತನಿಗೆ ನೇರವಾಗಿ ಸಿಕ್ಕತಕ್ಕಂತಹ ಲಾಭವನ್ನೂ ಕೂಡ ಅವನಿಗೆ ಸಿಕ್ಕದ ಹಾಗೆ ಮಧ್ಯವರ್ತಿಗಳು ಮಾಡುತ್ತಿದ್ದಾರೆ. ಇದನ್ನು ಕೂಡಲೇ ಸಂಬಂಧಪಟ್ಟ ಮಂತ್ರಿಗಳು ತಡೆಗಟ್ಟಬೇಕು ರೇಷ್ಮೆ ಕಸಬು ನಮ್ಮ ಹಳ್ಳಿಗಾಡಿನ ಜನಗಳಿಗೆ ರಕ್ಷಾ ಕವಚವಾಗಿದೆ ಶ್ರಮಜೀವಿಗಳು ಇರತಕ್ಕಂತಹ ಪ್ರದೇಶದಲ್ಲಿ ಇದು ಬಹಳ ದೊಡ್ಡ ಕಸಬಾಗಿದೆ. ಅದರಲ್ಲಿರತಕ್ಕಂತಹ ಸಮಸ್ಯೆಗಳನ್ನು ಪರಿಹಾರ ಮಾಡಿ ರೈತನಿಗೆ ನೇರವಾಗಿ ಸಹಾಯ ಸಿಕ್ಕುವಹಾಗೆ ಮಾಡುವುದು ಅತ್ಯಂತ ಅವಶ್ಯಕ. ಇದರಲ್ಲಿ ಬೀಜವನ್ನು ಉತ್ಪತ್ತಿ ಮಾಡತಕ್ಕಂತಹ ಪ್ರದೇಶ ಅಂತ ಹೇಳಿದರೆ; ನಮ್ಮ ಕುಣಿಗಲ್ ತಾಲ್ಲೂಕು ನಮ್ಮ ಕುಣಿಗಲ್ ತಾಲ್ಲೂಕಿನಲ್ಲಿ ಬೀಜದ ಕೇಂದ್ರ ಇದೆ. ಅದಕ್ಕೆ ಪ್ರತ್ಯೇಕವಾದ ಕಾನೂನನ್ನು ಮಾಡಿದ್ದೇವೆ. ಆ ರೈತ ಹೆಚ್ಚು ಗೂಡನ್ನು ಬೆಳೆದು ಹೆಚ್ಚು ಹಣವನ್ನು ಸಂಪಾದನೆ ಮಾಡುವುದಕ್ಕೆ ಆಗುವುದಿಲ್ಲ. ಬೀಜವನ್ನು ಉತ್ಪಾದನೆ ಮಾಡತಕ್ಕಂತಹ ಪ್ರದೇಶದಲ್ಲಿ ಕಡಿಮೆ ಕ್ಷೇತ್ರದಲ್ಲಿ ವ್ಯವಸಾಯ ಮಾಡಿ ಉತ್ತಮವಾದ ಬೀಜವನ್ನು ಬೆಳೆಯಬೇಕಾಗುತ್ತದೆ. ಆದ್ದರಿಂದ ಈ ಒಂದು ಬೀಜವನ್ನು ಉತ್ಪಾದನೆ ಮಾಡತಕ್ಕಂತಹ ಪ್ರದೇಶದಲ್ಲಿ ಒಂದು ಯಾವುದಾದರೂ ರೇಷ್ಮೆಗೆ ಸಂಬಂಧಪಟ್ಟಂತಹ ಕೈಗಾರಿಕೆಯನ್ನು ಸ್ಥಾಪನೆ ಮಾಡಿ ರೇಷ್ಮೆ ವ್ಯವಸಾಯವನ್ನು ಮಾಡತಕ್ಕಂತಹ ರೈತನ ಮಕ್ಕಳಿಗೆ ಆ ಉದ್ಯೋಗಗಳನ್ನು ಮೀಸಲಾಗಿಟ್ಟು ಸಹಾಯ ಮಾಡಬೇಕೆಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮಂತ್ರಿಗಳು ಈ ಕಡೆ ಗಮನಕೊಟ್ಟು ಆ ಕೆಲಸವನ್ನು ಮಾಡುತ್ತಾರೆಂದು ನಿರೀಕ್ಷೆ ಮಾಡುತ್ತೇನೆ. ಇಷ್ಟು ವಿಷಯಗಳನ್ನು ಹೇಳುವುದರ ಜೊತೆಗೆ ಅಂತ್ಯೋದಯ ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ, ತಾವು ಹಾಕಿರತಕ್ಕಂತಹದ್ದು ನಾನು ಈಗಾಗಲೇ ಹೇಳಿದ ವಿಷಯದಲ್ಲಿ ಅದೂ ಅಡಕವಾಗಿದೆ. ಪ್ರತಿಯೊಂದು ಗ್ರಾಮದಲ್ಲೂ 5 ಕುಟುಂಬಗಳಿಗೆ ಸಹಾಯ ಮಾಡುತ್ತೇನೆಂದು ಅಂತ್ಯೋದಯ ಕಾರ್ಯಕ್ರಮದಲ್ಲಿದೆ. ಈ ಕೆಲಸದ ಕಡೆ ಹೆಚ್ಚು ನಮ್ಮ ಮನಸ್ಸು ಇರಬೇಕಾದುದು ಅವಶ್ಯಕ ಎಂದು ಮತ್ತೊಮ್ಮೆ ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಹಾತ್ಮ ಗಾಂಧೀಜಿಯವರು ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದಂತಹವರು ಜಯಪ್ರಕಾಶ್ ನಾರಾಯಣ್‌ರವರು, ಆಚಾರ್ಯ ಕೃಪಲಾನಿಯವರ ಮುಂತಾದ ಮಹಾ ಮಹನೀಯರು ಏನೊಂದು ದೃಷ್ಟಿಯನ್ನು ನಮ್ಮ ಸಮಾಜದಲ್ಲಿ ಹೇಳಿದ್ದಾರೆ. ಆ ದಿಕ್ಕಿನಲ್ಲಿ ಹೋಗತಕ್ಕಂತಹ ಮನಸ್ಸು ಸದಾ ದೃಷ್ಟಿಯಲ್ಲಿಟ್ಟುಕೊಂಡು ಕೆಲಸಮಾಡಬೇಕು. ಅದರಲ್ಲೂ ಸರ್ಕಾರಗಳು ನಮ್ಮ ಕೈಗೇ ಬಂದಾಗ ಆ ಕೆಲಸಕ್ಕೆ ಹೆಚ್ಚು ದೃಷ್ಟಿಯನ್ನಿಟ್ಟು ಏನು ಹೇಳಿದ್ದೇವೆಯೋ ಆ ಮಾತನ್ನು

ಕಾರ್ಯಗತಃ ಪೂರೈಸುವುದಕ್ಕೆ ಸರ್ವ ಪ್ರಯತ್ನವನ್ನು ಮಾಡತಕ್ಕಂತಹ ಧೈರ್ಯ ಮತ್ತು ಶಕ್ತಿ ಸರ್ಕಾರಕ್ಕೆ ಬರಲೆಂದು ಹಾರೈಸುತ್ತಾ ಇಷ್ಟು ಸಮಯ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಂತಹ ತಮಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್ ಕ್ಷೇತ್ರ) —ಮಾನ್ಯ ಅಧ್ಯಕ್ಷರೆ, ಈ ರಾಜ್ಯದ ಮುಖ್ಯಮಂತ್ರಿಗಳು 1983-84 ನೇ ಸಾಲಿನ ಆಯವ್ಯಯವನ್ನು ಈ ಸಭೆಯ ಒಪ್ಪಿಗೆಗಾಗಿ ಇಟ್ಟಿದ್ದಾರೆ ನಾನು ಪಕ್ಷೇತರ ಅಭ್ಯರ್ಥಿಯಾಗಿ ನಿಂತು ಗೆದ್ದು ಬಂದಿರತಕ್ಕಂತಹವನು ಮತ್ತು ಸರ್ಕಾರಕ್ಕೆ ಬೆಂಬಲ ಕೊಡತಕ್ಕಂತಹವನು. ಈ ಆಯವ್ಯಯಕ್ಕೂ ಸಹ ನನ್ನ ಬೆಂಬಲವನ್ನು ಸೂಚಿಸಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ತಮಗೆ ಗೊತ್ತಿದೆ ಕರ್ನಾಟಕ ರಾಜ್ಯ ಇಡೀ ದೇಶದ ರಾಜಕೀಯದ ಮೇಲೆ ತನ್ನದೇ ಆದಂತಹ ಪ್ರಭಾವವನ್ನು ಮತ್ತು ಮಾದರಿಯನ್ನು ಒಪ್ಪುವಂತೆ ಒಂದು ಸಾರಿ ಮಾಡಿದಂತಹ ರಾಜ್ಯವಾಗಿತ್ತು. ಇದು ಹಿಂದಿನ ಅನೇಕ ನಿದರ್ಶನಗಳ ಮೂಲಕ ಇದು ವ್ಯಕ್ತವಾಗಿವೆ. ಹಿಂದೆ 19ನೇ ಇಸವಿಯಲ್ಲೂ ನಡೆದಂತಹ ಮಹಾ ಚುನಾವಣೆಯಲ್ಲಿ ಇಡೀ ದೇಶ ಒಂದು ಕಡೆಯಾದರೆ ಕರ್ನಾಟಕ ರಾಜ್ಯ ಮತ್ತು ಆಂಧ್ರ ಪ್ರದೇಶ ರಾಜ್ಯಗಳೆರಡೂ ಮತ್ತೊಂದು ಕಡೆಯಾಯಿತು ಆದರೆ ಈಗ ಕರ್ನಾಟಕದ ಜನತೆ ತಮ್ಮ ಮಹಾ ತೀರ್ಪನ್ನು ಕೊಟ್ಟಿದ್ದಾರೆ. ಆ ಮಹಾ ತೀರ್ಪಿನ ಪ್ರಕಾರ 36 ವರ್ಷಗಳ ಕಾಲ ಅಧಿಕಾರದ ಗದ್ದುಗೆಯನ್ನು ಹಿಡಿದಂತಹ ಪಕ್ಷ ಇವತ್ತು ವಿರೋಧ ಪಕ್ಷವಾಗಿ ಕುಳಿತಿದೆ ಇದು ಒಂದು ಮಹತ್ತರವಾದ ತೀರ್ಪು. ಮತ್ತು ಚರಿತ್ರಾರ್ಹವಾದ ತೀರ್ಪು ; 36 ವರ್ಷಗಳ ಕಾಲ ಇದ್ದಂತಹ ಅಧಿಕಾರದ ಗದ್ದುಗೆಯನ್ನು ಕೊನೆಗಾಣಿಸಿದಾರೆ ಹೀಗೆ ಆಗಿರುವುದಕ್ಕೆ ಇಡೀ ದೇಶದ ಜನತೆ ಕರ್ನಾಟಕ ಮತದಾರರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾದುದು ಕರ್ತವ್ಯ.

ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಆಯವ್ಯಯ ಪತ್ರದಲ್ಲಿ ರಾಜ್ಯದ ಮತ್ತು ಕೇಂದ್ರದ ಸಂಬಂಧದ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ. ಇಲ್ಲಿ ಹೇಳಿರತಕ್ಕಂತಹ ವಿಚಾರ ಏನಿದೆ, ಅದು ಪೂರ್ಣ ಸತ್ಯವಲ್ಲವೆಂದು ನನಗನ್ನಿಸುತ್ತದೆ ಮುಖ್ಯ ಮಂತ್ರಿಗಳ ಪ್ರಕಾರ ಕೆಲವು ಆರ್ಥಿಕ ವಿಷಯಗಳನ್ನು ಮಾತ್ರ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದರೆ ಅದೇ ರೀತಿ ರಾಜಕೀಯವನ್ನೂ ಇಲ್ಲಿ ಪ್ರಸ್ತಾಪ ಮಾಡಿದ್ದರೆ ಚೆನ್ನಾಗಿರುತ್ತಿತ್ತು ಎಂದು ನನಗನ್ನಿಸುತ್ತದೆ. ಕಾರಣವೇನೆಂದರೆ, ಹಿಂದೆ ಪ್ರಥಮವಾಗಿ ಕೇರಳಾ ರಾಜ್ಯದಲ್ಲಿ ಕಾಂಗ್ರೆಸ್ಸೇತರ ಸರ್ಕಾರ ಬಂದಾಗ ರಾಜಕೀಯ ಕಾರಣಗಳಿಗಾಗಿ ಸರ್ಕಾರವನ್ನು ಉರುಳಿಸಿ ತಮ್ಮ ಪ್ರಭಾವವನ್ನು ಅಲ್ಲಿ ಸ್ಥಾಪಿಸಬೇಕೆಂಬ ದೃಷ್ಟಿಯಿಂದ, ಇಂದಿನ ರಾಷ್ಟ್ರದ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾ ಗಾಂಧಿ ಸ್ವತಃ ಕೇರಳ ರಾಜ್ಯಕ್ಕೆ ಹೋಗಿ, ಅಲ್ಲಿದ್ದಂತಹ ಜನತಾ ಶಕ್ತಿಗಳನ್ನು ಪ್ರಚೋದನೆ ಮಾಡಿ, ಅಶಾಂತಿಯನ್ನು ಸರ್ಕಾರದ ಮೇಲೆ ಎತ್ತಿ ಕಟ್ಟಿ ಸರ್ಕಾರವನ್ನು ಉರುಳಿಸುವುದಕ್ಕೆ ಸಮರವನ್ನೇ ಹೂಡಿ ಎಲ್ಲ ತರಹ ರಾಜಕೀಯವನ್ನೂ ಮಾಡಿದರು ಆದರೆ ಅಂದು ಶ್ರೀ ಇ ಎಂ. ನಂಬೂದ್ರಿಪಾಡ್ ರವರ ಕಡೆಯವರು ಇಬ್ಬರೇ ಇದ್ದರೂ ಸಹ ಒಬ್ಬರನ್ನೂ ಇಂದಿರಗಾಂಧಿಯವರ ಕಡೆ ಸೆಳೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಆ ರೀತಿಯ ಪ್ರಯತ್ನಗಳನ್ನು ಮಾಡಿದಂತಹವರು. ಈ ಕರ್ನಾಟಕದಲ್ಲೂ ಆ ರೀತಿಯ ಪ್ರಯತ್ನ ಮಾಡುವುದಕ್ಕೆ ಸಾಧ್ಯ ಎಂದು ಹೇಳಿದರೆ, ಅದು ಸಾಧ್ಯವಿಲ್ಲ ಎಂದು ಹೇಳಬೇಕಾಗುತ್ತದೆ. 1977 ನೇ ಇಸವಿಯಲ್ಲಿ ನಡೆದಂತಹ ಚುನಾವಣೆಗೂ ಹಾಗೂ 1983 ರಲ್ಲಿ ನಡೆದಂತಹ ಚುನಾವಣೆಗೂ ವ್ಯತ್ಯಾಸ ಇದೆ

ಶ್ರೀ ವೈ ರಾಮಕೃಷ್ಣ.— ಮಾನ್ಯ ಸದಸ್ಯರು ಮಾತನಾಡುವಾಗ ರಾಷ್ಟ್ರದ ಪ್ರಧಾನ ಮಂತ್ರಿಗಳಾದಂತಹ ಶ್ರೀಮತಿ ಇಂದಿರಾಗಾಂಧಿಯವರು ಕೇರಳಕ್ಕೆ ಹೋದರು ಎಂಬುದಾಗಿ ಹೇಳಿದ್ದಾರೆ. ಕೇರಳ ರಾಜ್ಯಕ್ಕೂ ಏನು ಸಂಬಂಧ? ಅವರು ಆಯವ್ಯಯದ ಮೇಲೆ ಮಾತನಾಡಲಿ.

ಛೇರ್ಮನ್:— ಆಯವ್ಯಯದ ಮೇಲೆ ಮಾತನಾಡಿ.

ಶ್ರೀ ಸಿ. ಬೈರೇಗೌಡ.— ಆಗಲೇ ನನ್ನ ಭಾಷಣಕ್ಕೆ ಅಡ್ಡಿ ಪಡಿಸುವುದು ಪ್ರಾರಂಭವಾಯಿತು. ದಯಮಾಡಿ ಆ ಕೆಲಸವನ್ನು ಮಾಡಬೇಡಿ. ಸ್ವಲ್ಪ ಸಾವಧಾನವಾಗಿ ಹೇಳತಕ್ಕಂತಹ ಕೆಲವು ವಿಷಯಗಳನ್ನು ದಯವಿಟ್ಟು ಕೇಳಿ. ಹೆಗಲು ಮುಟ್ಟಿಕೊಂಡು ನೋಡಿಕೊಳ್ಳತಕ್ಕಂತಹ ವ್ಯವಹಾರ ಬೇಡ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಎಸ್ ಆರ್ ಬೊಮ್ಮಾಯಿ.—ಮಾನ್ಯ ಅಂದಿನ ಸಂಸದೀಯ ಸಚಿವರು ಈ ಆಯವ್ಯಯ ಮೇಲೆ ಚರ್ಚೆ ಮಾಡುವಾಗ ಆಕಾಶದಿಂದ ಕೆಳಗೆ ಇರುವುದು. ಭೂಮಿ ಮೇಲೆ ಇರುವಂಥಾ ಎಲ್ಲಾ ವಿಚಾರಗಳನ್ನೂ ಕೂಡ ಹೇಳಬೇಕು ಅನ್ನುವ ಅಭಿಪ್ರಾಯ ಹೊಂದಿದ್ದರು.

ಶ್ರೀ ವೈ. ರಾಮಕೃಷ್ಣ —ನಾವು ಮೊದಲಿನಿಂದ ಯಾವ ರೀತಿಯಾಗಿ ಒಂದು ಸ್ಟ್ಯಾಂಡರ್ಡ್‌ನಲ್ಲಿ ಮಾತನಾಡಿಕೊಂಡು ಬಂದಿದ್ದೇವೋ ಅದೇ ರೀತಿಯಾಗಿ ಈಗಲೂ ಬೆಳೆಸಿಕೊಂಡು ಬಂದಿದ್ದೇವೆ. ಬದಲಾವಣೆ ಮಾಡಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಈಗ ಆ ಬಗ್ಗೆ ಹೆಚ್ಚು ಚರ್ಚೆ ಮಾಡುವುದಕ್ಕೆ ತಯಾರಿಲ್ಲಾ. ಈಗ ಸಭೆಯ ಮುಂದೆ ಏನು ವಿಷಯ ಇದೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಎಲ್ಲರೂ ಅಧಿಕಾರವನ್ನು ಹೊಂದಿದ್ದಾರೆ. ನೀವು ಯಾವರೀತಿ ಒಂದು ಅಧಿಕಾರವನ್ನು ಹೊಂದಿದ್ದೀರೋ ಅದೇ ರೀತಿ ಅಧಿಕಾರವನ್ನು ಅವರೂ ಹೊಂದಿದ್ದಾರೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಭಾಷಣವನ್ನು ಮುಂದುವರೆಸುವುದಕ್ಕೆ ಅವಕಾಶ ಮಾಡಿ ಕೊಡಿ.

ಶ್ರೀ ಸಿ ಬೈರೇಗೌಡ.—ಇದು ಸಾಧ್ಯ ಇಲ್ಲ ಅನ್ನುವುದನ್ನು ನಾನು ಹೇಳುತ್ತೇನೆ 35 ವರ್ಷಗಳ ಕಾಲ ಈ ಒಂದು ಆಡಳಿತವನ್ನು ತಾವು ಗುತ್ತಿಗೆಗೆ ಪಡೆದಿದ್ದರೂ ಕೂಡ ಈ ಒಂದು ಸಮಸ್ಯೆಯನ್ನು ಬಗೆಹರಿಸ ಲಿಲ್ಲಾ. ಈಗ ಮಾತನಾಡಿದಂಥಾ ಮಾನ್ಯ ಸದಸ್ಯರಾದಂಥಾ ಚೌಡಯ್ಯನವರಾಗಲಿ, ಇತರೇ ಸದಸ್ಯರಾಗಲಿ ಯಾರೇ ಆಗಲಿ ರಾಜ್ಯದಲ್ಲಿ ಯಾವುದಾದರೂ ಒಂದು ಮೂಲೆಯಲ್ಲಿರುವ ಹಳ್ಳಿಗಳಿಗೆ ಹೋಗೋಣ ಈ ಒಂದು ಸಮಸ್ಯೆಗೆ ಉತ್ತರ ಸಿಕ್ಕುತ್ತದೆಯೋ ಅನ್ನುವುದನ್ನು ನೋಡೋಣ ಖಂಡಿತವಾಗಿಯೂ ಉತ್ತರ ಸಿಕ್ಕುವುದಿಲ್ಲ ಎಂದು ಹೇಳುತ್ತೇನೆ ನಗರಗಳಲ್ಲ ಅನೇಕ ಕಡೆಗಳಲ್ಲಿ ಕೊಳಚೆ ಪ್ರದೇಶಗಳು ಏನು ಇವೆ, ಅದನ್ನು ನಿರ್ಮೂಲನಾ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮಗಳನ್ನು ತೆಗೆದುಕೊಂಡು ಬಗೆಹರಿಸಿದಿರೇರಾ? ಈವೊತ್ತಿನ ದಿವಸ ಆ ಸ್ಥಳ ನೋಡಿದರೆ ಕೊಳೆತ ನಾರಿನಂತಾಗಿದೆ. ಇಲ್ಲನೇ ಯಾವ ಹಳ್ಳಿಯಲ್ಲಾದರೂ ಕೂಡ ಈ ಕುಡಿಯುವನೀರಿನ ಸಮಸ್ಯೆಯನ್ನು ಏನಾದರೂ ಬಗೆಹರಿಸಿದ್ದೀರಾ ಅಂತ ನೋಡಿದರೆ ಎಲ್ಲೂ ಇಲ್ಲ ಇಂಥಾ ಕೆಲಸಗಳನ್ನು ನಿಮ್ಮಿಂದ ಇದುವರೆಗೆ ಮಾಡಲು ಸಾಧ್ಯವಿಲ್ಲವೇ? ಈ ಆಯವ್ಯಯದ ಮೇಲೆ ಯಾವ ವ್ಯಾವ ಸದಸ್ಯರು ಮಾತನಾಡಿದ್ದಾರೆ, ಅವರು ಯಾವ್ಯಾವ ಕ್ಷೇತ್ರದಿಂದ ಬಂದಿದ್ದಾರೆ ಅಲ್ಲಿಗೆ ಹೋಗಿ ನೋಡೋಣ, ಯಾರ್ಯಾರು, ಅಧಿಕಾರದಲ್ಲಿದ್ದವರು ಅವರು ಈಗ ಸದಸ್ಯರಾಗಿ ಬಂದು ಈ ಆಯವ್ಯಯದಲ್ಲಿ ದ್ದಾಗ ತಮ್ಮ ತಮ್ಮ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸೌಲಭ್ಯವನ್ನು ಏನಾದರೂ ಮಾಡಿಸಿಕೊಟ್ಟಿದ್ದಾರೆಯೋ, ಇಲ್ಲವೇ ರಸ್ತೆ ಶಾಲೆ ಮುಂತಾದ ಸೌಕರ್ಯಗಳನ್ನು ಮಾಡಿಕೊಟ್ಟಿದ್ದಾರೆಯೋ, ಕಷ್ಟದಲ್ಲಿರತಕ್ಕಂಥಾ ಜನರಿಗೆ ಏನೇನು ಸಹಾಯ ಮಾಡಿದ್ದಾರೆ, ಅವರವರ ಕ್ಷೇತ್ರಗಳಿಗೆ ಎಷ್ಟು ಹಣವನ್ನು ಕೊಟ್ಟು ಏನೇನು ಸೌಲಭ್ಯಗ ಳನ್ನು ಮಾಡಿಕೊಟ್ಟಿದ್ದಾರೆ, ನಿಜವಾಗಿಯೂ ಕಷ್ಟದಲ್ಲಿರತಕ್ಕಂಥಾ ಜನರಿಗೆ ಏನು ಸಹಾಯ ಮಾಡಿಕೊಟ್ಟು ಅವರ ಬಗ್ಗೆ ಏನು ಒಂದು ಆಸಕ್ತಿ ವಹಿಸಿದ್ದಾರೆ ಇವೆಲ್ಲವನ್ನೂ ಅವರವರ ಕ್ಷೇತ್ರಕ್ಕೆ ಹೋಗಿ ನೋಡೋಣ ಎಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಆವಾಗ ಆ ಸದಸ್ಯರು ತಮ್ಮ ಹೆಗಲನ್ನು ಮುಟ್ಟಿ ಕೊಂಡರೆ ನಾವು ಅದನ್ನು ಒಪ್ಪಬೇಕಾಗುತ್ತದೆ.

ಇನ್ನೊಂದು ವಿಷಯ ಏನೆಂದರೆ ಈ ಕರ್ನಾಟಕ ರಾಜ್ಯದಲ್ಲಿ ಪುನಃಪುನಃ ಏನಾದರೂ ಒಂದು ತೊಂದರೆ ಕೊಡಬೇಕೆಂದು ಹಲವರು ಕಷ್ಟಪಡುತ್ತಿದ್ದಾರೆ ಅಲ್ಲಿ ಒಂದು ನಾಟಕ ಮಂಡಲಿ ಇದೆ. ಅದು ನಮ್ಮ ರಾಜ್ಯಕ್ಕೆ ಏನಾದರೂ ಕಷ್ಟ ಕೊಡಬೇಕೆಂದು ವ್ಯವಹಾರ ನಡೆಸುತ್ತಾ ಇದೆ. ಆ ನಾಟಕ ಅನ್ನುವುದನ್ನು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತು. ಅವರು ಹೋದಸಲ ಚುನಾವಣೆಯಲ್ಲಿ ಕರ್ನಾಟಕ ರಾಜ್ಯದಲ್ಲಿ 200 ಸೀಟುಗಳನ್ನು ಗೆಲ್ಲುತ್ತೇವೆ ಎಂದು ಬಹಳ ಪಣ ತೊಟ್ಟರು ಆದರೆ ಅವರು ಗೆದ್ದಿದ್ದೆಷ್ಟು, ಕೇವಲ 81 ಮಾತ್ರ.

ಶ್ರೀ ಗೋವಿಂದರಾಜ ಪಿ. ವಡೆಯರಾಜ್.—ಈ ಗೆದ್ದವರೆಲ್ಲಾ ನನ್ನ ಆತ್ಮೀಯ ಸ್ನೇಹಿತರು.

ಶ್ರೀ ಪಿ ರಾಂದೇವ್.—ತಾವು ಹೇಳಿದರಲ್ಲಾ ನಾಟಕ, ಆ ನಾಟಕ ಭ್ರಷ್ಟಾಚಾರದ ನಾಟಕವೋ ಅಥವಾ ಇನ್ನಾವ ನಾಟಕವೋ ಅನ್ನುವುದನ್ನು ಹೇಳುತ್ತೀರ? ಆ ನಾಟಕ ಇಲ್ಲಿ ನಡೆಯುವುದಕ್ಕೆ ಕಾರಣ. ಏನು ಅವೆ ಲ್ಲವನ್ನೂ ಕೂಡ ಹೇಳಿಬಿಡಿ.

ಶ್ರೀ ಗೋವಿಂದರಾಜ ಪಿ. ವಡೆಯರಾಜ್.—ನಮ್ಮದು ಒಂದು ನಾಟಕ ಆದರೆ ನಿಮ್ಮದು ಬಯಲು ನಾಟಕವಾಗುತ್ತದೆ.

ಉಪಾಧ್ಯಕ್ಷರು.—ದಯವಿಟ್ಟು ಬೇಗನೆ ಮುಗಿಸಿ. ಮಧ್ಯೆ ಮಧ್ಯೆ ಗಲಾಟೆ ಮಾಡಬೇಡಿ.

ಶ್ರೀ ಸಿ. ಬೈರೇಗೌಡ.—ಅದರ ಕಾರಣವನ್ನೂ ಸಹ ತಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಅದು ಇಲ್ಲಿ ಹೇಳುವ ಅವಶ್ಯಕತೆಯೂ ಇದೆ. 35 ವರ್ಷಗಳಿಂದ ಕರ್ನಾಟಕದಲ್ಲಿ ಈ ಗುತ್ತಿಗೆದಾರರ ಆಡಳಿತ ಏನು ನಡೆಯಿತು ಏನು ಇದೆ ಅದು ಹಿಮಾಲಯ ಪರ್ವತವನ್ನೂ ಕೂಡ ಮೀರಿಸಿದೆ. ಇದು ಬರೀ ಕರ್ನಾಟಕ ರಾಜ್ಯದಲ್ಲಿ ಒಂದರಲ್ಲೇ ಅಲ್ಲ, ಇಡೀ ದೇಶಾದ್ಯಂತ ನಡೆದಿದೆ. ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕಾದರೆ ಈವೊತ್ತಿನ ದಿವಸ ಜನ ಬಹಳ ಎಚ್ಚೆತ್ತಿದ್ದಾರೆ ಮೊದಲ ಹಾಗೆ ಇಲ್ಲ ನಾನು ಈ ಮಾತನ್ನು ಹಿಂದೆ ರಾಜ್ಯ ನಡೆಸಿದಂಥವರಿಗೆ ಮಾತ್ರ ಹೇಳುತ್ತಾ ಇಲ್ಲ, ಈಗ ನಡೆಸುತ್ತಾ ಇರತಕ್ಕಂಥಾ ಪಕ್ಷದವರಿಗೂ ಕೂಡ ಎಚ್ಚರಿಕೆ ಯನ್ನು ಕೊಡುತ್ತಾ ಇದ್ದೇನೆ. ನೀವೂ ಕೂಡ ಅವರ ಹಾಗೆ ಆಡಳಿತ ನಡೆಸುವುದಾದರೆ ನಿಮ್ಮನ್ನೂ ಕೂಡ

ಯಾರು ಕ್ಷಮಿಸುವುದಿಲ್ಲ. ಕ್ಷಮಿಸುವುದಕ್ಕೆ ಸಾಧ್ಯವೂ ಇಲ್ಲ ಯಾರಾದರೂ ಆಗಲಿ ನಾಟಕವನ್ನು ಸರಿಯಾಗಿ ಅಧ್ಯಯನ ಮಾಡದೇ ತಪ್ಪು ತಪ್ಪಾಗಿ ಅಧ್ಯಯನ ಮಾಡಿ ನಾಟಕ ಮಾಡಿದರೆ ಯಾವರೀತಿಯಾಗಿ ಕಪ್ಪು ಕಲೆಯನ್ನು ಹಾಕಿಕೊಳ್ಳಬೇಕಾಗುತ್ತದೋ ಆ ರೀತಿಯಾಗಿ ನೀವೂ ಕೂಡ ಕಪ್ಪು ಕಲೆಯನ್ನು ಹಾಕಿಕೊಳ್ಳಬೇಕಾಗುತ್ತದೆ; ಎನ್ನುವ ಎಚ್ಚರಿಕೆಯನ್ನು ಕೊಡುತ್ತೇನೆ. ನಿಮಗೆ ಈ ಸಂದರ್ಭದಲ್ಲಿ ಒಂದು ವಿಷಯವನ್ನು ನೆನಪು ಮಾಡಿಕೊಡುತ್ತೇನೆ ಅದೇನೆಂದರೆ ಶ್ರೀಮತಿ ಇಂದಿರಾಗಾಂಧಿಯವರ ರಾಜಕೀಯ ಮುಗಿದು ಹೋಗಿತ್ತು. ಅವರಿಗೆ ಮತ್ತೆ ಪುನರ್ಜನ್ಮ ಕೊಟ್ಟಿದ್ದು ನಮ್ಮ ಕರ್ನಾಟಕ ರಾಜ್ಯ. ಕರ್ನಾಟಕ ರಾಜ್ಯದಲ್ಲಿ ಚುನಾವಣೆಗೆ, ಅವರು ಬಂದಾಗ ಇಲ್ಲಿ ವಿಜಯನಗರದ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದರು. ಈಗ ಈ ವಿಜಯನಗರದ ವೀರರು ಏನು ಹೇಳುತ್ತಾರೆ? ಶ್ರೀಮತಿ ಇಂದಿರಾಗಾಂಧಿಯವರು ಚಿಕ್ಕಮಂಗಳೂರಿನಿಂದ ದೆಹಲಿಗೆ ಪಾರ್ಲಿಮೆಂಟಿಗೆ ಗೆಲ್ಲಲು ಈ ಕರ್ನಾಟಕ ರಾಜ್ಯಕ್ಕೆ ಬಂದಾಗ ವಿಜಯನಗರದಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದರು. ಈಗ ಮೈಕ್ರಾಸ್ಕೋಪ್ ಹಿಡಿದುಕೊಂಡು ನೋಡಿದರೂ ಕೂಡ ಈ ಉಕ್ಕಿನ ಕಾರ್ಖಾನೆ ಆಗುತ್ತದೆ ಅನ್ನುವುದು ಸಿಕ್ಕುವುದಿಲ್ಲ. ಇನ್ನು ಮಂಗಳೂರಿನಲ್ಲೊಂದು ಆಯಿಲ್ ರಿಫೈನರಿ ಮಾಡುತ್ತೇವೆಂದು ಹೇಳಿದರು ಅದಕ್ಕೆ ಮಂಜೂರಾತಿ ಬಂತಿದ್ದರೂ ಕೂಡ ಇನ್ನೂ ಸ್ಥಾಪನೆ ಮಾಡಿಲ್ಲ. ಹಾಗೆಯೇ ಬೆಂಗಳೂರು ನಗರ ಬೃಹತ್ ಉದ್ಯಮನಗರ ಅನ್ನುವುದು ಎಲ್ಲರಿಗೂ ಗೊತ್ತು. ಇಲ್ಲಿ ಐ ಟಿ ಐ ನಲ್ಲಿ ಸ್ವಿಚ್ ಕಾರ್ಖಾನೆಯೊಂದು ಬರುತ್ತದೆ ಅಂತ ಹೇಳಿದರು. ಅದೂ ಬರಲಿಲ್ಲ. ಇಲ್ಲಿಂದ ಅವರು ಗೆದ್ದು ಹೋದರು ಕೂಡ ಅವರು ಹೇಳಿದ್ದು ಇಲ್ಲಿಗೆ ಯಾವುದು ಬರಲಿಲ್ಲ, ಮೇಲಾಗಿ ಇಲ್ಲಿ ಅವರಿಗೆ ಓಟು ಕೊಟ್ಟು ಗೆದ್ದು ಹೋದ ಮೇಲೆ ಕರ್ನಾಟಕದ ಆದರ್ಶವಾದಂಥಾ ಜನರನ್ನು ಮರೆತಿದ್ದಾರೆ. ಈ ಒಂದು ನಾಟಕ ಮಂಡಳಿ 1981-82ರ ತನಕವೂ ಚೆನ್ನಾಗಿ ತನ್ನ ನಾಟಕವನ್ನು ಆಡಿತು. ನಂತರ ಜನತೆ ಎಚ್ಚೆತ್ತುಕೊಂಡು ಈ ಸಲದ ಚುನಾವಣೆಯಲ್ಲಿ ನಮಗೆ ಓಟು ಹಾಕಿ ಗೆಲ್ಲಿಸಿದ್ದಾರೆ. ಆದುದರಿಂದ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಆಡಳಿತ ನಡೆಸತಕ್ಕಂಥಾ ಈ ಪಕ್ಷ ಚುನಾವಣೆಯ ಸಮಯದಲ್ಲಿ ಏನು ಒಂದು ಭರವಸೆಗಳನ್ನು ಜನತೆಗೆ ಕೊಟ್ಟಿತ್ತೋ ಅವರು ನಮ್ಮ ಬಗ್ಗೆ ಏನು ಒಂದು ನಿರೀಕ್ಷೆಯನ್ನು ಇಟ್ಟುಕೊಂಡಿದ್ದರೋ ಅದರಂತೆ ನಡೆಯಬೇಕು ಇಲ್ಲದೇ ಹೋದರೆ ಅವರಿಗೆ ಆದಂತೆ ನಿಮಗೂ ಆಗುತ್ತದೆ. ಈಗ ಅವರು ಯಾವ ಸ್ಥಾನದಲ್ಲಿ ಕೂತಿದ್ದಾರೋ ಅದೇ ಸ್ಥಾನದಲ್ಲಿ ನೀವೂ ಸಹ ಕೂರಬೇಕಾಗುತ್ತದೆ. ನೀವು ಕೊಟ್ಟಿರುವಂಥಾ ಆಶ್ವಾಸನೆಗಳನ್ನು ಮರೆಯಬಾರದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈವೊತ್ತು ಜನತಾ ಪಕ್ಷ ಏನು ಅಧಿಕಾರಕ್ಕೆ ಬಂದಿದೆ ಈ ಸರ್ಕಾರವನ್ನು ಕೆಲವರು ಏನು ಹೇಳುತ್ತಿದ್ದಾರೆ ಎಂದರೆ ಇದು ಒಂದು ದಿನ ಇರುತ್ತದೋ, ಎರಡು ದಿನ ಇರುತ್ತದೋ ನಾಳೆ ಬೆಳಗಾಗುವವರೆಗೆ ಇರುತ್ತದೋ ಇಲ್ಲವೋ, ಸಂಜೆವರೆಗೆ ಇರುತ್ತದೋ ಇಲ್ಲವೋ, ನಾಳೆ ಸಂಜೆಯೊಳಗಾಗಿ ಇದು ಮುಳುಗಿ ಹೋಗುತ್ತದೆ ಎಂದು ಕೆಲವು ಹಿತಾಶಕ್ತಿಗಳು ಮಾತನಾಡಿಕೊಳ್ಳುತ್ತಿದ್ದಾರೆ. ಕೆಲವು ಹಿತಾಶಕ್ತಿಗಳು ಈ ಸರ್ಕಾರವನ್ನು ಉರುಳಿಸತಕ್ಕಂಥಾ ಪ್ರಯತ್ನ ಮಾಡುತ್ತಿದ್ದಾರೆ. ಅವರು ಯಾರೇ ಇರಲಿ, ಈ ಸರ್ಕಾರ ಸಹಪಕ್ಷಗಳಿಂದ ಕೂಡಿರುವುದನ್ನು ಯಾರು ಉರುಳಿಸುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ ಉರುಳಿಸುವಂಥಾ ಕೆಲಸ ಮಾಡಿದರೆ ಜನರು ಕ್ಷಮಿಸುವುದಕ್ಕೆ ಸಾಧ್ಯವೂ ಇಲ್ಲ. ಏತಕ್ಕೆಂದರೆ 35 ವರ್ಷಗಳಿಂದ ಇವರು ಆಡಳಿತ ಮಾಡುತ್ತಿದ್ದುದನ್ನು ಕಾದು ನೋಡಿ ಈವೊತ್ತಿನ ದಿವಸ ಅದರ ಸತ್ವ ಪರೀಕ್ಷೆ ನಡೆಸಿ ಈ ರೀತಿ ಮಾಡಿದ್ದಾರೆ. ಇದು ಒಂದು ವರವಾಗಿ ಈ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದಾರೆ. ಕುರ್ಚಿಗಾಗಿ ಅಂಟಿಕೊಂಡಿರುವ ಜನರೂ ಇದ್ದಾರೆ. ಅದು ಬಹಳ ದಿವಸ ಇರುವುದಿಲ್ಲ, ಶಾಶ್ವತವಲ್ಲ. ಕೇಂದ್ರದಲ್ಲಿ ಚರಣ್‌ಸಿಂಗ್ ಸರ್ಕಾರ ಏನಾಯಿತು ಅನ್ನುವುದನ್ನು ಅರ್ಥಮಾಡಿಕೊಂಡರೆ ಗೊತ್ತಾಗುತ್ತದೆ. ಇಲ್ಲೂ ಕೂಡ ಅಂಥಾ ಚರಣ್‌ಸಿಂಗ್ ರವರು ಇದ್ದಾರೆ. ಈ ಸರ್ಕಾರವನ್ನು ಉರುಳಿಸುವುದಕ್ಕೆ ಏನಾದರೂ ಪ್ರಯತ್ನ ಮಾಡಿದರೆ ಚರಣ್‌ಸಿಂಗ್ ಕತೆ ಏನಾಯಿತು ಹಾಗೆಯೇ ಆಗುತ್ತದೆ; ಇದನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕು. ಈ ಸಂದರ್ಭದಲ್ಲಿ ನಾನು ಹೇಳುವುದು ಇಷ್ಟೆ. ನೀವು ಚುನಾವಣೆ ಸಮಯದಲ್ಲಿ ಜನತೆಗೆ ಏನೇನು ಆಶಾಸನೆ ಕೊಟ್ಟಿದ್ದೀರೋ ಅವೆಲ್ಲವನ್ನೂ ಕೂಡ ಮಾಡಿ ಕೊಡಬೇಕು. ಇದರ ಬಗ್ಗೆ ವಿವರವಾಗಿ ಮುಂದೆ ಡಿಮ್ಯಾಂಡ್ಸ್ ಬಂದಾಗ ಹೇಳುತ್ತೇನೆ. ಬೆಂಗಳೂರು ನಗರದಲ್ಲಿ ಪತ್ರಿಕೆಗಳ ಕತ್ತು ಹಿಸುಕುವಂಥ ಕೆಲಸ ನಡೆಯುತ್ತಿದೆ. ಪತ್ರಿಕಾಲಯಗಳಿಗೆ ದಿಗ್ಬಂಧನ ಮಾಡುವುದು ನಡೆಯಿತು. ಪತ್ರಿಕೆಗಳಿಗೆ, ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ನಾವು ಸಂಪೂರ್ಣ ಬೆಂಬಲವನ್ನು ಕೊಡುತ್ತೇವೆಂದು ನಮ್ಮ ಮುಖ್ಯಮಂತ್ರಿಗಳು ಆಶಾಸನೆಯನ್ನು ಕೊಟ್ಟಿದ್ದಾರೆ. ಅದು ಅಷ್ಟೇ ಅಲ್ಲ, ಸಣ್ಣ ಪತ್ರಿಕೆಗಳ ಬಗ್ಗೆಯೂ ಅನುಕಂಪದಿಂದ ನೋಡಿ ಎಲ್ಲಾ ರೀತಿಯ ಉತ್ತೇಜನ ಕೊಡುವುದಕ್ಕೆ ಇಷ್ಟಪಡುತ್ತೇನೆಂದು ಹೇಳಿದ್ದಾರೆ. ಇದನ್ನೆಲ್ಲವನ್ನು ಕೂಡ ಮಾನ್ಯ ಸದಸ್ಯರುಗಳು ಗಮನಿಸದೆ "ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು ಸಿಕ್ಕಿತು" ಎನ್ನುವ ಹಾಗೆ ಸರ್ಕಾರವನ್ನು ಉರುಳಿಸಬೇಕು ಎಂದು ಉತ್ಸಾಹದಿಂದ ಹೊರಟಿರುವ ಜನ ಇನ್ನಾದರೂ ಈ ಯೋಜನೆಯನ್ನು ಬಿಡಬೇಕು. ಇಷ್ಟು ಮಾತುಗಳನ್ನು ಹೇಳಿ, ಅಧ್ಯ

ಕ್ಷರು ನನಗೆ ಇಲ್ಲಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ವೈ. ಕೆ ರಾಮಯ್ಯ (ಕುಣಿಗಲ್).— ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ತಂದಿರತಕ್ಕ ಆಯವ್ಯಯ ಪಟ್ಟಿಯನ್ನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಪಂಚದಲ್ಲಿ ಮನುಷ್ಯ ಮಾಡಲಿಕ್ಕೆ ಮೂರು ಅಸಾಧ್ಯ ಕೆಲಸಗಳು ಇವೆ

1. **To kiss a girl leading towards others**
2. **To climb a wall leading towards us**
3. ಅನೇಕ ಜನರು ಒಂದೇ ವಿಷಯವನ್ನು ಕುರಿತು ಮಾತನಾಡಿದ ಮೇಲೆ ಅದೇ ವಿಷಯವನ್ನು ಕುರಿತು ಮಾತನಾಡುವುದು. ಇಂಥ ಒಂದು ಪರಿಸ್ಥಿತಿ ನನಗೆ ಬಂದಿದೆ. ಮಾನ್ಯ ಅಧ್ಯಕ್ಷರೇ, ಬಹುಶಃ ನಾನು ನೋಡಿದ ಹಾಗೆ ಈ ಆಯವ್ಯಯದ ಮೇಲೆ ಚರ್ಚೆಯ ವಿವೇಚನೆಯನ್ನು ಶುರು ಮಾಡಿದ ಮೇಲೆ ಪ್ರತಿ ಹಂತದಲ್ಲಿಯೂ ಒಂದು ಪ್ರಶ್ನೆ ಏಳುತ್ತಿದೆ. ಬಡ್ಜೆಟ್ಟನ್ನು ಕುರಿತು ಮಾತನಾಡುವಾಗ ಭಾಷಣದ ವ್ಯಾಪ್ತಿ ಏನು, ಇದರ ಬಗ್ಗೆ ಹಿರಿಯ ಸದಸ್ಯರು ಕಿರಿಯ ಸದಸ್ಯರು, ಅನೇಕ ಜನರು ಇದನ್ನು ಕುರಿತು ಯೋಚನೆ ಮಾಡುತ್ತಿದ್ದಾರೆ ಮತ್ತೆ ಇದಕ್ಕೆ ಪೂರಕವಾಗಿ ನನಗೆ ಒಂದು ಪುಸ್ತಕವನ್ನು ಕೊಟ್ಟಿದ್ದಾರೆ. ಇದರಲ್ಲಿ 8ನೇ ಪುಟದಲ್ಲಿ ಇದರ ವ್ಯಾಪ್ತಿಯನ್ನು ಕುರಿತು ಬರೆದಿದ್ದುದಾಗಿದೆ ನೇರವಾಗಿ ನಾನು ವಿಷಯಕ್ಕೆ ಬರಬೇಕೆಂದರೆ, ಬಡ್ಜೆಟ್ ದೇಶಕ್ಕಾಗಲೀ, ಕುಟುಂಬಕ್ಕಾಗಲೀ, ಸಂಸ್ಥೆಗಾಗಲೀ ಪ್ರತಿಯೊಬ್ಬ ವ್ಯಕ್ತಿಗೂ ಇದರ ಅರಿವು ಬೇಕು ತನ್ನ ಆದಾಯ ಎಷ್ಟು ಖರ್ಚು ಎಷ್ಟು ಮಾಡಬೇಕು ಎಂದು ಕುರಿತು ಒಂದು ಪಟ್ಟಿಯನ್ನು ತಯಾರು ಮಾಡುವುದೇ ಬಡ್ಜೆಟ್. ಇಂಥ ಒಂದು ಆಯವ್ಯಯವನ್ನು ದೇಶ ಅಥವಾ ರಾಜ್ಯ ತಯಾರು ಮಾಡಿದಾಗ ಅದರ ಉತ್ತಮ ಗುಣಗಳು ಕೆಟ್ಟ ಗುಣಗಳು ಯಾವುವು ಎಂದು ನಾವು ಪರ್ಯಾಲೋಚನೆ ಮಾಡಬೇಕು. ಉಳಿದ ವಿಷಯಗಳು ನನಗೆ ಅನಿವಾರ್ಯವು ಅಲ್ಲ, ಅವಶ್ಯಕವೂ ಅಲ್ಲ.

ಇನ್ನು ಉತ್ತಮ ಬಡ್ಜೆಟ್ ಯಾವುದು ಎಂದರೆ, ಯಾವ ಆಯವ್ಯಯದಲ್ಲಿ ಅತಿ ಕಡಿಮೆ ತೆರಿಗೆ ಇರುತ್ತದೋ, ಎಲ್ಲಕ್ಕಿಂತ ಮಿಗಿಲಾಗಿ **that too in a country like ours which is under developed** ಉತ್ತಮ ಗುಣ ಯಾವುದು ? ಎಂದರೆ, ರಾಜ್ಯವಾಗಲೀ ರಾಷ್ಟ್ರವಾಗಲೀ ಇರುವಂಥ ಹಣದಲ್ಲಿ ಅತಿ ಹೆಚ್ಚಿನ ಹಣವನ್ನು ಉತ್ಪಾದನಾ ಕಾರ್ಯಗಳಿಗೆ ಉಪಯೋಗಿಸುವಂಥಾದ್ದು. ಈ ಒಂದು ದೃಷ್ಟಿಯಿಂದ ಈ ಆಯವ್ಯಯ ಬಹಳ ಪ್ರಾಮುಖ್ಯವಾದುದು. ನಮ್ಮ ದೇಶದಲ್ಲಿ ಇನ್ನೂ ಸಂಪತ್ತನ್ನು ಹಂಚಿಕೊಳ್ಳುವ ಸ್ಥಿತಿಗೆ ನಾವು ಬಂದಿಲ್ಲ. ನಾವಿರುವಂಥ ಸ್ಥಿತಿ ಸಂಪತ್ತನ್ನು ಸೃಷ್ಟಿಸುವಂಥಾದ್ದು. ಆದ್ದರಿಂದ ನಾವು ಈ ವರ್ಷದ ಬಡ್ಜೆಟ್ಟನ್ನು ನೋಡಿದಾಗ ಮತ್ತು ಹಿಂದಿನದನ್ನೂ ನಾವು ನೋಡಿದಾಗ ಹಿಂದಿನ ಯಾವ ಬಡ್ಜೆಟ್‌ಗಳೂ ಸಹ ಅಭಿವೃದ್ಧಿ ಕಾರ್ಯಗಳಿಗೆ ಕೊಡದೆ ಇರುವಷ್ಟು ಹಣವನ್ನು ಈ ಸಾರಿ ನಮ್ಮ ಮುಖ್ಯಮಂತ್ರಿಗಳು ಒದಗಿಸಿಕೊಟ್ಟಿದ್ದಾರೆ. ಆದ್ದರಿಂದ ಇದರಲ್ಲಿ ಉತ್ತಮ ಬಡ್ಜೆಟ್ಟಿಗೆ ಇರಬೇಕಾದಂಥ ಮುಖ್ಯ ಲಕ್ಷಣಗಳಲ್ಲಿ ಒಂದಾದ ನಿಯಮ ಈ ಅಭಿವೃದ್ಧಿ ಕಾರ್ಯಗಳಿಗೆ ಹಣ ಒದಗಿಸುವುದು, ಈ ನಿಯಮವನ್ನು ಅನುಸರಿಸುವುದರಲ್ಲಿ, ಈ ಕಾರ್ಯವನ್ನು ಮಾಡುವುದರಲ್ಲಿ ಬಹುಶ: ಈ ಆಯವ್ಯಯ ಬಹಳಷ್ಟು ಸಫಲವಾಗಿದೆ ಎಂದು ನನಗನ್ನಿಸುತ್ತದೆ. ಈ ಆಯವ್ಯಯವನ್ನು ಕುರಿತು ನಮ್ಮ ವಿರೋಧಪಕ್ಷದ ಸದಸ್ಯರು ಮಾತನಾಡುವಾಗ ಅನೇಕ ನ್ಯೂನತೆಗಳನ್ನು ಕಂಡಿದ್ದಾರೆ. ಮಾನ್ಯ ವೀರಪ್ಪ ಮೊಯ್ಲಿಯವರು ಅರ್ಥಮಂತ್ರಿಗಳಾಗಿದ್ದರು, ಅವರೂ ಸಹ ಇದರ ಬಗ್ಗೆ ಮಾತನಾಡುತ್ತಾ ಅನೇಕ ನ್ಯೂನತೆಗಳನ್ನು ತೋರಿಸಿದ್ದಾರೆ ನಾನು ಮಾನ್ಯ ವಿರೋಧಪಕ್ಷದ ನಾಯಕರನ್ನು ಒಂದು ಪ್ರಶ್ನೆ ಕೇಳಬೇಕಾಗಿದೆ ಅವರು ಈ ಸದನದಲ್ಲಿ ಸುಮಾರು ನಾಲ್ಕಾರು ಬಡ್ಜೆಟ್‌ಗಳನ್ನು ಮಂಡಿಸಿದ್ದಾರೆ. ಕಳೆದ 34 ವರ್ಷಗಳಿಂದಲೂ ಕಾಂಗ್ರೆಸ್ ಸರ್ಕಾರ ಆಡಳಿತದಲ್ಲಿದ್ದು ನೂರಾರು ಬಡ್ಜೆಟ್‌ಗಳನ್ನು ಅವರು ತಂದಿದ್ದಾರೆ ಅವರ ಪ್ರತಿಯೊಂದು ಬಡ್ಜೆಟ್ ಅವರು ಈಗ ಹೇಳುವಂಥ ನ್ಯೂನತೆಗಳಿಂದ ಹೊರತಾಗಿತ್ತೇ ? ಅವರು ನ್ಯೂನತೆಗಳು ಇಲ್ಲದಂಥ ಆಯವ್ಯಯವನ್ನು ಈ ಸದನದಲ್ಲಿ ಮಂಡಿಸಿದ್ದೇ ಆಗಿದ್ದರೆ, ಮಂಡಿಸಿದ್ದ ಪಕ್ಷದಲ್ಲಿ ಈ ದೇಶದಲ್ಲಿ ಆರ್ಥಿಕ ಪ್ರಗತಿ ಇಷ್ಟೊಂದು ಕುಂಠಿತವಾಗಲಿಕ್ಕೆ ಕಾರಣ ಏನು ? ಈ ದೇಶದಲ್ಲಿ ಹರಿದು ಹಂಚಿರುವ ಬಡತನ ಇನ್ನೂ ಇರಲಿಕ್ಕೆ ಕಾರಣ ಏನು ? ಈ ಅವ್ಯವಸ್ಥಿತಿಯುಳ್ಳ ಆರ್ಥಿಕ ಪರಿಸ್ಥಿತಿ ಇನ್ನೂ ಇರಲಿಕ್ಕೆ ಕಾರಣ ಏನು ? ಇದಕ್ಕೆ ಸೂಕ್ತ ಉತ್ತರವನ್ನು ಅವರು ಕೊಡಬೇಕಾಗುತ್ತದೆ

---

†ಈ ಚಿಹ್ನೆಯು ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಆದ್ದರಿಂದ ಮಾನ್ಯ ಮಿತ್ರರನ್ನು ನಾನು ಕೇಳಿಕೊಳ್ಳುವುದು ಇಷ್ಟೆ, ಈ ಆಯವ್ಯಯವಾಗಲೀ ಅಥವಾ ಯಾವುದೇ ತೀರ್ಮಾನವಾಗಲೀ ಅದು ನ್ಯೂನತೆಗಳನ್ನು ಹೊಂದಿರಲೇಬೇಕು. ಪ್ರತಿಯೊಂದರಲ್ಲಿಯೂ ನ್ಯೂನತೆಗಳು ಇದ್ದೇ ಇರುತ್ತವೆ. ಯಾವುದು ಕಡಿಮೆ ಯಾವುದು ಹೆಚ್ಚಾಗಿದೆ ಎನ್ನುವುದರ ಬಗ್ಗೆ ನಾವು ಇಲ್ಲಿ ಕುರಿತು ಯೋಚನೆ ಮಾಡಬೇಕಾಗುತ್ತದೆ. ನನಗೆ ತಿಳಿದ ಮಟ್ಟಿಗೆ ಈ ಆಯವ್ಯಯದಲ್ಲಿ ಕೊರತೆ ಎನ್ನುವುದು ಒಂದೇ ಒಂದು ದೋಷ. ಶ್ರೀ ಮಾನ್ ಮೊಯಿಲಿಯವರು ಈ ಕೊರತೆಯನ್ನು ಹೇಗೆ ತುಂಬಿಸುತ್ತಾರೆ, ತುಂಬಿಸಲಿಕ್ಕೆ ಹೇಗೆ ಸಾಧ್ಯ ಎಂದು ಪ್ರಶ್ನೆ ಮಾಡಿದ್ದಾರೆ, ನಾವು ಈ ದೇಶದ ಹಣವನ್ನು ಖರ್ಚು ಮಾಡುವಾಗ, ಸಾರ್ವಜನಿಕ ಹಣವನ್ನು ಖರ್ಚುಮಾಡುವಾಗ ಸರ್ಪ ಕಾವಲು ಕಾದ ಹಾಗೆ ನೋಡಿಕೊಂಡರೆ ಮಾತ್ರ ಈ ಕೊರತೆಯನ್ನು ತುಂಬುವುದಕ್ಕೆ ಸಾಧ್ಯ. ಇದು ಬಿಟ್ಟು ಯಾವುದನ್ನೂ ಯೋಚನೆ ಮಾಡದೆ ಆನೇಕಲ್‌ಗೆ ಏರೋಪ್ಲೇನ್‌ನಲ್ಲಿ ಹೋಗುವುದು, ಮತ್ತೊಂದು ಕಡೆಗೆ ಏರೋಪ್ಲೇನ್‌ನಲ್ಲಿ ಹೋಗುವುದು ಇಂಥ ಅನೀತಿಯುತವಾಗಿ ಸರ್ಕಾರದ ಹಣವನ್ನು ಖರ್ಚು ಮಾಡುವುದನ್ನು ನಿಲ್ಲಿಸಿದರೆ ಮಾತ್ರ ಈ ಕೊರತೆಯನ್ನು ತುಂಬುವುದಕ್ಕೆ ಸಾಧ್ಯ ?

ಶ್ರೀ ವೈ. ರಾಮಕೃಷ್ಣ.—ಆನೇಕಲ್‌ಗೆ ಯಾರು ಏರೋಪ್ಲೇನ್‌ನಲ್ಲಿ ಹೋಗಿದ್ದರು ? ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಾತನಾಡುವಾಗ ಯಾರಿಗೇ ಆಗಲೀ ಅವಹೇಳನವಾಗತಕ್ಕ ರೀತಿಯಲ್ಲಿ ಮಾತನಾಡಬಾರದು.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ಯಾವುದೇ ವ್ಯಕ್ತಿಯನ್ನು ಅವಹೇಳನಮಾಡತಕ್ಕ ರೀತಿಯಲ್ಲಿ ಮಾತನಾಡತಕ್ಕ ಸಣ್ಣತನಕ್ಕೆ ಹುಟ್ಟಿದವರು ನಾವಲ್ಲ. ಈ ದೇಶದಲ್ಲಿ ಏನು ಹಿಂದೆ ನಡೆಯಿತ್ತು ಅದನ್ನು ಹೇಳುವುದರ ಮೂಲಕ ಅಂಥ ನೀತಿಯನ್ನು ಬಿಟ್ಟು ಒಳ್ಳೆಯ ನೀತಿಯನ್ನು ರೂಢಿಸಿಕೊಳ್ಳಲಿಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು ಎನ್ನುವ ಉದ್ದೇಶದಿಂದ ಈ ಮಾತನ್ನು ನಾನು ಹೇಳಬೇಕಾಯಿತ್ತು. ಹಾಗೆಯೇ ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದರು, ಈ ರಾಜ್ಯದಲ್ಲಿ ರಾಜಕೀಯ ಅಭದ್ರತೆ ಇರುವುದರಿಂದ ಆರ್ಥಿಕ ಅಭದ್ರತೆಯನ್ನು ಇವರು ತಂದೊಡ್ಡಿದ್ದಾರೆ ಎಂದು ಪ್ರಜಾ ಪ್ರಭುತ್ವದಲ್ಲಿ ನಾವು ಒಂದು ವಿಷಯವನ್ನು ತಿಳಿದುಕೊಳ್ಳಬೇಕು. ಆಯವ್ಯಯವನ್ನು ರಚನೆ ಮಾಡುವಾಗ, ತಯಾರು ಮಾಡುವಾಗ ರಾಜ್ಯದ ಮುಖ್ಯಮಂತ್ರಿಗಳು ದಾರ ಅಥವಾ ಹಗ್ಗವನ್ನು ಯಾರ ಕೈಯಲ್ಲಿ ಕೊಟ್ಟಿರುತ್ತಾರೆ ? ಪ್ರಜಾಪ್ರಭುತ್ವದಲ್ಲಿ ಸರ್ಕಾರದ ಕಡಿವಾಣ ಯಾವುದು ಎನ್ನುವ ಅರಿವು ನಮಗೆ ಇರಬೇಕಾಗುತ್ತದೆ. ಆಳುವ ಪಕ್ಷ ತನ್ನ ಕಡಿವಾಣವನ್ನು ವಿರೋಧ ಪಕ್ಷದವರ ಕೈಯಲ್ಲಿ ಕೊಡಬೇಕಾಗುತ್ತದೆ. ಆಳುವ ಪಕ್ಷವನ್ನು ಬಿಗಿಯಾದ ಕಡಿವಾಣದೊಂದಿಗೆ ಬಿಗಿ ಮಾಡತಕ್ಕದ್ದು ವಿರೋಧ ಪಕ್ಷಕ್ಕೆ ಸೇರಿದ್ದು. ಆಳುವ ಪಕ್ಷದವರು ತಪ್ಪು ದಾರಿಗೆ ಹೋದಾಗ ಅವರನ್ನು ಕಡಿವಾಣದೊಂದಿಗೆ ಎಳೆದು ನಿಲ್ಲಿಸತಕ್ಕ ಕೆಲಸವನ್ನು ನೀವು ಮಾಡಬೇಕು. ಇಂಥ ಒಂದು ಶಕ್ತಿಯನ್ನು ಗಳಿಸಿಕೊಳ್ಳಬೇಕು. **bridle of the country is in the hands of opposition parties, not elsewhere.**

4-30 p. m.

ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡತಕ್ಕಂಥ ಕಾಲದಲ್ಲಿ ಈ ದೇಶದಲ್ಲಿ ಹಣದುಬ್ಬರವನ್ನು ತಡೆಯುವುದಕ್ಕೆ ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ ಎಂದು ಹೇಳಿದರು. ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ಬರೀ ಬಿಳಿ ಪೇಪರ್ ಮೇಲೆ ಪ್ರಿಂಟ್ ಮಾಡುವುದರಿಂದ ಈ ಹಣದುಬ್ಬರವನ್ನು ಖಂಡಿತವಾಗಿ ತಡೆಯುವುದಕ್ಕೆ ಸಾಧ್ಯವಿಲ್ಲ. ದಿನೇ ದಿನೇ ಈ ಹಣದುಬ್ಬರ ಜಾಸ್ತಿಯಾಗುತ್ತಾ ಇದೆ. ಎಂದಿನವರೆಗೆ ಈ ದೇಶದಲ್ಲಿ ಕಷ್ಟಪಟ್ಟು ಸಂಪಾದನೆ ಮಾಡಿದ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡುವಂತಹ ಮನೋಭಾವ ಬರುವುದಿಲ್ಲವೋ ಅಲ್ಲಿಯವರೆಗೂ ಈ ಹಣದುಬ್ಬರ ನಿಲ್ಲುವುದಿಲ್ಲ. ಈ ಬಗ್ಗೆ ನಾನೊಂದು ಉದಾಹರಣೆಯನ್ನು ಕೊಡುತ್ತೇನೆ. ನನ್ನ ತೋಟದಲ್ಲಿ ಕೆಲಸಮಾಡುವಂತಹ ಒಬ್ಬ ಕೂಲಿಗಾರ ನಾನು ಕೊಟ್ಟ ತನ್ನ 7 ರೂಪಾಯಿಗಳನ್ನು ತೆಗೆದುಕೊಂಡು ಸಂತೆಗೆ ಹೋದರೆ 'ರಾಗಿ ಬೆಲೆ ಎಷ್ಟು' ಅಂತ 3 ಅಂಗಡಿಗಳಲ್ಲಿ ವಿಚಾರಿಸುತ್ತಾನೆ. ಅದೇ ನಾನು ಬೆಂಗಳೂರಿನಲ್ಲಿ ಒಂದು ಅಂಗಡಿಗೆ ಟೂತ್‌ಪೇಸ್ಟ್ ಕೊಂಡುಕೊಳ್ಳುವುದಕ್ಕೆ ಹೋದರೆ, ಅವನು ಅದರ ಬೆಲೆ ಎಷ್ಟು ಹೇಳಿದ, ಬೇರೆ ಅಂಗಡಿಯಲ್ಲಿ ಇದರ ಬೆಲೆ ಕಡಿಮೆ ಇದೆಯೋ ಅಥವಾ ಹೆಚ್ಚು ಇದೆಯೋ ಎಂದು ಚಿಂತನೆ ಮಾಡುವುದಿಲ್ಲ. ಇದಕ್ಕೆ ಕಾರಣವೇನೆಂದರೆ, ನಮ್ಮ ದೇಶದಲ್ಲಿ ಹಣದ ಚಲಾವಣೆ ಅಂದರೆ ಮನಿ ಸರ್ಕುಲೇಷನ್ ಜಾಸ್ತಿಯಾಗಿದೆ. ಈ ಹಣದ ಚಲಾವಣೆ ಜಾಸ್ತಿಯಾಗುವುದಕ್ಕೆ ಕಾರಣವೇನೆಂದರೆ, ಅನೀತಿಯುತವಾದ ಮಾರ್ಗದಲ್ಲಿ ನಾವು ಹಣವನ್ನು ಗಳಿಸುವುದು ಹೆಚ್ಚಾಗಿದೆ. ಒಬ್ಬ ಮನುಷ್ಯನಿಗೆ ಬರುವ ಸಾವಿರ ರೂಪಾಯಿಗಳ ಸಂಬಳದಲ್ಲಿ ಅವನು ಜೀವನ ಮಾಡುವುದಕ್ಕೆ ಸಾಧ್ಯವಿದ್ದಾಗ ಅದಕ್ಕಿಂತ ಹೆಚ್ಚಿಗೆ ಹಣವನ್ನು ಖರ್ಚುಮಾಡುವುದಕ್ಕೆ ಸಾಧ್ಯವಿಲ್ಲ

ಅದೇ ! ಸಾವಿರ ರೂಪಾಯಿಗಳ ಜೊತೆಗೆ 2 ಸಾವಿರ ರೂಪಾಯಿಗಳು ಬೇರೆ ಮೂಲ ಗಳಿಂದ ಬಂದರೆ ಅವನಿಗೆ ಹಣದ ಬೆಲೆ ಗೊತ್ತಾಗುವುದಿಲ್ಲ ಆಗ ಹಣದ ಚಲಾವಣೆ ಜಾಸ್ತಿಯಾಗುತ್ತದೆ. ಆದ್ದರಿಂದ ಈ ಹಣದುಬ್ಬರವನ್ನು ತಡೆಯುವಂತಹ ಕೆಲಸ ಬರೀ ಪೇಪರ್‌ನಲ್ಲಿ ಪ್ರಿಂಟ್ ಮಾಡಿದರೆ ಅಥವಾ ಆ ಬಗ್ಗೆ ಲೇಖನವನ್ನು ಪುಸ್ತಕದಲ್ಲಿ ಬರೆದರೆ ಅದು ಖಂಡಿತ ಸಾಧ್ಯವಿಲ್ಲ. ಇಲ್ಲಿ ಯಾರಾದರು ಈ ಹಣದುಬ್ಬರ ವನ್ನು ತಡೆಯಬೇಕೆಂದು ಇಷ್ಟವಿದ್ದರೆ ಸಾರ್ವಜನಿಕ ಜೀವನದಲ್ಲಿ ತುಂಬಿ ತುಳುಕುತ್ತಿರುವ ಈ ಭ್ರಷ್ಟಾಚಾರ ವನ್ನು ಮೊದಲು ಕಡಿಮೆ ಮಾಡಬೇಕು. ನಾವು ಅನೀತಿಯುತವಾಗಿ ಏನು ಹಣ ಸಂಪಾದನೆ ಮಾಡು ತ್ತಿದ್ದೇವೆ ಅದನ್ನು ಮೊದಲು ನಿಲ್ಲಿಸಬೇಕು. ಅನೀತಿಯುತವಾದ ಮಾರ್ಗದಲ್ಲಿ ಹಣ ಸಂಪಾದನೆ ಮಾಡು ವುದನ್ನು ನಿಲ್ಲಿಸಿದರೆ ಸಿಕ್ಕಾಪಟ್ಟೆ ಖರ್ಚು ಮಾಡುವುದನ್ನು ಕಂಟ್ರೋಲ್ ಮಾಡಿದಹಾಗಾಗುತ್ತದೆ. ಈ ದಿಶೆ ಯಲ್ಲಿ ಹಣದುಬ್ಬರವನ್ನು ತಡೆಯುವುದಕ್ಕೆ ಪ್ರಯತ್ನ ಮಾಡಬಹುದು ಆಮೇಲೆ ನಮ್ಮ ವಿರೋಧಪಕ್ಷದ ನಾಯಕರು ಇನ್ನೂ ಕೆಲವು ವಿಷಯಗಳನ್ನು ಈ ಸಭೆಯ ಗಮನಕ್ಕೆ ತಂದರು ನಾನಂತೂ ಈ ಸಭೆಗೆ ಹೊಸಬ. ಈ ಕ್ಯಾಪಿಟೇಷನ್ ಫೀ ಬಗ್ಗೆ ಮತ್ತು ವೃತ್ತಿತೆರಿಗೆಯ ಬಗ್ಗೆ ಇನ್ನೂ ಅನೇಕ ವಿಷಯಗಳನ್ನು ಅವರು ಹೇಳಿದರು. ಈ ಖಾಯಿಲೆಯನ್ನು ಯಾರು ತಂದವರು ? **Who brought this society ? Who brought this disease to the administration ?** ನಾವು ಜನತಾ ಪಕ್ಷದವರು ಅದನ್ನು ತಂದೆವೇ ? ಜಾತಿ ಜಾತಿಗಳಿಗೆ ನೀವು ಇಂಜಿನಿಯರಿಂಗ್ ಕಾಲೇಜುಗಳನ್ನು ಕೊಟ್ಟಿರಿ. ಜಾತಿಜಾತಿಗಳ ತಲೆಯನ್ನು ನೋಡಿಕೊಂಡು ಮೆಡಿಕಲ್ ಕಾಲೇಜುಗಳನ್ನು ಕೊಟ್ಟಿರಿ. ಇವತ್ತು ನಮ್ಮನ್ನು ಮಾಡಿ ಎಂದು ಹೇಳುತ್ತಿದ್ದೀರಿ ; ಏತಕ್ಕೆ ಮಾಡಿದಿರಿ ಇದನ್ನು ನೀವು ? ಈ ವೃತ್ತಿ ತೆರಿಗೆಯನ್ನು ತಂದವರು ಯಾರು ? ಈ ಖಾಯಿಲೆಯನ್ನು ತಂದು ಹರಡಿ ಈ ಸಮಾಜದಲ್ಲಿ ರೋಗರುಜಿನಗಳನ್ನು ತಂದು ಅದು ಹುಳು ಹತ್ತಿಕೊಂಡು ತಿನ್ನುವಹಾಗೆ ಮಾಡಿ ಇವತ್ತು ಈ ಸರ್ಕಾರಕ್ಕೆ ಸರಿ ಮಾಡಿ ಎಂದು ಹೇಳಿದರೆ ಇದಕ್ಕೆ ಯಾರು ಹೊಣೆ ? ನಾವೇನಾದರೂ 2 ತಿಂಗಳಲ್ಲಿ ಯಾವುದಾದರೂ ಖಾಯಿಲೆಯನ್ನು ತಂದಿದ್ದರೆ ಅದಕ್ಕೆ ನಾವು ಇನ್‌ಜೆಕ್ಷನ್ ಕೊಡುತ್ತೇನೆ, ಅಪರೇಷನ್ ಮಾಡುತ್ತೇನೆ. ಮೆಡಿಸನ್ ಬೇಕಾದರೆ ಕೊಡುತ್ತೇನೆ. ಮಾನ್ಯ ಅಧ್ಯಕ್ಷರೇ, ಲಿವರ್‌ಗೆ ಸಿರಿಲಿಸಿಸ್ ಎನ್ನುವ ಖಾಯಿಲೆ ಬರುತ್ತದೆ. ಈ ದೇಶದಲ್ಲಿ 35 ವರ್ಷಗಳ ಕಾಲ ಅಧಿಕಾರ ಮಾಡಿದವರು ಈ ಸಿರಿಲಿಸಿಸ್ ಖಾಯಿಲೆ ತರಹ ಮಾಡಿದ್ದಾರೆ.

(ಇಂಟರ್‌ರಪ್ಷನ್ಸ್)

Mr. Deputy Speaker.--come to the point and close it.

ಶ್ರೀ ವೈ. ರಾಮಕೃಷ್ಣ.—ಈಗಿನ ಮಾನ್ಯ ಮುಖ್ಯ ಮಂತ್ರಿಯವರು ಎಷ್ಟೋ ವರ್ಷಗಳ ಕಾಲ ಹಣಕಾಸಿನ ಮಂತ್ರಿಗಳಾಗಿದ್ದರು. ಶ್ರೀ ರಾಮಕೃಷ್ಣ ಹೆಗ್ಗಡೆಯವರಿಗೆ ಈ ದೇಶದ ಕಾಂಗ್ರೆಸ್ ಇತಿಹಾಸ ದಲ್ಲಿ ಅವರದೇ ಒಂದು ಸ್ಥಾನ ಇರಲಿಲ್ಲವೇ ? ಅವರು ಶಾಸಕರಾಗಿ ಇರಲಿಲ್ಲವೇ ? ಮಂತ್ರಿಗಳಾಗಿರಲಿಲ್ಲವೇ ? ಇದನ್ನು ಅವರು ಮರೆತುಬಿಟ್ಟಿದ್ದಾರೆ.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮಕೃಷ್ಣರವರು ನನಗಿಂತ ಹಿರಿಯರು ಅವರಲ್ಲಿ ನನ್ನ ಕೋರಿಕೆ ಇಷ್ಟೆ ; ಅವರು ನಮ್ಮ ಜೊತೆಯಲ್ಲಿ ಸ್ವಲ್ಪ ದಿವಸ ಇದ್ದರು. ಆದರೂ ನಾನು. ಯಾವುದಕ್ಕೂ ಧೊಡ್ಡವರ ಹತ್ತಿರಕ್ಕೆ ಹೋಗುವುದಿಲ್ಲ. ನಾನು ಇಲ್ಲಿ ಒಂದು ವಿಷಯವನ್ನು ಹೇಳುತ್ತೇನೆ ಅಷ್ಟೆ. ಇಲ್ಲಿ ವ್ಯಕ್ತಿ ಪ್ರಾಮುಖ್ಯವಲ್ಲ ; ನನಗಂತೂ ಅದು ಅಲ್ಲನೇ ಅಲ್ಲ. ನನಗೆ ಒಂದು ಮೌಲ್ಯ, ಒಂದು ಸಿದ್ಧಾಂತ ಮತ್ತು ಒಂದು ಪಕ್ಷ ಮುಖ್ಯ ಶ್ರೀ ಮಾನ್ ರಾಮಕೃಷ್ಣ ಹೆಗಡೆಯವರು ಮಾಡಿ ದ್ದಾರೆ ಎಂದರೆ ನಾನು ಮಾಡಿದ್ದೇನೆ ಎಂದು ಅರ್ಥವಲ್ಲ. ನಾವು ಮಾಡಿದ್ದು, ನೀವು ಮಾಡಿದ್ದು ಮುಖ್ಯ ವಲ್ಲ. 14 ವರ್ಷಗಳ ಕಾಲ ವಿರೋಧ ಪಕ್ಷದಲ್ಲಿ ಇದ್ದುಕೊಂಡು ಏನೊಂದು ತ್ಯಾಗ ಮಾಡಿದ್ದಾರೆ ಎಂಬುದು ನಮಗೆ ಗೊತ್ತಿದೆ ಅವರನ್ನು ಏತಕ್ಕೆ ಉದಾಹರಣೆಗೆ ತೆಗೆದುಕೊಳ್ಳುತ್ತೀರಿ ? ನಿಮ್ಮನ್ನು ಏತಕ್ಕೆ ಉದಾಹರಣೆಗೆ ತೆಗೆದುಕೊಳ್ಳಬಾರದು ? ಮೊದಲು ನಿಮ್ಮದನ್ನು ಹೇಳಿ ಮಾನ್ಯ ಅಧ್ಯಕ್ಷರೇ. ನನಗೆ ತಿಳಿದ ಮಟ್ಟಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.** ಇದು ತಮಗೆ ಗೊತ್ತಿದೆಯೋ ? ನಮಗೆ ಗೊತ್ತಿದೆ.

(Interruptions)

Sri Y. Ramakrishna.--No. No. Ha should apologize. There must be a limit to all this.

Mr. Deputy Speaker.--That is expunged from the proceedings.

**The mather is expryed as ordred by the chair

Mr. Y. K. Ramaih.—I will have to call other Members also. please conclude.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ನಾನು ಇನ್ನು ಒಂದೇ ಒಂದು ವಿಷಯವನ್ನು ತಮ್ಮ ಗಮನಕ್ಕೆ ತಂದು ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ. ಈ ಸದನ ಮುಂದೆ ಮಂಡಿಸಿರುವ ಆಯವ್ಯಯ ಪಟ್ಟಿಯನ್ನು ನಾವು ತೆಗೆದು ನೋಡಿದಾಗ ಎಷ್ಟು ಸಾಲದ ಹಣವನ್ನು ತೀರಿಸಬೇಕಾಗಿದೆ ಎಂಬುದನ್ನು ನಮ್ಮ ರಾಜ್ಯಸರ್ಕಾರದವರು ಅದರಲ್ಲಿ ಹೇಳಿದ್ದಾರೆ. ಈ ದೇಶದಲ್ಲಿ ಹಿಂದೆ ಮಂಡಿಸಿದಂತಹ ಎಲ್ಲಾ ಆಯವ್ಯಯ ಪಟ್ಟಿಗಳು ಉತ್ತಮವಾಗಿದ್ದಂತಹ ಪಕ್ಷದಲ್ಲಿ, ಎಲ್ಲಾ ನ್ಯೂನತೆಗಳಿಂದ ಹೊರತಾಗಿ ಇದ್ದಂತಹ ಪಕ್ಷದಲ್ಲಿ ಉತ್ತಮವಾದ ಆರ್ಥಿಕ ಸ್ಥಿತಿ ನಮ್ಮ ರಾಜ್ಯದಲ್ಲಿರಬೇಕಾಗಿತ್ತು, ಅಪಾರವಾದ ಹಣ ಇಲ್ಲಿರಬೇಕಾಗಿತ್ತು, ಇಲ್ಲಿ ಸಂಪತ್ತು ತುಂಬಿ ತುಳುಕಾಡಬೇಕಾಗಿತ್ತು, ಇದು ರಾಮರಾಜ್ಯವಾಗಿ ಕಂಗೊಳಿಸಬೇಕಾಗಿತ್ತು. ಆದರೆ ಇವತ್ತು ಪರಿಸ್ಥಿತಿ ಹಾಗಿಲ್ಲ. ನಮ್ಮ ಲೆಕ್ಕದ ಪ್ರಕಾರ 38 ಕೋಟಿ ರೂಪಾಯಿಗಳ ಸಾಲದ ಹಣಕ್ಕೆ ಬಡ್ಡಿ ಸೇರಿಸಿ ವಾಪಸ್ ಕೊಡಬೇಕಾಗಿದೆ. ಇಂತಹ ಒಂದು ಪರಿಸ್ಥಿತಿಯನ್ನು ಆರ್ಥಿಕ ಅವ್ಯವಸ್ಥೆಯನ್ನು ತಂದಂತಹ ನಮ್ಮ ಹಳೆಯ ಮಿತ್ರರು ಹೇಳುವುದು ಇಷ್ಟೆ, ಇತ್ತೀಚೆಗೆ ತಂದಿರುವಂತಹ ಆಯವ್ಯಯಪಟ್ಟಿ ರೂರಲ್ 'ಒರಿಯೆಂಟೆಡ್ ಆಗಿದೆ ಹಳ್ಳಿಗಾಡುಗಳ ಅಭಿವೃದ್ಧಿಗಾಗಿ ಈ ಆಯವ್ಯಯದಲ್ಲಿ ಕೊಟ್ಟಂತಹ ಪ್ರಾಮುಖ್ಯತೆಯನ್ನು ಬಹುಷ: ಹಿಂದೆ ಯಾವತ್ತೂ ಕೊಟ್ಟಿಲ್ಲ. ಅದಕ್ಕಾಗಿ ನಾನು ನಮ್ಮ ಜನತಾ ಮುಖಂಡರುಗಳನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಉಪಾಧ್ಯಕ್ಷರೇ, ನನಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

Mr. Deputy Speaker.--Up to 7 o'clock we shall sit here and discuss the matter. ನಾನು ಎಲ್ಲರಿಗೂ ಅವಕಾಶ ಕೊಡುತ್ತೇನೆ. ಈಗ ಮಾನ್ಯ ಹನುಮಂತರಾಯಪ್ಪನವರು ಮಾತನಾಡಲಿ.

ಶ್ರೀ ಟಿ. ಎಚ್. ಹನುಮಂತರಾಯಪ್ಪ (ಬೆಳ್ಳಾವಿ).—ಮಾನ್ಯ ಉಪಾಧ್ಯಕ್ಷರೇ, ಈ 1983-84ನೇ ಸಾಲಿನ ಆಯವ್ಯಯ ಪಟ್ಟಿಯ ವಿಷಯದಲ್ಲಿ ಮಾನ್ಯ ಸದಸ್ಯರನೇಕರು ಬಹಳ ವಿಷಯಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಆದರೆ ನಾನು ಈ ಬಗ್ಗೆ 3-4 ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತಿದ್ದೇನೆ. ಈ ಆಯವ್ಯಯ ಪಟ್ಟಿಯಲ್ಲಿ ಕೊಟ್ಟಿರುವುದನ್ನು ನೋಡಿದರೆ ಈ ಸಣ್ಣ ನೀರಾವರಿ ಯೋಜನೆಗಳಿಗೆ ಮಾತ್ರ ಹೆಚ್ಚಿನದಾಗಿ ಆದ್ಯತೆಯನ್ನು ಕೊಟ್ಟಿದ್ದಾರೆ. ಈ ಸಣ್ಣ ನೀರಾವರಿ ಯೋಜನೆಗಳು ಕಡಿಮೆ ಇರತಕ್ಕಂಥ ತಾಲ್ಲೂಕುಗಳಲ್ಲಿ ಅದನ್ನು ತಾಲ್ಲೂಕು ಬೋರ್ಡ್‌ಗಳಿಂದ ನಡೆಸಿಕೊಡಬೇಕೆಂದು ನಾವು ಕೇಳಿದ್ದೇವೆ. ಆದರೆ ತಾಲ್ಲೂಕು ಬೋರ್ಡ್‌ಗಳ ಪರಿಸ್ಥಿತಿ ಏನಾಗಿದೆ ಎಂದರೆ ಅವರಲ್ಲಿರುವಂತಹ ಹಣಕಾಸಿನ ಮುಗಟ್ಟಿನಿಂದಾಗಿ 10 ಎಕರೆಗಳಿಗಿಂತ ಕಡಿಮೆ ಪ್ರದೇಶವನ್ನು ನೀರಾವರಿ ಮಾಡತಕ್ಕಂಥ ದಿಶೆಯಲ್ಲಿ ಅವರು ಇವತ್ತಿನವರೆಗೆ ಯಾವ ಕೆಲಸಗಳನ್ನೂ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಲೋಕೋಪಯೋಗಿ ಇಲಾಖೆಯವರು ಈ ಕಷ್ಟಗಳನ್ನು ನಿವಾರಣೆ ಮಾಡಬೇಕೆಂದರೆ, 5-10 ಎಕರೆ ಬರತಕ್ಕಂಥ ಸಣ್ಣ ನೀರಾವರಿ ಯೋಜನೆಗಳನ್ನು ಉತ್ತಮಪಡಿಸಬೇಕಾದು ಅಧ್ಯ ಕರ್ತವ್ಯವಾಗಿದೆ. ಅವರು ಈ ಒಂದು ಕೆಲಸ ಕಾರ್ಯಗಳನ್ನು ಮಾಡಿದರೆ ಖಂಡಿತವಾಗಿಯೂ ಹೆಚ್ಚಿನ ಅನುಕೂಲವಾಗುತ್ತದೆಂದು ನಾನಾದರೂ ಭಾವಿಸುತ್ತೇನೆ. ಇನ್ನೊಂದು ವಿಚಾರ ಏನಿದೆ ಎಂದರೆ, ಈ ಡಿಪಿಎಪಿ ಪ್ರೋಗ್ರಾಂ ಅನೇಕ ಜಿಲ್ಲೆಗಳಲ್ಲಿ ಜಾರಿಗೆ ಬಂದಿದೆ. ಈ ಪ್ರೋಗ್ರಾಂನಲ್ಲಿ ಅಲ್ಲೆಲ್ಲಾ ನೂರಾರು ಕೆರೆಗಳನ್ನೂ ಕಟ್ಟಿಸಿದ್ದಾರೆ. ಹೀಗೆ ಕೆರೆಗಳನ್ನು ಕಟ್ಟಿಸತಕ್ಕಂಥ ಕಾಲದಲ್ಲಿ ಅನೇಕರ ಜಮೀನುಗಳು ಮುಳುಗಡೆಯಾಗಿವೆ. ಅವರು ಜಮೀನು ಮತ್ತು ಫಸಲನ್ನು ಕಳೆದುಕೊಂಡಿರುವುದಲ್ಲದೇ ಇಲ್ಲಿಯವರೆಗೆ ಅವರಿಗೆ ಕಾಂಪೆನ್‌ಸೇಷನ್ ಸಿಕ್ಕಿಲ್ಲ. ಅವರ ಕಡೆಯಿಂದ ಇವತ್ತು ಅನೇಕ ಬೇಡಿಕೆಗಳು ಬಂದಿದೆ. ಇವತ್ತು ಆ ರೈತರಿಗೆಲ್ಲಾ ತೊಂದರೆಯಾಗಿದೆ. ಇಂತಹ ತೊಂದರೆಯನ್ನು ಮೊದಲು ನಿವಾರಣೆ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಸಲಹೆ ಮಾಡುತ್ತಿದ್ದೇನೆ. ಇನ್ನೊಂದು ವಿಚಾರ ಏನಿದೆ ಎಂದರೆ ಕೆರೆಗಳ ಹಿಂಭಾಗದಲ್ಲಿರತಕ್ಕಂಥ ಸ್ಥಳದಲ್ಲಿ ಇವತ್ತು [illegible] ಆಗಿಲ್ಲ. ಇದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತಾ ಇದೆ. ಬಂಜರು ಜಮೀನು ಫಡ [illegible] ಹ ರೈತರಿಗೆ ಸಾಗುವಳಿ ಮಾಡುವುದೇ ಕಷ್ಟವಾಗಿರುವ ಕಾಲದಲ್ಲಿ ಸರ್ಕಾರದವರು ಅಲ್ಲೆಲ್ಲಾ ಬುಲ್ಡೋಜರ್ ಉಪಯೋಗಿಸಿಕೊಂಡು ಅಚ್ಚುಕಟ್ಟು ಮಾಡಿಸಿಕೊಟ್ಟು, ಅದಕ್ಕೆ ತಗಲತಕ್ಕಂಥ ಖರ್ಚನ್ನು ಕಂತಿನಲ್ಲಿ ವಸೂಲು ಮಾಡಿದರೆ ಅವರೆಲ್ಲಾ ಹೆಚ್ಚಿನ ಬೆಳೆಯನ್ನು ಬೆಳೆಯುವುದಕ್ಕೆ ಅವಕಾಶವಾಗುತ್ತದೆಂದು ಸಲಹೆ ಮಾಡುತ್ತಿದ್ದೇನೆ. ಆಮೇಲೆ ಈ ಫುಡ್, ಕೆರೋಸಿನ್ ಆಯಿಲ್ ವಿಚಾರದಲ್ಲಿ ನಮ್ಮ ಮಿತ್ರರುಗಳು ಆಗಲೇ ಹೇಳಿದ್ದಾರೆ. ಈ ವಿಚಾರದಲ್ಲಿ ಹೆಚ್ಚಿನ ಸೌಭ್ಯಗಳೆಲ್ಲಾ ಪಟ್ಟಣದವರಿಗೆ ಉಪ

ಯೋಗವಾಗುತ್ತಾ ಇದೆ. ಹಳ್ಳಿಯವರಿಗೆ ಉಪಯೋಗವಾಗುತ್ತಾ ಇಲ್ಲ. ಇವತ್ತು ಪಟ್ಟಣದಲ್ಲಿ ಒಂದು ಕೆ.ಜಿ ಅಕ್ಕಿಯನ್ನು 2 ರೂಪಾಯಿಗೆ ಕೊಡುತ್ತಾ ಇದ್ದಾರೆ. ಕೆರೋಸಿನ್, ಆಯಿಲ್ ವಾರಕ್ಕೆ ಮೂರು ಲೀಟರ್ ಕೊಡಬೇಕು ಎಂದು ಕಡ್ಡಾಯವಿದೆ. ಆದರೆ ನಮ್ಮ ಹಳ್ಳಿಯಲ್ಲಿ ಒಂದು ಸಾವಿರ ಸಂಸಾರ ಇರತಕ್ಕಂಥಾದ್ದಕ್ಕೆ 2 ಬ್ಯಾರಲ್ ಸೀಮೆ ಎಣ್ಣೆ ಎರಡು ಮೂಟೆ ಅಕ್ಕಿ ಕೊಡುತ್ತಾ ಇದ್ದಾರೆ ಇದರಿಂದ ಅರ್ಧ ಕೆ ಜಿ ಅಕ್ಕಿ, ಅರ್ಧ ಲೀಟರ್ ಕೆರೋಸಿನ್ ಆಯಿಲ್ ಸಿಗುವುದು ಕಷ್ಟ. ಪಟ್ಟಣಗಳಲ್ಲಿ ಅನುಕೂಲತೆ ಕಲ್ಪಿಸಲು ಅವರು ಹಿಂದೆ ಏನು ಬುದ್ಧಿ ಕಲಿಸಿಕೊಟ್ಟಿದ್ದಾರೋ ಅದೇ ಬುದ್ಧಿಯನ್ನು ಕಲಿಸಿಕೊಡಬೇಕಾಗುತ್ತದೆ ಆದುದರಿಂದ ಈಗ ಹಳ್ಳಿಗಳಿಗೆ ಹೆಚ್ಚಿನ ಸೌಕರ್ಯವನ್ನು ಒದಗಿಸಿಕೊಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇವತ್ತು ಬಜೆಟ್‌ನಲ್ಲಿ ಇಂಡಸ್ಟ್ರೀಸ್‌ಗೆ ಸೌಲಭ್ಯಗಳನ್ನು ಕೊಡುತ್ತಾ ಇದ್ದೀರಿ. ಈ ಬಗ್ಗೆ ಮಾನ್ಯ ಕೈಗಾರಿಕಾ ಮಂತ್ರಿಗಳನ್ನು ಕೇಳಿದಾಗ ತಾಲ್ಲೂಕು ಲೆವಲ್‌ನಲ್ಲಿ, ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಮುಂದೆ ಬಂದವರಿಗೆ ಕೊಡುತ್ತೇವೆ ಎಂದು ಹೇಳಿದರು ಆದ್ದರಿಂದ ಪಟ್ಟಣದಲ್ಲಿ ಇಂಡಸ್ಟ್ರೀಸ್‌ಗೆ ಕೊಡತಕ್ಕ ಪ್ರೋತ್ಸಾಹವನ್ನು ಮನ್ನಾ ಮಾಡಿ ಜಿಲ್ಲಾ ಹೆಡ್ ಕ್ವಾರ್ಟರ್ಸ್‌ನಲ್ಲಿ ಕೊಟ್ಟರೆ ಅಲ್ಲಿ ಇಂಡಸ್ಟ್ರೀಸ್ ಓಪನ್ ಮಾಡುವುದಕ್ಕೆ ಅವಕಾಶವಾಗುತ್ತದೆ, ಇದರಿಂದ ಅಲ್ಲಿಯ ಜನಗಳಿಗೆ ಅನುಕೂಲವಾಗುತ್ತದೆ, ಈ ಒಂದು ವ್ಯವಸ್ಥೆಯನ್ನು ಮಾಡಬೇಕು ಎಂದು ಸಲಹೆ ಮಾಡುತ್ತಾ ಇದ್ದೇನೆ. ಮತ್ತೆ ನಿರುದ್ಯೋಗ ಸಮಸ್ಯೆ ಹಳ್ಳಿಗಾಡಿನಲ್ಲಿ ಬಹಳವಾದಂಥ ಸಮಸ್ಯೆಯಾಗಿದೆ ಪ್ರತಿಯೊಂದು ಹಳ್ಳಿಯಲ್ಲೂ ರೈತರ ಮಕ್ಕಳು 10-15 ಜನ ಇರುತ್ತಾರೆ. ಅವರು ಎಸ್. ಎಸ್. ಎಲ್. ಸಿ. ಮತ್ತು ಟಿ. ಸಿ. ಹೆಚ್. ಮಾಡಿಕೊಂಡು ಕೇವಲ 5 ರೂಪಾಯಿ ಕೂಲಿಗೆ ಹೋಗುತ್ತಾ ಇದ್ದಾರೆ. ಅವರಿಗೆಲ್ಲಾ ಉದ್ಯೋಗಗಳನ್ನು ಒದಗಿಸಿಕೊಡಬೇಕು. ಇವತ್ತು ಇಂಟರ್‌ವ್ಯೂ ಕರೆದರೆ ಅಲ್ಲಿ ಅನೇಕ ವಿಧವಾದ ಭ್ರಷ್ಟಾಚಾರದಲ್ಲಿ ತೊಡಗುವುದರಿಂದ ಹಳ್ಳಿಯ ಹುಡುಗರಿಗೆ ಯಾವ ವಿಧವಾದ ಸೌಲಭ್ಯಗಳು ಸಿಕ್ಕುತ್ತಾ ಇಲ್ಲ. ಇದು ಅವರಿಗೆ ಗೊತ್ತಿರುವುದಿಲ್ಲ. ಎಸ್. ಎಸ್. ಎಲ್. ಸಿ. ಮತ್ತು ಟಿ. ಸಿ. ಹೆಚ್. ಪಡೆದವರಿಗೆ ಏನು ಒಂದು ನಿಬಂಧನೆ ಇದೆ ಅದನ್ನು ಯಾತಕ್ಕೋಸ್ಕರ ತರುತ್ತಿದ್ದಾರೋ ಅರ್ಥವಾಗುತ್ತಾ ಇಲ್ಲ. ಆದ್ದರಿಂದ ಹಳ್ಳಿಗಾಡಿನ ವಿದ್ಯಾವಂತರಿಗೆ ಕೆಲಸ ಸಿಗುವಂಥ ಅವಕಾಶ ಮಾಡಿಕೊಡಬೇಕು ಎಂಬ ವಿಷಯವನ್ನು ತಮ್ಮ ಮುಂದಿಡುತ್ತಾ ಇದ್ದೇನೆ. ಮತ್ತೆ ಅಂತ್ಯೋದಯ ಕಾರ್ಯಕ್ರಮದ ಬಗ್ಗೆ ಮಾನ್ಯ ಹುಚ್ಚಮಾಸ್ತಿ ಗೌಡರು ಹೇಳಿದರು. ಅದು ಬಹಳ ಕಷ್ಟಕರವಾದಂಥಾದ್ದು. ಹಿಂದೆ ನಾವು ನೋಡಿದ್ದೇವೆ. ಜೀತ ಪದ್ಧತಿಯಿಂದ ವಿಮುಕ್ತನಾದವನಿಗೆ ಕೊಡಬೇಕು ಎಂದು ಇ[illegible] ಐದಾರು ಸಾವಿರ ರೂಪಾಯಿಗಳನ್ನು ಕೊಟ್ಟರೂ ಏನೂ ಆಗುವುದಿಲ್ಲ' ಅವರು ಎತ್ತು ಗಾಡಿ ಮಾರಿಕೊಂಡು ಹೋಗಿದ್ದಾರೆ. ಆದ್ದರಿಂದ ಹಳ್ಳಿಗಾಡಿನಲ್ಲಿ ಅಂತ್ಯೋದಯ ಸ್ಕೀಂ ಮುಂದುವರಿಯುವುದಕ್ಕೆ ಕಷ್ಟವಾಗುತ್ತದೆ ಇದಕ್ಕಿಂತಲೂ ಹರಿಜನ-ಗಿರಿಜನರು ಏನು ಇದ್ದಾರೆ ಅವರು ವಿದ್ಯೆ ಕಲಿಯುವುದಕ್ಕೆ ಪ್ರೋತ್ಸಾಹ ಕೊಟ್ಟರೆ ಅವರು ಖಂಡಿತವಾಗಿ ಮುಂದೆ ಬರುವುದಕ್ಕೆ ಅವಕಾಶವಾಗುತ್ತದೆ ಅದನ್ನು ಮಾಡಬೇಕು ಎಂದು ನಾನು ಸಲಹೆ ಕೊಡುತ್ತೇನೆ. ನಮ್ಮ ದಾವಣಗೆರೆಯಲ್ಲಿ ಬೆಳೆದಂಥ ಬೇಸಿಗೆ ಬೆಳೆ ಬತ್ತ ಕೆ ಜಿ ಎಫ್. ಮೂಲಕ ತಮಿಳುನಾಡಿಗೆ ಹೋಗುತ್ತಾ ಇದೆ; ಶಿವಮೊಗ್ಗದ ಬತ್ತ ಕೇರಳಕ್ಕೆ ಹೋಗುತ್ತಿದೆ. ಆದರೆ ಇಲ್ಲಿ ಅಕ್ಕಿ ಕೆ. ಜಿ. ಮೂರು ನಾಲ್ಕು ರೂಪಾಯಿ ಆಗಿದೆ, ಈ ಒಂದು ಪರಿಸ್ಥಿತಿ. ಇದರ ಬಗ್ಗೆ ಸರ್ಕಾರದವರು ಯಾವ ವಿಧವಾದ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಮಾನ್ಯ ರಾಮಯ್ಯನವರು ಏನು ಹೇಳಿದರು ಅದು ನಿರ್ವಿವಾದ. 35 ವರ್ಷಗಳಿಂದ ಏನೂ ಸೌಲಭ್ಯವಾಗಿಲ್ಲ ಎಂದು ಹೇಳಿದರು. ಉದಾಹರಣೆಗೆ ಹೇಳುವುದಾದರೆ, ತುಮಕೂರು ಜಿಲ್ಲೆಯಲ್ಲಿ ಕಾಂಗ್ರೆಸ್ ಸರ್ಕಾರ ಬರುವುದಕ್ಕೆ ಮುಂಚೆ ಮೂರು ಹೈಸ್ಕೂಲ್ಸ್ ಇತ್ತು, ಇವತ್ತು 224 ಹೈಸ್ಕೂಲ್ಸ್ ನಡೆಯುತ್ತಾ ಇದೆ. ತಾವು ಯೋಚನೆ ಮಾಡಬೇಕು. 224 ಹೈಸ್ಕೂಲುಗಳನ್ನು ಕೇವಲ 30 ವರ್ಷಗಳಲ್ಲಿ ಮಾಡಬೇಕಾದರೆ ಜನತೆಗೆ ಎಷ್ಟು ಅನುಕೂಲವಾಗಿದೆ ಎನ್ನುವುದನ್ನು ಪರಾಂಬರಿಸಬೇಕು ಎಂದು ಹೇಳಿ, ನನಗೆ ಇಷ್ಟು ಕಾಲವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಂ. ನಾಣಯ್ಯ (ಮಡಿಕೇರಿ).—ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ 1983-84 ನೇ ಸಾಲಿನ ಆಯವ್ಯಯವನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳು ಮಂಡನೆ ಮಾಡಿದ್ದಾರೆ ಆ ಬಗ್ಗೆ ಒಂದೆರಡು ಅಂಶಗಳನ್ನು ಹೇಳಬೇಕು ಎಂದು ನಾನು ಇಚ್ಛೆ ಪಡುತ್ತಾ ಇದ್ದೇನೆ. ಸ್ವಾಮಿ, ಹಿಂದಿನ ಉಪಾಧ್ಯಕ್ಷರು ಒಂದು ಮಾತನ್ನು ಹೇಳಿದ್ದಾರೆ. ಏನೆಂದರೆ, ಪ್ರಜಾಪ್ರಭುತ್ವದಲ್ಲಿ ಚುನಾವಣೆ ಬರುತ್ತದೆ, ಹೋಗುತ್ತದೆ, ಹಲವರು ಸ್ಪರ್ಧಿಸುತ್ತಾರೆ, ಕೆಲವರು ಗೆಲ್ಲುತ್ತಾರೆ, ಕೆಲವರು ಸೋಲುತ್ತಾರೆ ಎಂದು. ಆದರೆ ಈ ಸಲ ಗೆದ್ದವರೂ ನಾವೇ, ಸೋತವರೂ ನಾವೇ. ಆದರೆ ಕರ್ನಾಟಕ ರಾಜ್ಯದಲ್ಲಿ ಚುನಾವಣೆ ನಡೆದಾಗ ಒಂದು ಐತಿಹಾಸಿಕ ಘಟನೆ ನಡೆಯಿತು. ಇಷ್ಟು ವರ್ಷ ನಮ್ಮ ಕಾಂಗ್ರೆಸ್ ಪಕ್ಷವನ್ನು ಆಯ್ಕೆ ಮಾಡುತ್ತಿದ್ದ ಜನ ಈ ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೆ ಸ್ಪಷ್ಟವಾದ ಬಹುಮತ ಕೊಡದೆ ಬಹಳಷ್ಟು ಗೊಂದಲಮಯ ವಾತಾವರಣ

ದಲ್ಲಿ ನಮ್ಮನ್ನು ಇಟ್ಟು ಹೋಗಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಯವರು ಈ ಆಯವ್ಯಯವನ್ನು ಏನು ಮಂಡನೆ ಮಾಡಿದ್ದಾರೆ, ಇದರಲ್ಲಿ ಅವರು ಕೊಟ್ಟಂಥ ಚುನಾವಣಾ ಘೋಷಣೆ ಏನಿದೆ ಅದನ್ನು ನೆರವೇರಿಸುತ್ತಾರೆಂಬ ಆಸೆ-ಆಕಾಂಕ್ಷೆಗಳನ್ನು ಜನ ಇಟ್ಟುಕೊಂಡು ಕಾಯುತ್ತಿದ್ದರು. ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಂಥ ಆಯವ್ಯಯ ಏನಿದೆ ಇದರ ಬಗ್ಗೆ ಸ್ಪಷ್ಟವಾದ ಅಭಿಪ್ರಾಯ ಹೇಳುವುದಾದರೆ, ಇದು ಬಹಳ ನಿಸ್ಸಾರವಾಗಿದ್ದು, ಗ್ರಾಮಾಂತರ ಜನರ ಕಲ್ಯಾಣಕ್ಕೆ ಇದು ಸೀಮಿತವಾಗಿಲ್ಲ ಎಂದು ಖಂಡಿತವಾಗಿ ಹೇಳಬಯಸುತ್ತೇನೆ. ಏಕೆಂದರೆ, ನಮಗೆ ಅನೇಕ ತರಹದ ತೆರಿಗೆಗಳನ್ನು ಹಾಕಿದ್ದಾರೆ. ಇವತ್ತು ರಾಗಿ, ಜೋಳಕ್ಕೆ ಹಾಕಿದ ತೆರಿಗೆಯನ್ನು ನೋಡಿದಾಗ, ವಿನಾಯಿತಿ ಮಾಡಿರುವುದನ್ನು ನೋಡಿದಾಗ, ಅಕ್ಕಿಗೆ ವಿನಾಯಿತಿ ಮಾಡಿರುವುದನ್ನು ನೋಡಿದಾಗ ಬಹುತೇಕ ಗ್ರಾಮೀಣ ಜನರು ಊಟಮಾಡತಕ್ಕಂಥ ಪದಾರ್ಥಗಳ ಕಡೆ ಕಾಳಜಿ ವಹಿಸಿದಂತೆ ಕಾಣುವುದಿಲ್ಲ ಯಾವ ರೈತರು ಇದ್ದಾರೆ ಅಂತಹ ಕೇಳಿ ಬಂದಂಥ ರೈತರನ್ನು ಮರೆತಂಥ ಪರಿಸ್ಥಿತಿ ಕಾಣುತ್ತದೆ. ಸ್ಟೈಫಂಡರಿ ಪದವೀಧರರು ಈ ನಮ್ಮ ಸರ್ಕಾರ ನಮ್ಮನ್ನು ಖಾಯಂ ಮಾಡುತ್ತಾರೆ ಎಂಬ ಆಸೆಯನ್ನು ಇಟ್ಟುಕೊಂಡಿದ್ದರು. ಆ ಆಸೆ ಇವತ್ತು ನಿರಾಸೆಯಾಗಿರುವುದು ನಮ್ಮ ಕಣ್ಣಿಗೆ ಕಾಣುತ್ತಾ ಇದೆ. ಹಿಂದಿನ ಸರ್ಕಾರದಲ್ಲಿ ಇದರ ಬಗ್ಗೆ ಚಿಂತನೆ ಕೂಡ ಇತ್ತು. ಯಾವ ಸರ್ಕಾರ 35 ವರ್ಷಗಳಿಂದ ಸತತವಾಗಿ ಆಡಳಿತ ನಡೆಸುತ್ತಿತ್ತು, ಅವರು ಅನೇಕ ವಿಷಯಗಳನ್ನು ಜನರ ಮುಂದಿಟ್ಟು ಮತ್ತು ಯೋಚನೆ ಮಾಡಿ ಕಾರ್ಯಗತ ಮಾಡಿಕೊಂಡು ಬಂದಿದ್ದಾರೆ. ಇಷ್ಟಾದರೂ ಕೂಡ ಈ ದೇಶದಲ್ಲಿ ಅಭಿವೃದ್ಧಿ ಸಾಧನೆ ಯಾಗಿಲ್ಲ ಎಂದು ಹೇಳುತ್ತಿದ್ದಾರೆ ಮತ್ತು ನಾವು ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿದ್ದೇವೆಂದು ತಿಳಿದುಕೊಂಡಿದ್ದಾರೆ. ಇದಕ್ಕೆ ಕಾರಣವೇನೆಂದರೆ, ನಮ್ಮ ದೇಶದಲ್ಲಿ ಪಾಪ್ಯುಲೇಷನ್ ಏನಿದೆ ಅದು ಪ್ರತಿದಿವಸಕ್ಕೂ ವಿಪರೀತವಾಗಿ ಬೆಳೆಯುತ್ತಿದೆ. ಅದಕ್ಕೆ ಯಾವುದಾದರೊಂದು ಕಡಿವಾಣ ಹಾಕದೇ ಇರತಕ್ಕಂಥ ಪರಿಸ್ಥಿತಿ ಬಂದಿದೆ. ಎಲ್ಲಿಯವರೆಗೆ ಜನಸ್ಫೋಟನೆ ನಿಲ್ಲಿಸಲಿಕ್ಕೆ ಸಾಧ್ಯವಿಲ್ಲವೋ ಅಲ್ಲಿಯವರೆಗೆ ನಮ್ಮ ರಾಜ್ಯ ಮುಂದೆ ಬರಲಿಕ್ಕೆ ಸಾಧ್ಯವಿಲ್ಲ. ನಾವು ಪ್ರಧಾನವಾಗಿ ಜನಸ್ಫೋಟನೆಯನ್ನು ತಡೆಹಿಡಿಯಬೇಕು. ಅದಕ್ಕೆ ಪ್ರಾತಿನಿಧ್ಯ ಕೊಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಆಯವ್ಯಯದಲ್ಲಿ ಕೃಷಿಕರಿಗೆ ಅನೇಕ ರಿಯಾಯಿತಿಗಳನ್ನು ತೋರಿಸಿದ್ದಾರೆ. 36 ಕೋಟಿ ರೂಪಾಯಿಗಳನ್ನು ಕೃಷಿಕರಿಗೆ ಸಾಲವನ್ನು ಮನ್ನಾ ಮಾಡಲಿಕ್ಕೆ ಇಟ್ಟಿದ್ದೇನೆಂದು ಹೇಳಿದ್ದಾರೆ. ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ನಾನು ಸಹಕಾರ ಬ್ಯಾಂಕಿನ ಅಧ್ಯಕ್ಷನಾಗಿದ್ದೇನೆ 25 ಲಕ್ಷ ರೂಪಾಯಿಗಳು ನಮ್ಮ ಸಹಕಾರ ಸಂಘಕ್ಕೆ ಬರಬೇಕು. ಬಹುಶಃ ಯಾವ ರೈತ ಸಹಕಾರ ಸಂಘದಿಂದ ಸಾಲ ಪಡೆದು, ಆರ್ಥಿಕ ಅಭಿವೃದ್ಧಿಯಾಗದೇ ಇದ್ದರೆ, ಕುಟುಂಬ ಮುಂದುವರಿಯದೇ ಇದ್ದರೆ, 12 ವರ್ಷಗಳಿಂದ ಹಣವನ್ನು ಮರುಪಾವತಿ ಮಾಡುವುದಕ್ಕೆ ಸಾಧ್ಯವಾಗದಿದ್ದರೆ ಆ ಸಾಲವನ್ನು ವಜಾ ಮಾಡಬೇಕಾಗುತ್ತದೆ. ಯಾರು ಅಸಲಿಗಿಂತ ಹೆಚ್ಚಾಗಿ ಬಡ್ಡಿಯನ್ನು ಕಟ್ಟಿದ್ದಾರೆ ಅಂತಹ ಬಡ್ಡಿ ಅಸಲಿಗಿಂತ ಹೆಚ್ಚಾಗಿದ್ದರೆ ಅಂಥಾ ಸಾಲವನ್ನು ವಜಾ ಮಾಡಬೇಕಾಗುತ್ತದೆ. ಯಾವ ರೈತ ತೆಗೆದುಕೊಂಡ ಸಾಲದಿಂದ ರೈತನ ಸಲುವಾಗಿ ಅವನ ಕುಟುಂಬ ಅನುಭವಿಸಿದ್ದಾರೆ ಅಂತಹವರು ದೀರ್ಘಕಂತಿನಿಂದ ಸಾಲವನ್ನು ವಾಪಸ್ ಕೊಡಲಿಕ್ಕೆ ವ್ಯವಸ್ಥೆ ಕಲ್ಪಿಸಬೇಕು. ರೈತ ತೆಗೆದುಕೊಂಡಿರತಕ್ಕ ಸಾಲವನ್ನು ರೈಟ್ ಆಫ್ ಮಾಡಿದಾಗ ಅದರಿಂದ ಸಂಘಕ್ಕೆ ಏನು ತೊಂದರೆ ಬರುತ್ತದೆ ಅದಕ್ಕೋಸ್ಕರ ಸರ್ಕಾರ ಆದಷ್ಟು ಬೇಗ ಅಂತಹ ಪರಿಹಾರ ಕೊಟ್ಟು ಸಂಘವನ್ನು ಮುಂದೆ ತರಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ವೃತ್ತಿ ತೆರಿಗೆ ಬಗ್ಗೆ ಅನೇಕ ಸದಸ್ಯರು ಬೇಕಾದಷ್ಟು ಒತ್ತಾಯ ತಂದಿದ್ದಾರೆ ಮೊನ್ನೆ ಜನತಾ ಪಕ್ಷದ ಸಭೆ ನಡೆಯಿತು. ಆಗ ಮಾನ್ಯ ಮುಖ್ಯ ಮಂತ್ರಿಗಳ ಮೇಲೆ ಅವರ ಪಕ್ಷದ ಸದಸ್ಯರು ಒತ್ತಾಯ ತಂದಿದ್ದಾರೆ. ಆಗ ಮಾನ್ಯ ಮುಖ್ಯ ಮಂತ್ರಿಗಳು ಒಂದು ವಾರದಲ್ಲಿ ವೃತ್ತಿ ತೆರಿಗೆಯನ್ನು ರದ್ದು ಮಾಡುತ್ತೇನೆಂದು ಹೇಳಿದ್ದಾರೆ. ಅದನ್ನು ರದ್ದು ಮಾಡಿದರೆ ಬಹಳ ಸಂತೋಷ ರದ್ದು ಮಾಡದಿದ್ದರೆ ಕೊಟ್ಟ ವಚನವನ್ನು ಭಂಗ ಮಾಡಿದಂತಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ಜನರು ಬಹಳ ಬೇಸರ ಪಟ್ಟುಕೊಳ್ಳತಕ್ಕ ವಿಷಯವೇನೆಂದರೆ, ಸಿಮೆಂಟಿಗೂ ಹೆಚ್ಚಿನ ತೆರಿಗೆಯನ್ನು ಹಾಕಿದ್ದೀರಿ. ಇದನ್ನು ಕೂಡಲೇ ತೆಗೆಯಬೇಕು. ಇವತ್ತು ರೈತನಿಗೆ ತನ್ನ ಚಿಕ್ಕಪುಟ್ಟ ಕೆಲಸಗಳನ್ನು ಮಾಡಿಕೊಳ್ಳಲು ಸಿಮೆಂಟ್ ಬೇಕಾಗುತ್ತದೆ, ಕೆರೆ ಕಾಲುವೆಗಳ ರಿಪೇರಿಗೆ ಬೇಕಾಗಿರುತ್ತದೆ. ಆದುದರಿಂದ ಅವನಿಗೆ ಕನ್‌ಸೆಷನ್ ರೇಟ್‌ನಲ್ಲಿ ಸಿಮೆಂಟನ್ನು ವಿತರಣೆ ಮಾಡತಕ್ಕ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ನೀರಾವರಿ ಬಗ್ಗೆ ಹೇಳುವುದಾದರೆ, ಬಹುಶಃ ಇವತ್ತು ಕರ್ನಾಟಕ ರಾಜ್ಯದಲ್ಲಿ 1 ಕೋಟಿ 55 ಲಕ್ಷ ಹೆಕ್ಟೇರ್ ಭೂಮಿ ಇದೆ. ಆದರೆ ಅದರಲ್ಲಿ 80 ಸಾವಿರ ಹೆಕ್ಟೇರ್ ಭೂಮಿಯನ್ನು ಮಾತ್ರ ನಾವು ನೀರಾವರಿಗೆ ಒಳಪಡಿಸುತ್ತಿದ್ದೇವೆಂದು ಹೇಳಿಕೊಂಡಿದ್ದಾರೆ. ಇದು ಸಾಲದು, ಎಲ್ಲಾ ಭೂಮಿಯನ್ನೂ ಸಹ ನೀರಾವರಿಗೆ ಒಳಪಡಿಸಬೇಕೆಂದು ಹೇಳಬಯಸುತ್ತೇನೆ. ಇನ್ನು ಅಧಿಕಾರ ವಿಕೇಂದ್ರೀಕರಣ ಮಾಡ್ಡಿ

ಕೊಡುತ್ತೇವೆ, ತಾಲ್ಲೂಕು ಬೋರ್ಡ್‌ಗಳಿಗೆ ಮತ್ತು ಪಂಚಾಯಿತಿಗಳಿಗೆ ಚುನಾವಣೆಗಳನ್ನು ನಡೆಸುತ್ತೇವೆಂದು ಹೇಳಿದ್ದೀರಿ. ಕೇವಲ ಚುನಾವಣೆಗಳನ್ನು ನಡೆಸಿದ ಮಾತ್ರಕ್ಕೆ ಅಧಿಕಾರ ವಿಕೇಂದ್ರೀಕರಣ ಮಾಡಿದ ಹಾಗಾಗುವುದಿಲ್ಲ. ಇವತ್ತು ನೀವು ಅಧಿಕಾರ ವಿಕೇಂದ್ರೀಕರಣ ಮಾಡದಿದ್ದರೆ ಅಭಿವೃದ್ಧಿ ಕಾರ್ಯಗಳನು ಅವರು ಕಾಲಕ್ಕೆ ಸರಿಯಾಗಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಏತಕ್ಕೆಂದರೆ ಯಾವುದೇ ಜಿಲ್ಲೆಯಲ್ಲಿ ಕೆಲಸಕಾರ್ಯಗಳನ್ನು ಸೂಪರ್‌ವಿಜನ್ ಮಾಡತಕ್ಕವರು ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳು ಯಾವುದೇ ಒಂದು ಕೆಲಸವನ್ನು ಒಪ್ಪದಿದ್ದರೆ ಅದು ಆಗುವುದಿಲ್ಲ, ಆದುದರಿಂದ ಅಧಿಕಾರ ವಿಕೇಂದ್ರೀಕರಣವನ್ನು ಮಾಡದಿದ್ದರೆ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡಿನವರು ಏನೇ ನಿರ್ಣಯವನ್ನು ಪಾಸ್ ಮಾಡಿದರೂ ಅದು ಪ್ರಯೋಜನಕ್ಕೆ ಬರುವುದಿಲ್ಲ ಮತ್ತು ಅದಕ್ಕೆ ಬೆಲೆ ಬರುವುದಿಲ್ಲ. ಆದುದರಿಂದ ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂದು ಸಲಹೆ ಮಾಡಬಯಸುತ್ತೇನೆ. ಇನ್ನು ಗ್ರಾಮ ಮಟ್ಟದಲ್ಲಿ ನ್ಯಾಯ ಪಂಚಾಯಿತಿಗಳನ್ನು ಸ್ಥಾಪನೆ ಮಾಡಿದರೆ ಎಷ್ಟೋ ಕೇಸ್‌ಗಳಲ್ಲಿ ಹೈಕೋರ್ಟ್ ಮೆಟ್ಟಲುಗಳನ್ನು ಹತ್ತುವುದನ್ನು ತಡೆಗಟ್ಟಿ ಜನರಿಗೆ ಅನುಕೂಲವನ್ನು ಒದಗಿಸಿ ಕೊಡಬಹುದಾಗಿದೆ. ಇದರಿಂದ ನ್ಯಾಯ ಪಂಚಾಯಿತಿಗಳನ್ನು ಸ್ಥಾಪನೆ ಮಾಡತಕ್ಕ ಅಭಿಪ್ರಾಯವನ್ನು ಸರ್ಕಾರದ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಎಸ್. ಸಿ. ಎಸ್. ಟಿ. ಯವರಲ್ಲಿ ಯಾರು ಮೊದಲು ಮೂರು ಅಂಕಗಳನ್ನು ಹೆಚ್ಚಿಗೆ ಪಡೆದು ಉತ್ತೀರ್ಣರಾಗುತ್ತಾರೋ ಅಂಥವರಿಗೆ ಉದ್ಯೋಗಾವಕಾಶಗಳನ್ನು ಒದಗಿಸಿ ಕೊಡುತ್ತೇವೆಂದು ಹೇಳಿದ್ದಾರೆ. ಮತ್ತೆ ಕೆಲವರಿಗೆ 2500 ರೂಪಾಯಿಗಳ ಪಾರಿತೋಷಕವನ್ನು ಕೊಡುತ್ತೇವೆಂದು ಹೇಳಿ, ಈ ಕೆಲಸವನ್ನು ಹಿಂದಿನ ಸರ್ಕಾರದವರು ಮಾಡಬಹುದಾಗಿತ್ತು ಆದರೆ ಮಾಡಲಿಲ್ಲವೆಂದು ಹೇಳಿದ್ದಾರೆ. ಆದರೆ ನಾನು ಹೇಳುತ್ತೇನೆ ಜನತಾ ಸರ್ಕಾರವಾಗಲೀ ಅಥವಾ ಯಾವುದೇ ಸರ್ಕಾರ ಬಂದರೂ ಕೂಡ ಅವರ ಸಮಸ್ಯೆಯನ್ನು ಪರಿಹಾರ ಮಾಡಿದಂತಾಗುವುದಿಲ್ಲ ಅದಕ್ಕೆ ನಮ್ಮ ಹಿಂದಿನ ಸರ್ಕಾರದವರು ಏನು ಒಂದು ಕಾರ್ಯಕ್ರಮಗಳನ್ನು ಗ್ರಾಮ ಮಟ್ಟದಲ್ಲಿ ಹಾಕಿಕೊಂಡಿದ್ದರು, ಅದನ್ನು ಮುಂದುವರಿಸುವುದು ಒಳ್ಳೆಯದೆಂದು ಹೇಳಬಯಸುತ್ತೇನೆ. ವರ್ಷಕ್ಕೆ 5 ಕುಟುಂಬಗಳನ್ನು ಅಂತ್ಯೋದಯ ಕಾರ್ಯಕ್ರಮದ ಮೇಲೆ ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬಹುದಾಗಿದೆ. ನಮ್ಮ ರಾಜ್ಯದಲ್ಲಿ 11 ಲಕ್ಷ ಹರಿಜನ ಕುಟುಂಬಗಳು ಇರುವುದರಿಂದ, ಅದರಲ್ಲೂ ವಿಶೇಷವಾಗಿ ನಮ್ಮ ಕಡೆಗಳಲ್ಲಿ ಜಾಸ್ತಿ ಜನ ಇರುವುದರಿಂದ ಪ್ರತಿ ಗ್ರಾಮದಲ್ಲಿ 5 ಜನಕ್ಕಿಂತ 10 ಜನರಿಗೆ ಈ ಅವಕಾಶವನ್ನು ಕಲ್ಪಿಸಿಕೊಟ್ಟರೆ ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಸಾಧ್ಯವೆಂದು ಹೇಳಬಯಸುತ್ತೇನೆ. ಮೊನ್ನೆ ದಕ್ಷಿಣ ರಾಜ್ಯಗಳ ಮುಖ್ಯಮಂತ್ರಿಗಳ ಸಮ್ಮೇಳನ ಏನು ನಡೆಯಿತು ಇದು ಖಂಡಿತವಾಗಿಯೂ ಒಂದು ಅಸಿಸ್ಥಿತತೆಯನ್ನು ಸೂಚಿಸುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಸಿ ಬೆ ರೇಗೌಡ.—ಶ್ರೀ ನಾನಯ್ಯನವರೇ ನಿಮ್ಮ ಪ್ರಧಾನ ಮಂತ್ರಿಗಳವರೇ ಒಂದು ಆಯೋಗವನ್ನು ರಚನೆ ಮಾಡುವ ಬಗ್ಗೆ ಒಪ್ಪಿಕೊಂಡಿದ್ದಾರೆ. ಪತ್ರಿಕೆಯಲ್ಲಿ ಬಂದಿದೆ ದಯವಿಟ್ಟು ಓದಿನೋಡಿ.

ಶ್ರೀ ಎಂ. ಎಂ. ನಾನಯ್ಯ.—ಸಂವಿಧಾನದ ಪ್ರಕಾರವಾಗಿ ಒಬ್ಬರನ್ನು ನೇಮಕ ಮಾಡಿ ಕೇಂದ್ರ ಮತ್ತು ರಾಜ್ಯಗಳ ಸಂಬಂಧ ಹೇಗಿರಬೇಕು ಎನ್ನುವುದರ ಬಗ್ಗೆ ಮಾಡಿದ್ದಾರೆಂದು ನಾನು ಸಹ ಪತ್ರಿಕೆಗಳಲ್ಲಿ ಓದಿ ತಿಳಿದುಕೊಂಡಿದ್ದೇನೆ ಈಗ ಕೇಂದ್ರ ಮತ್ತು ರಾಜ್ಯಕ್ಕೆ ಯಾವುದೇ ವಿಷಯದ ಬಗ್ಗೆ ಸಮಸ್ಯೆಯುಂಟಾದರೆ ಅದನ್ನು ಬಗೆಹರಿಸುವುದಕ್ಕೆ ಒಂದು ಸಮಿತಿ ಇದೆ. ಅದರ ಮುಖಾಂತರವಾಗಿ ಬಗೆಹರಿಸಿಕೊಳ್ಳಬಹುದಾಗಿದೆ. ಬಹುಶ: ಇದೇ ಪ್ರಾದೇಶಿಕ ಭಾವನೆ ಬಂದರೆ ನಾಳೆ ಅನೇಕ ತೊಂದರೆಗಳಿಗೆ ಕಾರಣವಾಗುತ್ತದೆ. ಅಸ್ಸಾಂ ಮತ್ತು ಬಂಗಾಳದಲ್ಲಿ ಆಗಿರತಕ್ಕದ್ದನ್ನು ತಾವು ನೋಡಿರಬಹುದು, ವಿಯಟ್ನಾಂನಲ್ಲಿ ಆಗಿರತಕ್ಕದ್ದನ್ನು ತಾವು ನೋಡಿರಬಹುದು. ಬಹುಶ: ತಾವು ಇದನ್ನೇ ಸಮರ್ಥನೆ ಮಾಡಿ ಹೇಳುವುದಾದ ನಾಳೆ ನಾವು ಕೊಡಗು ಕೂಡ ಒಂದು ಪ್ರತ್ಯೇಕ ರಾಜ್ಯವನ್ನಾಗಿ ಮಾಡಿ ಎಂದು ಹೇಳಬೇಕಾಗುತ್ತದೆ. ಏಕೆಂದರೆ ನಮ್ಮ ಕರ್ನಾಟಕ ರಾಜ್ಯ ಪುನರ್ ವಿಂಗಡಣೆಯಾಗುವುದಕ್ಕಿಂತ ಮುಂಚಿತವಾಗಿ ಇದು ಒಂದು ಪ್ರತ್ಯೇಕವಾದ ರಾಜ್ಯವಾಗಿತ್ತು, ಆದುದರಿಂದ ಕೊಡಗು ಪ್ರಾಂತ್ಯವನ್ನು ಒಂದು ಪ್ರತ್ಯೇಕ ರಾಜ್ಯವನ್ನಾಗಿ ಮಾಡಿ ಎಂದು ಕೇಳತಕ್ಕ ಭಾವನೆ ಬರಬಹುದು. ಇದರಿಂದ ರಾಷ್ಟ್ರದ ಐಕ್ಯತೆಗೆ ಧಕ್ಕೆ ಬರುತ್ತದೆ ಎನ್ನುವ ದೃಷ್ಟಿಯಿಂದ ಆಲೋಚನೆ ಮಾಡಬೇಕಾಗಿದೆ.

ಇನ್ನು ಬಡ್ಜೆಟ್‌ನಲ್ಲಿ ಅನೇಕ ವಿನಾಯಿತಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ ಅದು ಕೇವಲ ತೋರಿಕೆಗೆ ಮಾತ್ರ ಕಾಣಿಸುತ್ತದೆ. ಉದಾಹರಣೆಗೆ ಮೋಟಾರ್ ವಾಹನ ತೆರಿಗೆದಾರರಿಗೆ ಶೇಕಡ 10 ರಷ್ಟು ರಿಬೇಟ್ ಮಾತ್ರ ಕೊಟ್ಟಿದ್ದೀರಿ ಬಹುಶ: 25,30 ಪರ್ಸೆಂಟ್ ರಿಬೇಟನ್ನು ಕೊಟ್ಟಿದ್ದರೆ ಬಹುಶ: ಅನೇಕ ಜನಕ್ಕೆ ಇದರಿಂದ ಅನುಕೂಲವಾಗುತ್ತಿತ್ತು. ಆದುದರಿಂದ ತಾವು ತೋರಿಸಿರತಕ್ಕ ರಿಬೇಟ್ ಏನೂ ಆಶಾದಾಯಕವಾಗಿಲ್ಲ, ಆದುದರಿಂದ ಇದು ಖಂಡಿತವಾಗಿಯೂ ತೋರಿಕೆಯ ಬಡ್ಜೆಟ್ ಆಗಿದೆ. ಮಾನ್ಯ ಮುಖ್ಯಮಂತ್ರಿಗಳವರು ಒಳ್ಳೆಯ ಅನುಭವಸ್ಥರು ಮತ್ತು ಹಣಕಾಸಿನ ಸಚಿವರೂ ಆಗಿದ್ದರು ಇದರಿಂದಾಗಿ ನಾವು ಅವರಿಂದ

ಹೆಚ್ಚಿನದನ್ನೇ ನಿರೀಕ್ಷಣೆ ಮಾಡಿಕೊಂಡಿದ್ದೆವು. ಆದರೆ ಈ ಬಜೆಟ್‌ನಿಂದ ಬಹಳಷ್ಟು ಬೇಜಾರು ಆಗಿದೆ, ಈ ಮುಂಗಡ ಪತ್ರ ಬಹಳಷ್ಟು ನಿರಾಶದಾಯಕವಾಗಿದೆ ಸ್ವಾಗತಾರ್ಹವಾದ ಬಜೆಟ್ ಅಲ್ಲವೆಂದು ನನಗನ್ನಿಸುತ್ತದೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ॥ ಎಂ. ಪಿ. ಕರ್ಕಿ (ಕುಮಟಾ).--ಅಧ್ಯಕ್ಷರೇ ಕಳೆದ ಚುನಾವಣೆ ಒಂದು ಚರಿತ್ರೆಯನ್ನು ನಿರ್ಮಿಸಿಯೆಂದು ಬಹಳ ಜನ ಹೇಳಿದ್ದಾರೆ, ಅದನ್ನು ನಾನು ಒಪ್ಪುತ್ತೇನೆ. ಈ ಚುನಾವಣೆಯಲ್ಲಿ ಜನ ಒಂದು ಭ್ರಷ್ಟ ದರೋಡೆ ಸರ್ಕಾರದ ವಿರುದ್ಧ ಮತ ಕೊಟ್ಟಿದ್ದಾರೆಯೇ ಹೊರತು ನಮ್ಮನ್ನು ಆರಿಸಿದಂಥ ಜನತೆ ನಿಮ್ಮನ್ನು ನೋಡಿ ಮತ ಕೊಟ್ಟಿಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಮತ್ತು ಸರಿಯಾದ ರೀತಿಯಲ್ಲಿ ನಡೆದುಕೊಂಡು ಜನ ಹಿತ ಕೆಲಸಗಳನ್ನು ಮಾಡುತ್ತಾ ಹೋಗಬೇಕೆಂದು ಸೂಚಿಸಬಯಸುತ್ತೇನೆ. ನಾನು ಈ ಬಜೆಟ್‌ನ ಬಗ್ಗೆ ಹೇಳುವುದಾದರೆ, ಸನ್ಮಾನ್ಯ ಮುಖ್ಯ ಮಂತ್ರಿಗಳವರು ಹಾಗೂ ವಿತ್ತ ಮಂತ್ರಿಗಳಾಗಿರತಕ್ಕ ಶ್ರೀ ರಾಮಕೃಷ್ಣ ಹೆಗಡೆಯವರು ಅತ್ಯಂತ ಶ್ರೇಷ್ಠ ವಿತ್ತಮಂತ್ರಿಗಳಾಗಿದ್ದರು ಎಂದು ಹೆಸರು ಪಡೆದುಕೊಂಡಂಥವರು ಮತ್ತು ರಾಷ್ಟ್ರ ಮಟ್ಟದಲ್ಲಿನ ರಾಜಕೀಯದಲ್ಲಿ ತಮ್ಮ ಕೈಯಾಡಿಸಿರತಕ್ಕಂಥವರು ಬಹಳ ಕ್ರಾಂತಿಕಾರಕವಾದ ಬಜೆಟನ್ನು ಮಂಡಿಸುತ್ತಾರೆಂದು ತಿಳಿದಿದ್ದೆ. ಆದರೆ ಈಗ ಅವರು ಮಂಡಿಸಿರತಕ್ಕ ಬಜೆಟ್ ತೀರಾ ಸಾಮಾನ್ಯ ಬಜೆಟ್ ಎಂದು ಹೇಳದೇ ಗತ್ಯಂತರವಿಲ್ಲ. ಒಂದು ರಾಜ್ಯದ ಆರ್ಥಿಕ ಬೆಳವಣಿಗೆ ಆಗಬೇಕಾದರೆ, ಆರ್ಥಿಕ ಉತ್ಪನ್ನ ಜಾಸ್ತಿಯಾಗಬೇಕಾದರೆ, ಒಂದು ರಾಜ್ಯ ಮುನ್ನೋಟದ ಬಗ್ಗೆ ಹೇಳಬೇಕೆಂದರೆ, ಆ ರಾಜ್ಯದ ಉತ್ಪನ್ನದ ಶೇಕಡ 80 ರಷ್ಟು ಉತ್ಪನ್ನ ಕೃಷಿಯೇತರ ವರಮಾನದಿಂದ ಬರಬೇಕು ಆದರೆ ಈಗ ನಮ್ಮ ರಾಜ್ಯದಲ್ಲಿ ಶೇಕಡ 65-70 ರಷ್ಟು ವರಮಾನ ಕೃಷಿಯಿಂದ ಬರುತ್ತಿದೆ ಮುಂದುವರಿದ ರಾಷ್ಟ್ರಗಳಾದ ಅಮೇರಿಕಾ, ಬ್ರಿಟನ್ ಮುಂತಾದ ಕಡೆಗಳಲ್ಲಿ ಕೃಷಿಯಿಂದ ಬರತಕ್ಕ ವರಮಾನ ಕೇವಲ 5-10 ಪರ್ಸೆಂಟ್ ಇದ್ದರೆ ನಮ್ಮ ರಾಜ್ಯದಲ್ಲಿ 65-70 ಪರ್ಸೆಂಟ್‌ನಷ್ಟು ಆದಾಯ ಈ ದೇಶದಲ್ಲಿ ಕೃಷಿಯಿಂದ

5 P M

ಬರುತ್ತಿದೆ ಈ ವರಮಾನವು ನಮ್ಮ ಇಡೀರಾಜ್ಯದ ವರಮಾನಕ್ಕೆ ಹೋಲಿಸಿದಾಗ ಆ ರೇಷಿಯೋ ಕಡಿಮೆಯಾಗಬೇಕೆ ವಿನಹಃ ಜಾಸ್ತಿಯಾಗಿರಕೂಡದು ಎಂದು ಹೇಳಬಯಸುತ್ತೇನೆ ಯಾವುದೇ ಇಂಥ ಕಾರ್ಯಕ್ರಮವನ್ನು ಹಾಕಿಕೊಂಡಂತಹ ಬಜೆಟ್ ಆಗಿ ಇದು ಕಾಣುವುದಿಲ್ಲ. ಇಂಥ ಒಂದು ಉತ್ತಮವಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡಲಿಕ್ಕೆ ಜನತೆಗೆ ಉದ್ಯೋಗ ಕೊಡತಕ್ಕ ಎಲೆಕ್ಟ್ರಾನಿಕ್ ಮತ್ತಿತರ ಕೆಲವು ಉದ್ದಿಮೆಗಳನ್ನು ಪ್ರಾರಂಭ ಮಾಡಬೇಕಾಗುತ್ತದೆ. ಇಂಥದ್ದನ್ನೆಲ್ಲಾ ಈ ರಾಜ್ಯದ ಬಜೆಟ್‌ನಲ್ಲಿ ಅಳವಡಿಸಿದಾಗ ಮಾತ್ರ ಇದು ಪೂರಕವಾದ ಬಜೆಟ್ ಎಂದು ಅನ್ನಿಸಿ ಕೊಳ್ಳುತ್ತದೆ. ಅಂಥ ಯಾವ ಕಾರ್ಯಕ್ರಮಗಳೂ ಈ ಬಜೆಟ್ ನಲ್ಲಿ ಇಲ್ಲ ಸರ್ಕಾರ ಯಾವ ದಿಸೆಯಲ್ಲಿ ಹೋಗುತ್ತಿದೆ ಎಂಬುದನ್ನು ಈ ಬಜೆಟ್‌ನಲ್ಲಿ ಯೋಚಿಸಿಲ್ಲ. ಸೀಮಿತವಾಗಿರತಕ್ಕ ವರಮಾನದಲ್ಲಿ ಯಾವುದಕ್ಕೆ ಪ್ರಾಶಸ್ತ್ಯ ಕೊಡಬೇಕು, ಯಾವುದಕ್ಕೆ ಪ್ರಾಶಸ್ತ್ಯ ಕೊಟ್ಟರೆ ನಮ್ಮ ದೇಶ ಮುಂದೆ ಬರಲಿಕ್ಕೆ ಸಾಧ್ಯತೆ ಇದೆ ಎಂದು ಯೋಚನೆ ಮಾಡಿಲ್ಲ ಎಲ್ಲವನ್ನು ಮಾಡಲಿಕ್ಕೆ ಹೋಗಿ ಯಾವುದನ್ನು ಮಾಡಲಿಕ್ಕೆ ಸಾಧ್ಯವಿಲ್ಲದಂಥ ಬಜೆಟ್ ಆಗಿದೆ ಎಂದು ಕಾಣುತ್ತದೆ ಹಾಗಾಗಿ ಇದಕ್ಕೆ ಒಂದು ಡೈರೆಕ್ಷನ್ ಇಲ್ಲ ಮೂರನೆಯದಾಗಿ ಈ ಒಂದು ಬಜೆಟ್‌ನಲ್ಲಿ ಪೊಲಿಟಿಕಲ್ ವಿಲ್ ಎಂಬುದನ್ನು ಕಾಣುತ್ತಿಲ್ಲ ಉದಾಹರಣೆಗೆ ಹೇಳುವುದಾದರೆ ಕ್ಯಾಪಿಟೇಷನ್ ಫೀ ತೆಗೆಯುತ್ತೇವೆಂದು ಘಂಟಾಘೋಷವಾಗಿ ಹೇಳಿದ ಆಡಳಿತ ಪಕ್ಷದ ಸದಸ್ಯರು ಇವತ್ತು 5 ವರ್ಷದ ಹಳೇ ಹಾದಿಯನ್ನೇ ಹಿಡಿಯುತ್ತಿದ್ದಾರೆ. ನಾನು ವೈದ್ಯನಾಗಿ ನನಗೆ ಗೊತ್ತಿದೆ, ಒಬ್ಬ ವ್ಯಕ್ತಿ ಸರಾಯಿ ಕುಡಿಯುವುದನ್ನು ಬಿಡುತ್ತೇನೆಂದರೆ ಅವನಿಗೆ ಅದನ್ನು ಅಷ್ಟು ಸುಲಭವಾಗಿ ಬಿಡುವುದಕ್ಕೆ ಆಗುವುದಿಲ್ಲ. ಒಂದೇ ಸಲ ಬಿಡುಸುತ್ತೇನೆ ಎಂದರೆ ಮಾತ್ರ ಅದನ್ನು ಬಿಡಲಿಕ್ಕೆ ಸಾಧ್ಯವಾಗುತ್ತದೆ. ಕ್ಯಾಪಿಟೇಷನ್ ಶುಲ್ಕವನ್ನು ವಸೂಲು ಮಾಡತಕ್ಕ ಪದ್ಧತಿ ಏನಿದೆ ಇದು ಸರಿಯಾದುದಲ್ಲ ಭ್ರಷ್ಟಾಚಾರಕ್ಕೆ ಎಡೆಮಾಡಿಕೊಡುವಂತಹದು ಭ್ರಷ್ಟಾಚಾರವನ್ನು ತೊಡೆದು ಹಾಕುತ್ತೇವೆಂದು ಘಂಟಾಘೋಷವಾಗಿ ಸಾರಿದ್ದಾರೆ. ಅದನ್ನು ಅನುಷ್ಠಾನಕ್ಕೆ ತರಲು 5 ವರ್ಷ ಅವಕಾಶ ಏತಕ್ಕೆ ಬೇಕು ? ಕ್ಯಾಪಿಟೇಶನ್ ಶುಲ್ಕವನ್ನು ತೆಗೆಯುವುದಕ್ಕೆ 5 ವರ್ಷದ ಅವಕಾಶ ಏತಕ್ಕೆ ಬೇಕು ? ಇವರು ವೃತ್ತಿ ತೆರಿಗೆ ವಿಷಯದಲ್ಲಿ, ಪುರಸಭೆಗಳ ಚುನಾವಣೆ ಆದಮೇಲೆ ಪರಿಶೀಲನೆ ಮಾಡುತ್ತೇವೆಂದು ಹೇಳಿ ಜಾರಿಕೊಳ್ಳುತ್ತಿದ್ದಾರೆಯೇ ಹೊರತು ಬೇರೇನು ಅಲ್ಲ. ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆ, ಪುರಸಭೆಗಳಿಗೆ ಚುನಾವಣೆ ನಡೆಸುತ್ತೇವೆ ತಾಲ್ಲೂಕು ಬೋರ್ಡುಗಳಿಗೆ ಚುನಾವಣೆ ಮಾಡುತ್ತೇವೆ, ಜಿಲ್ಲಾ ಪರಿಷತ್ತುಗಳನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದಾರೆ. ಮುನಿಸಿಪಾಲಿಟಿ ಮತ್ತು ತಾಲ್ಲೂಕು ಬೋರ್ಡು ಆಕ್ಟ್‌ಗಳನ್ನು ನೋಡಿದರೆ ಮುನಿಸಿಪಾಲಿಟಿ ಮತ್ತು ತಾಲ್ಲೂಕು ಬೋರ್ಡು ಸದಸ್ಯರು ಕುಳಿತುಕೊಂಡು ಇಂಥಿಂಥದನ್ನು ಮಾಡಬಹುದೆಂದು ಸೂಚನೆ ಕೊಡುವ ಸದಸ್ಯರಾಗುತ್ತಾರೆಯೇ ಹೊರತು ಅವರಿಗೆ ಯಾವ ವಿಧವಾದ ಅಧಿ

ಕಾರ ಇರುವುದಿಲ್ಲ. ತಾವು ಹಾಕಿಕೊಳ್ಳುವ ಕಾರ್ಯಕ್ರಮವನ್ನು ಆಚರಣೆಗೆ ತರುವುದಕ್ಕೆ ಬೇಕಾದ ಹಣ ಇಲ್ಲದಿದ್ದರೆ ಏನು ಪ್ರಯೋಜನ ? ಇವತ್ತು ನಿಜವಾದ ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂದರೆ ಸಾಲದು ಅದು ಆಮೂಲಾಗ್ರವಾದ ಬದಲಾವಣೆಯನ್ನು ಹೊಂದಬೇಕು. ಈಗ ಇರತಕ್ಕ ಕೆಲವು ಕಾಯಿದೆಗಳನ್ನು ಕಿತ್ತು ಹಾಕಿ ಹೊಸಹೊಸ ಕಾಯಿದೆಗಳನ್ನು ರೂಪಿಸಬೇಕು ಹಿಂದೆ ಮಾಡಿದ ಕಾಯಿದೆ ಪ್ರಕಾರ ಸಾಮಾನ್ಯ ಅಧಿಕಾರಿಯೂ ಕೂಡ ಮುನಿಸಿಪಲ್ ಕೌನ್ಸಿಲ್ ಆಗಬಹುದು. ಅದನ್ನೆಲ್ಲ ಕೂಡಲೇ ತಿದ್ದುಪಡಿ ಮಾಡುವ ಕೆಲಸ ಮಾಡಬೇಕು. ಈ ಸದನದಲ್ಲಿ ದಕ್ಷತೆ ವಿಷಯ ಪ್ರಸ್ತಾಪವಾಗಿದೆ ಮತ್ತು ಶ್ವೇತ ಪತ್ರವನ್ನು ಪ್ರಕಟಣೆ ಮಾಡುವ ವಿಚಾರ ಬಂದಿದೆ. ಆದರೆ ಈ ಒಂದು ಮಂತ್ರಿಮಂಡಲದಿಂದ ಇದೆಲ್ಲ ಸಾಧ್ಯವೆ ಎಂಬ ಅನುಮಾನ ಬರುತ್ತಿದೆ. ಆದ್ದರಿಂದ ಮಂತ್ರಿಗಳಿಗೆ, ಮುಖ್ಯಮಂತ್ರಿಗಳು ಒಂದು ಮಾರ್ಗದರ್ಶನದ ತರಗತಿಯನ್ನು ತೆರೆದು ಮಾರ್ಗದರ್ಶನ ನೀಡತಕ್ಕ ವ್ಯವಸ್ಥೆ ಮಾಡಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ. ಸಹಕಾರಸಂಘಗಳಿಗೆ ಜುಲೈನಲ್ಲಿ ಚುನಾವಣೆ ಮಾಡುತ್ತೇವೆಂದು ಹೇಳಿದರು. ಈ ಹೇಳಿಕೆ ಕೊಡತಕ್ಕ ಜನ ಸಹಕಾರಸಂಘಗಳ ಬಗ್ಗೆ ಏನೂ ತಿಳುವಳಿಕೆ ಇಲ್ಲದ ಜನರೆಂದು ಹೇಳುತ್ತೇನೆ. ಏಕೆಂದರೆ ಸಹಕಾರಸಂಘಗಳ ವರ್ಷದ ಅವಧಿಮುಗಿಯುವುದು ಜೂನ್ ಕೊನೆಗೆಮತ್ತು ಅವುಗಳ ಬಡ್ಜೆಟ್ ಆಗತಕ್ಕದ್ದು ಆಗ ಜುಲೈ, ಆಗಸ್ಟ್‌ನಲ್ಲಿ ಯಾವ ಬಡ್ಜೆಟ್ಟು ತಯಾರಾಗುವುದಿಲ್ಲ ಅಂದಾಗ ಜುಲೈನಲ್ಲಿ ಚುನಾವಣೆ ಮಾಡುತ್ತೇವೆಂದು ಹೇಳುವುದು ಅಪ್ರಭುದ್ಧ ರಾಜಕಾರಣಿ ಹೇಳುವ ಮಾತು. ಅಂಥದ್ದನ್ನು ಕಂಡು ಸಹಕಾರ ಇಲಾಖೆಯಲ್ಲಿರುವವರು ನಗುವ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಅದನ್ನು ಸರಿಯಾಗಿ ತಿಳಿದುಕೊಂಡು ಇನ್ನು ಮುಂದಾದರೂ ಜನತೆಯ ಮುಂದೆ ಹಾಸ್ಯಕ್ಕೆ ಗುರಿಯಾಗುವ ನಿರ್ಣಯಗಳನ್ನು ಹೇಳಬಾರದೆಂದು ಹೇಳುತ್ತೇನೆ. ಆಹಾರ ಪದಾರ್ಥಗಳ ಬೆಲೆ ಇಳಿಸುವ ಸಲುವಾಗಿ 3 ಜನ ಮಂತ್ರಿಗಳ ಒಂದು ಸಮಿತಿ ಮಾಡಿದರು. ಅವರು ಎರಡೇ ದಿನಗಳಲ್ಲಿ ವರದಿ ಕೊಟ್ಟರು. ದೇಶದಲ್ಲಿರತಕ್ಕ ಸಮಸ್ಯೆಗಳ ಬಗ್ಗೆ ಕೇವಲ ಎರಡು ದಿನಗಳಲ್ಲಿ ವರದಿ ಕೊಡುವ ಸಾಮರ್ಥ್ಯವನ್ನು ಅವರು ಹೊಂದಿದ್ದರೆ ಈ ಸರ್ಕಾರ 5 ವರ್ಷಗಳ ಕಾಲ ಕೆಲಸ ಮಾಡುವ ಅಗತ್ಯವಿಲ್ಲ; ಕೇವಲ ಒಂದೇ ವರ್ಷದಲ್ಲಿ ಎಲ್ಲ ಸಮಸ್ಯೆಗಳನ್ನು ನಿವಾರಣೆ ಮಾಡಲಿಕ್ಕೆ ಸಾಧ್ಯವಿಲ್ಲ ದಯವಿಟ್ಟು ಅಂಥ ಹೇಳಿಕೆಯನ್ನು ಮಂತ್ರಿಮಂಡಲದವರು ಕೊಡುವುದಕ್ಕೆ ಮುಂಚೆ ಯೋಚನೆ ಮಾಡಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ. ಇವತ್ತು ಐ. ಆರ್. ಡಿ. ಪಿ. ಕೆಲಸ ಏನು ನಡೆಯುತ್ತಿದೆ ಅದರ ಬಗ್ಗೆ ಒಂದೇ ಒಂದು ದೃಷ್ಟಾಂತವನ್ನು ಹೇಳುತ್ತೇನೆ. ಒಬ್ಬರಿಗೆ ಗೋಬರ್ ಗ್ಯಾಸ್ ಪ್ಲಾಂಟ್ ಮಂಜೂರಾಯಿತು; ಮಂಜೂರಾದಾಗ ಬ್ಯಾಂಕಿಗೆ ಹೋಗಿ ಸಾಲ ಕೇಳಿದರು. ಇವತ್ತು ಬಾ, ನಾಳೆ ಬಾ ಎಂದು ಬ್ಯಾಂಕಿನಲ್ಲಿ ಹೇಳಲಾಗಿ 4 ದಿನ ತಿರುಗಿದ. ಅವರಿಗೆ ಕೊಡತಕ್ಕ ಸಾಲ 5 ಸಾವಿರ ರೂಪಾಯಿ. ಆದರೆ ಅವರದೇ ಆದ 25 ಸಾವಿರ ರೂಪಾಯಿ ಅಲ್ಲಿ ಡಿಪಾಸಿಟ್ ಇದ್ದರೂ ಏತಕ್ಕೆ ತಿರುಗಾಡಬೇಕೆಂದು ಕೇಳುವ ಅಧಿಕಾರ ಅವರಿಗೆ ಇಲ್ಲ. ನೀವು ಸಾಲ ತೆಗೆದುಕೊಳ್ಳುವವರು. ನಾವು ಸಾಲ ಕೊಡುವವರು, ನಾವು ಕೊಡತಕ್ಕ ಸಾಲ ಕೆಗಾರಿಕೆಗಳಿಗೆ ಸೀಮಿತವಾದುದು ಎಂದು ಬ್ಯಾಂಕಿನವರು ಹೇಳುತ್ತಾರೆ. ಆದ್ದರಿಂದ ಇಂಥದ್ದನ್ನು ನಿಲ್ಲಿಸಿ ದಕ್ಷತೆ ತೋರಿಸಬೇಕೆಂದು ಬಿನ್ನವಿಸಿಕೊಳುತ್ತೇನೆ. ಇನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಕೆಲವು ಕಾಲೇಜುಗಳಲ್ಲಿ 5 ನೇ ತಾರೀಖು ನಡೆಯಬೇಕಾದ ಪರೀಕ್ಷೆಗಳನ್ನು ಏಪ್ರಿಲ್ 19 ಕ್ಕೆ ಮುಂದೆ ಹಾಕಿದ್ದಾರೆ; ಅದನ್ನು ಇನ್ನೂ ಮುಂದಕ್ಕೆ ಹಾಕುವ ಪರಿಸ್ಥಿತಿ ಇದೆ. ಹಿಂದೆ ಕೂಡ ಇದೇ ರೀತಿ ಆಗಿ 8 ನೇ ಸೆಮಿಸ್ಟರ್‌ನಲ್ಲಿ ಇರಬೇಕಾದವರು 7 ನೇ ಸೆಮಿಸ್ಟರ್‌ನಲ್ಲಿದ್ದಾರೆ. ಪರೀಕ್ಷೆಗಳನ್ನು ಮುಂದಕ್ಕೆ ಹಾಕುವುದರಿಂದ ವಿದ್ಯಾರ್ಥಿಗಳ ಅಮೂಲ್ಯವಾದ ವರ್ಷ ವ್ಯಯವಾಗುತ್ತದೆ, ವಿಶ್ವವಿದ್ಯಾನಿಲಯಗಳನ್ನು ನಡೆಸುವ ಜನರಿಗೆ ಅದರ ಬಗ್ಗೆ ತಿಳುವಳಿಕೆ ಇಲ್ಲವಾಗಿದೆ. ಆದ್ದರಿಂದ ಇದನ್ನು ಸರ್ಕಾರದವರು ನೋಡಿಕೊಳ್ಳಬೇಕೆಂದು ನಮ್ರತೆಯಿಂದ ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ಕಡೆ ನೆರೆ ಹಾವಳಿಯಿಂದ ಭಾರಿ ಹಾನಿ ಉಂಟಾಗಿದೆ. ಆ ಕಡೆಯೂ ಸರ್ಕಾರ ಗಮನ ಹರಿಸಬೇಕೆಂದು ಹೇಳುತ್ತೇನೆ. ನಮ್ಮ ಕಡೆ ರಸ್ತೆ ಮಾಡುವ ಸಲುವಾಗಿ ಎಲ್ಲ ತಾಲ್ಲೂಕಿಗೆ ಹಣ ಒದಗಿಸಲಾಯಿತು ಅದರಲ್ಲಿ ನಮ್ಮ ಕುಮುಟ ತಾಲ್ಲೂಕಿಗೆ ಒದಗಿಸಿದ್ದ ಹಣದುರುಪಯೋಗವಾಗಿದೆ ಎಂದು ತನಿಖೆಯ ವರದಿಯಲ್ಲಿ ಬಂದಿದೆ. ಅದರ ಬಗ್ಗೆ ವಿಚಾರಣೆಮಾಡಿ ಕ್ರಮಕೈಗೊಳ್ಳಬೇಕೆಂದು ಮಂತ್ರಿವರ್ಯರನ್ನು ಕೇಳಿಕೊಳ್ಳುತ್ತೇನೆ.

ಇನ್ನು ವಿದ್ಯುತ್ ಪೂರೈಕೆ ಬಗ್ಗೆ ಹೇಳುತ್ತೇನೆ. ಗ್ರಾಮಗಳ ವಿದ್ಯುತ್ ಪೂರೈಕೆ ಬಗ್ಗೆ ಭಾರಿ ಅಂಕಿಸಂಖ್ಯೆಗಳನ್ನು ತೋರಿಸಿ-ಒಂದು ಆಜ್ಞೆಯನ್ನು ಸರ್ಕಾರದವರು ಹೊರಡಿಸಿದ್ದಾರೆ. ಯಾವುದೇ ಗ್ರಾಮದಲ್ಲಿ ವಿದ್ಯುತ್ತೀಕರಣ ಆಗಿದ್ದರೆ ಅಪರ ಮಜಲುಗಳಿಗೆ ವಿದ್ಯುತ್ ಕೊಡಬಾರದು ಎಂದು ಹೇಳಿದ್ದಾರೆ. ಯಾವ ಹಳ್ಳಿಯಲ್ಲಿ ನಾಲ್ಕು ಜನ ಕೂಡ ವಿದ್ಯುತ್ ಉಪಯೋಗ ಮಾಡಿಕೊಳ್ಳುವುದಿಲ್ಲವೋ ಆ ಹಳ್ಳಿಗೆ ಅಂಕಿಸಂಖ್ಯೆ ತೋರಿಸುವುದಕ್ಕಾಗಿ ವಿದ್ಯುತ್ ಕೊಡುತ್ತಿದ್ದಾರೆ. ಆದರೆ 25-30 ಪಂಪ್‌ಸೆಟ್ ಇರುವ ಜನರಿಗೆ ವಿದ್ಯುತ್ ಕೊಡುತ್ತಿಲ್ಲ. ಆದ್ದರಿಂದ ಅದನ್ನು ತಿದ್ದುಪಡಿ ಮಾಡಬೇಕೆಂದು ಮಾನ್ಯ ಮಂತ್ರಿವರ್ಯರ

ರನ್ನು ಕೇಳಿಕೊಳ್ಳುತ್ತೇನೆ. ನೆರೆಪೀಡಿತ ಪ್ರದೇಶಗಳಲ್ಲಿ ಮನೆ ಕಳೆದುಕೊಂಡವರಿಗೆ ಮನೆಗಳನ್ನು ಕಟ್ಟಿಸಿ ಕೊಡುತ್ತೇವೆಂದು ಹಿಂದಿನ ಸರ್ಕಾರ ಹೇಳಿತ್ತು. ಆ ಪ್ರಕಾರ ನಮ್ಮ ಜಿಲ್ಲೆಯ ನಿಯೋಗ ಮಾನ್ಯ ಮಂತ್ರಿ ವರ್ಯರನ್ನು ಕೇಳಿಕೊಂಡಾಗ ಸ್ವಲ್ಪ ಹಣ ಬಿಡುಗಡೆ ಮಾಡಿದರು. 20 ಲಕ್ಷ ರೂಪಾಯಿ ಬಿಡುಗಡೆ ಯಾಗಿ ಒಂದು ತಿಂಗಳಾದರೂ ಆ ಹಣ ಯಾರಿಗೆ ಸಿಗಬೇಕಾಗಿತ್ತೋ ಅವರಿಗೆ ಸಿಕ್ಕಿಲ್ಲ. ಇದು ಆಡಳಿತದ ಅಕ್ಷಮತೆಯೋ ಎಂದು ಕೇಳುತ್ತೇನೆ. ದಯವಿಟ್ಟು ಇದರ ಬಗ್ಗೆ ಯೋಚನೆ ಮಾಡಿ ಶೀಘ್ರಗತಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಕ್ಷೇತ್ರದಲ್ಲಿ ವಿದ್ಯಾಶಾಲೆ ಮುರಿದು ಬೀಳುವ ಪರಿಸ್ಥಿತಿ ಯಲ್ಲಿದೆ. ಈ ಮಳೆಗಾಲದಲ್ಲಿ ಅದು ಉಳಿಯುವುದಿಲ್ಲ ಎಂದು ಹೇಳುತ್ತಿದ್ದಾರೆ.

ಉಪಾಧ್ಯಕ್ಷರು.—ಪೂರ್ಣ ಮಾಡಿ.

ಶ್ರೀ ಕರ್ಕಿ.—ಮುಗಿಯುತಾ ಬಂತು. ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಬಾಕಿ ಯವರು ಮಾತನಾಡುವವರಿದ್ದಾರೆಂದು ನನಗೂ ಗೊತ್ತುಂಟು. ಹೀಗೆ ಅನೇಕ ಶಾಲೆಗಳು ಮುರಿದು ಬೀಳುವ ಸ್ಥಿತಿಯಲ್ಲಿರುವಾಗ ಅದರ ಕಡೆ ಗಮನ ಕೊಡದೆ ಬೆಂಗಳೂರಿನಲ್ಲಿರುವ ಅಠಾರಾ ಕಛೇರಿಯನ್ನು ಮುರಿದು ಹೊಸ ಹೈಕೋರ್ಟ್ ಕಟ್ಟಡ ಕಟ್ಟುವ ವಿಚಾರ ಮಾಡುತ್ತಿದ್ದಾರೆ. ಹೈಕೋರ್ಟ್ ಕಟ್ಟಡ ಮುರಿದು ಬೀಳುವ ಸ್ಥಿತಿಯಲ್ಲಿಲ್ಲ. ಮೊದಲು ಅವಶ್ಯಕವಾಗಿರುವುದಕ್ಕೆ ಹಣ ವ್ಯಯ ಮಾಡಿ ನಂತರ ಉಳಿದದಕ್ಕೆ ವ್ಯಯ ಮಾಡಲಿ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ರೈತರಿಗೆ ಕೊಡಬೇಕಾದ ಪರಿಹಾರದ ಬಗ್ಗೆ ಅನೇಕ ಜನರು ಮಾತನಾಡಿದಾರೆ. ಆದರೆ ನಾನು ಒಂದೇ ಮಾತಿನಲ್ಲಿ ಮುಗಿಸುತ್ತೇನೆ. ರೈತರ ಸಾಲ ಪರಿಹಾರಕ್ಕಿಂತ ಅವರು ಬೆಳೆದ ಬೆಳೆಗೆ ಯೋಗ್ಯವಾದ ದರ ಸಿಗಬೇಕು. ಆ ದರ ಬಿತ್ತನೆ ಕಾಲಕ್ಕೆ ನಿಗದಿಯಾಗ ಬೇಕು ಎಂದು ರೈತರು ಆಶಿಸುತ್ತಾರೆ. ಹಾಗಾದಾಗ ಮಾತ್ರ ತಾನು ಬೆಳೆದ ಫಸಲಿಗೆ ಎಷ್ಟು ಉತ್ಪನ್ನ ಬರಬಹುದು ಎಂಬುದರ ಆಧಾರದ ಮೇಲೆ ತನ್ನ ದೈನಂದಿನ ಜೀವನದ ಬಜೆಟ್ಟನ್ನು ಯಾವರೀತಿ ತಯಾರು ಮಾಡಿಕೊಳ್ಳಬಹುದು ಎಂಬ ಕಲ್ಪನೆ ರೈತರಿಗೆ ಬರುತ್ತದೆಯೇ ವಿನಹ ಬರೀ ಸಾಲ ಮನ್ನಾ ಮಾಡುವುದರಿಂದ ಬರುವುದಿಲ್ಲ. ಹರಿಜನ ಹುಡುಗರಿಗೆ 5ನೇ ತರಗತಿಯಿಂದ ಸ್ಕಾಲರ್‌ಷಿಪ್ ಕೊಡುತ್ತಿದ್ದಾರೆ. ಎಷ್ಟೋ ಹರಿ ಜನ ಮಕ್ಕಳಿಗೆ ಅಲ್ಲಿಯವರೆಗೆ ಓದುವುದಕ್ಕೂ ಆಗದಿರುವ ಪರಿಸ್ಥಿತಿ ಇರುವುದರಿಂದ ಒಂದನೇ ತರಗತಿ ಯಿಂದಲೇ ಸ್ಕಾಲರ್‌ಷಿಪ್ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ನಾಗರೀಕರಣದ ಬಗ್ಗೆ ಹೇಳುತ್ತಾ ಬೆಂಗಳೂರನ್ನು ಸುಂದರವಾಗಿ ಮಾಡುತ್ತೇವೆಂದು ಹೇಳಿದ್ದಾರೆ. ಆಡಳಿತ ನಡೆಸತಕ್ಕವರಿಗೆ ಬೆಂಗಳೂ ರೊಂದೇ ಕಾಣುತ್ತದೆ. ಬೆಂಗಳೂರು ಬಿಟ್ಟರೆ ಬೇರೆ ನಗರಗಳಿಲ್ಲವೆ ನಮ್ಮ ರಾಜ್ಯದಲ್ಲಿ? ಅದರ ಬಗ್ಗೆ ಒಂದು ಮಾತೂ ಬೇಡವೆ? ಅಲ್ಲಿ ನಾಗರೀಕರು ಆಗಬೇಡವೆ? ಆದ್ದರಿಂದ ಮಂಗಳೂರು, ಹುಬ್ಬಳ್ಳಿ, ಧಾರವಾಡ ಇವುಗಳ ಬಗ್ಗೆ ಕೂಡ ಲಕ್ಷ್ಯ ಕೊಟ್ಟು ಅದೂ ಕೂಡ ಸುಂದರವಾಗಿ ಆಗುವಂತೆ ಮಾಡ ಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಷಯವನ್ನು ಹೇಳಲಿಕ್ಕೆ ಬಯಸುತ್ತೇನೆ. ಮರ ಮಾರಾಟ ಮಾಡುವ ಜನರಿಗೆ ಇವತ್ತು ಕಿರುಕುಳ ಆಗುತ್ತಿದೆ. ಮರಕ್ಕೆ 8 ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದಾರೆ. ಅರಣ್ಯ ಇಲಾಖೆಯವರು ಕೊಡುವಾಗಲೇ 8 ಪರ್ಸೆಂಟ್ ಸ್ಟೇಟ್ಸ್ ಟ್ಯಾಕ್ಸ್ ಎಂದು ರಿಸರ್ವ್ ಮಾಡುತ್ತಾರೆ ನಂತರ ಮತ್ತೆ 8 ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್‌ನಲ್ಲಿ ಕೇಳುತ್ತಾರೆ.

ಉಪಾಧ್ಯಕ್ಷರು.—ದಯವಿಟ್ಟು ಪೂರ್ಣ ಮಾಡಿ. ನಾನು 10 ನಿಮಿಷದಿಂದ ಹೇಳುತ್ತಿದ್ದೇನೆ. ಬೇರೆಯವರನ್ನು ಕರೆಯಬೇಕಾಗಿದೆ.

ಡಾ॥ ಕರ್ಕಿ.—ತಾವು ಮಧ್ಯೆ ಮಾತನಾಡಿದರೆ ನನಗೆ ಮತ್ತೆ ಎರಡು ನಿಮಿಷ ಹೆಚ್ಚು ಸಮಯ ಬೇಕಾ ಗುತ್ತದೆ. ದಯವಿಟ್ಟು ಇದನ್ನು ನೋಡಿ ಈ ರೀತಿ ಜನರಿಗೆ ಅನ್ಯಾಯವಾಗದಂತೆ, ಅಧಿಕಾರಿಗಳಿಂದ ಕಿರುಕುಳ ಆಗದಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ಈ ಬಜೆಟ್ಟಿನಲ್ಲಿ ರೈತರಿಗೆ, ಕಾರ್ಮಿಕರಿಗೆ ಹಾಗೂ ಇತರ ಎಲ್ಲ ವರ್ಗದ ಜನರಿಗೆ ಉಪಯುಕ್ತವಾದ ಸವಲತ್ತುಗಳನ್ನು ಒದಗಿಸಿದಾರೆ. ಕೆಲವು ನ್ಯೂನತೆಗಳಿದ್ದರೂ ಕೂಡ ಈ ಆಯವ್ಯಯ ಪತ್ರ ಸ್ವಾಗತಾರ್ಹವಾದುದು ಎಂದು ಹೇಳಲಿಕ್ಕೆ ಇಚ್ಛೆಪಡು ತ್ತೇನೆ. ಮಾನ್ಯ ಉಪಾಧ್ಯಕ್ಷರು ನನ್ನ ಮೇಲೆ ಸಿಟ್ಟಾದರೂ ಕೂಡ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ).— ಮಾನ್ಯ ಉಪಾಧ್ಯಕ್ಷರೆ, ಇಂದಿನ ಮುಂಗಡ ಪತ್ರದ ಮೇಲಿನ ಚರ್ಚೆಯಲ್ಲಿ ಭಾಗವಹಿಸುತ್ತಾ ಇದನ್ನು ನಾನು ಪ್ರಬಲವಾಗಿ ವಿರೋಧಿಸುತ್ತಿದ್ದೇನೆ. ರಾಜ್ಯದ ಅಭಿವೃದ್ಧಿಯನ್ನು ಕಡೆಗಾಣಿಸಿದ, ಬಡಜನತೆಯ ಆಶೋತ್ತರಗಳನ್ನು ಪರಿಹರಿಸಲು ಪ್ರಯತ್ನಿಸದ ರಾಜ ಕೀಯ ಪ್ರಚಾರಕ್ಕಷ್ಟೇ ಸೀಮಿತವಾದ ಹತಾಶ ಮುಂಗಡಪತ್ರ ಇದು ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಹೊಣೆಗಾರಿಕೆಯನ್ನು ಕೇಂದ್ರ ಸರ್ಕಾರಕ್ಕೆ ವರ್ಗಾಯಿಸಿ ಹಿಂದಿನ ಸರ್ಕಾರವನ್ನು ದೋಷಾರೋಪಣೆ ಮಾಡಿ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಯತ್ನಿಸಿದ ಮುಂಗಡಪತ್ರ ಇದೆಂದೂ ಹೇಳಬಯಸುತ್ತೇನೆ. ಬರಗಾಲ

ಕರ್ನಾಟಕದಲ್ಲಿ ಹೊಸದೇನೂ ಅಲ್ಲ 1982-83ರಲ್ಲಿ ಬಂದ ಪ್ರವಾಹ ಕಾಲದಲ್ಲಿ ನನ್ನ ಕುಂದಾಪುರ ತಾಲ್ಲೂಕಿನಲ್ಲಿ 1490 ಮನೆಗಳು ಬಿದ್ದು ಹೋಗಿದ್ದವು. ಆ ಸಂದರ್ಭದಲ್ಲಿ ಹಿಂದಿನ ಸರ್ಕಾರ ಕೇಂದ್ರ ಸರ್ಕಾರದ ನೆರವಿನೊಂದಿಗೆ ಈ ಮನೆಗಳನ್ನು ಕಟ್ಟಿಸಲು ತುಂಬಾ ಸಹಕರಿಸಿತು. ಆದರೆ ಈ ಮನೆಗಳೆಲ್ಲಾ ಈಗ ಅರ್ಧ ಕಟ್ಟಿದ ಸ್ಥಿತಿಯಲ್ಲಿದೆ. ಇದನ್ನು ಸಂಪೂರ್ಣಗೊಳಿಸಲು ಇಂದಿನ ಸರ್ಕಾರ ಪ್ರಯತ್ನಿಸಿಲ್ಲ. ಅಧಿಕಾರಿಗಳು ಗುರುತಿಸಲು ಸಾಧ್ಯವಾಗದಂಥ 300ಕ್ಕೂ ಹೆಚ್ಚಿನ ಮನೆಗಳಿವೆ ಅವುಗಳನ್ನು ಕಟ್ಟುವ ವ್ಯವಸ್ಥೆಯನ್ನು ಸಹ ಹಿಂದಿನ ಸರ್ಕಾರ ಮಾಡಿಲ್ಲ. ಇನ್ನೂ ಎರಡು ಮೂರು ತಿಂಗಳಲ್ಲಿ ಮಳೆಗಾಲ ಪ್ರಾರಂಭವಾಗುವುದರಿಂದ ಆ ಜನರಿಗೆ ಸರಿಯಾದ ವ್ಯವಸ್ಥೆಯನ್ನು ಮಾಡಿಕೊಡುವಲ್ಲಿ ಸರ್ಕಾರ ಪ್ರಯತ್ನಿಸುತ್ತದೆಯೋ ಎಂದು ನಾನು ತಿಳಿಯಬಯಸುತ್ತೇನೆ. ಈ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಾ ಈ ವಿಷಯದಲ್ಲಿ ಸರ್ಕಾರ ಹೆಚ್ಚಿನ ವಿಶ್ವಾಸವನ್ನು ಜನರಲ್ಲಿ ಮೂಡಿಸಲಿಲ್ಲ ಎಂದು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಈಗಾಗಲೇ ಇರುವ ವಿದ್ಯುಚ್ಛಕ್ತಿ ಅಭಾವವನ್ನು ನೀಗಿಸಲು ಈ ಸರ್ಕಾರ ವಿಫಲವಾಗಿದೆ. ಹೊರರಾಜ್ಯಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳಲು ಈ ಸರ್ಕಾರ ವಿಫಲವಾಗಿ ಚಿಂತಾಜನಕ ಪರಿಸ್ಥಿತಿಯಲ್ಲಿದೆ ಹಿಂದಿನ ಸರ್ಕಾರ ಕೈಗೊಂಡಿದ್ದ ಅನೇಕ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದಲ್ಲದೆ ಹೊಸಯೋಜನೆಗಳನ್ನೂ ಹಾಕಿ ಮುಂದೆ ಬರಬಹುದಾದ ವಿದ್ಯುತ್ ಕ್ಷಾಮದಿಂದ ತಪ್ಪಿಸಿಕೊಳ್ಳಲು ಇಂದಿನ ಸರ್ಕಾರ ಪ್ರಯತ್ನಿಸಬೇಕಾದ ಅಗತ್ಯ ಮುಖ್ಯವಾಗಿದೆ.

ಇನ್ನು ನೀರಾವರಿ ವಿಚಾರದಲ್ಲಿ ಮಾತನಾಡುವುದಾದರೆ ದಕ್ಷಿಣ ಕನ್ನಡ ಜಿಲ್ಲೆಗೆ ನೀರಾವರಿಯಲ್ಲಿ ಹೆಚ್ಚಿನ ಪ್ರಾತಿನಿಧ್ಯ ಕೊಟ್ಟಂತೆ ಕಾಣಿಸುತ್ತಿಲ್ಲ. ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಕುಂದಾಪುರ ತಾಲ್ಲೂಕಿನ ಪ್ರತಿಷ್ಠಿತ ವರಾಹಿ ಯೋಜನೆಯನ್ನು ಹಿಂದಿನ ಸರ್ಕಾರ ಘೋಷಿಸಿದಂತೆ ಮೂರು ವರ್ಷಗಳಲ್ಲಿ ಸಂಪೂರ್ಣಗೊಳಿಸಿ ಅದಕ್ಕೆ ಅಗತ್ಯವಿರುವ ಸಂಪನ್ಮೂಲಗಳನ್ನು ಇಂದಿನ ಸರ್ಕಾರ ಪೂರೈಸಬೇಕಾಗಿದೆ ಈ ವಿಚಾರದಲ್ಲಿ ರಾಜಕೀಯ ಅಗತ್ಯವಿಲ್ಲ. ಇದಕ್ಕೆ ರಾಜಕೀಯ ಬಳಸಬಾರದು ಎಂದು ಈ ಸದನದ ಮುಖೇನ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆಗೆ ಒದಗಿಸಿರತಕ್ಕ ಹಣ ಬಹಳ ಕಡಿಮೆ ಇದೆ ಎಂದು ನಾನು ಹೇಳುತ್ತೇನೆ ಇವತ್ತಿನ ದಿವಸ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾರಿಗೆ ಸಂಪರ್ಕ ಸರಿಯಾಗಿ ಇಲ್ಲವಾಗಿದೆ ಇಲ್ಲಿನ ಎಷ್ಟೋ ಕುಗ್ರಾಮಗಳು ಮಳೆಗಾಲದಲ್ಲಿ ನೀರು ಆವರಿಸಲಾಗಿ ಅವು ದ್ವೀಪಗಳಂತೆ ಕಾಣುತ್ತವೆ. ಇಂತಹ ಸಮಯದಲ್ಲಿ ವಿದ್ಯಾರ್ಥಿಗಳು ಶಾಲೆಗೆ ಹೋಗುವುದಕ್ಕೆ, ಖಾಯಿಲೆ ಬಿದ್ದ ಜನರು ಆಸ್ಪತ್ರೆಗಳಿಗೆ ಹೋಗಲು ಆಗುವುದಿಲ್ಲ. ಆದ್ದರಿಂದ ಇಂತಹ ಕುಗ್ರಾಮಗಳನ್ನು ಗುರ್ತಿಸಿ, ಪ್ರತಿ ವರ್ಷ ಐದೈದು ಕುಗ್ರಾಮಗಳನ್ನು ಗುರ್ತಿಸಿ ಅವುಗಳಿಗೆ ಸರಿಯಾದ ಸಾರಿಗೆ ಸಂಪರ್ಕವನ್ನು ಒದಗಿಸಿಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ. ಇನ್ನು ಮೀನುಗಾರರ ಬಗ್ಗೆ ಹೇಳುವುದಾದರೆ ಆಳ ಸಮುದ್ರಕ್ಕೆ ಹೋಗುವ ಮೀನುಗಾರರಿಗೆ ಏನು ಪ್ರೋತ್ಸಾಹ ಕೊಡುತ್ತೀರೋ ಹಾಗೇ ಸಾಂಪ್ರದಾಯಿಕ ಮೀನುಗಾರರಿಗೂ ಪ್ರೋತ್ಸಾಹ ಕೊಡಬೇಕು. ಇವರಿಗೆ ಸಾಲ ಮತ್ತು ಮನೆ ನಿವೇಶನಗಳನ್ನು ಕೊಡಬೇಕೆಂದು ನಾನು ಹೇಳುತ್ತೇನೆ. ಈ ಬಗ್ಗೆ ಇಂದಿನ ಸರ್ಕಾರ ಪ್ರೋತ್ಸಾಹ ಕೊಟ್ಟ ಹಾಗೆ ಕಾಣುತ್ತಿಲ್ಲ. ಹಾಗೂ ಜನತಾ ಗೃಹಗಳಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟ ಹಾಗೆ ಕಾಣುವುದಿಲ್ಲ ಹಾಗೂ ಶಿಕ್ಷಣ ಕ್ರಮದಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕಾಗಿದೆ. ಯಾರು ಹಿಂದಿನ ಕಾಲದ ಕೃಷಿಯನ್ನೇ ಅವಲಂಭಿಸಿಕೊಂಡಿದ್ದಾರೆ ಅವರಿಗೆ ವ್ಯವಸಾಯದ ಬಗ್ಗೆ ಒಳ್ಳೆಯ ಶಿಕ್ಷಣವನ್ನು ಕೊಡಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಸೀಮೆ ಎಣ್ಣೆಯ ಕೊರತೆ ಇದೆ ನಮ್ಮ ಕುಂದಾಪುರ ತಾಲ್ಲೂಕಿನಲ್ಲಿ 1 ಲಕ್ಷ 20 ಸಾವಿರ ಲೀಟರ್ ಸೀಮೆ ಎಣ್ಣೆ ಕೊರತೆ ಇದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಿದರೂ ಅವರು ಸರಿಯಾದ ಉತ್ತರವನ್ನು ಕೊಡಲಿಲ್ಲ ಈ ಬಗ್ಗೆ ಮಲತಾಯಿ ಧೋರಣೆ ತೋರಿಸದೇ ಹೆಚ್ಚಿನ ಗಮನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಇನ್ನು ಈಗ ಮಹಾನ್ ವ್ಯಕ್ತಿಯ 'ಗಾಂಧಿ' ಎಂಬ ಚಲನಚಿತ್ರ ಪ್ರದರ್ಶನವಾಗುತ್ತಿದೆ ಅದಕ್ಕೆ ಬೇರೆ ರಾಜ್ಯಗಳಲ್ಲಿ ತೆರಿಗೆ ವಿನಾಯಿತಿ ಕೊಟ್ಟಿದ್ದರೂ ನಮ್ಮ ರಾಜ್ಯದಲ್ಲಿ ತೆರಿಗೆ ವಿನಾಯಿತಿ ಕೊಡದೇ ಇರುವುದು ಮಲತಾಯಿ ದೋರಣೆ ಎಂದು ನಾನು ಹೇಳುತ್ತೇನೆ. ಈಗಾಗಲೇ ಚುನಾವಣಾ ಪ್ರಣಾಳಿಕೆಯಲ್ಲಿ ಏನೇನು ಆಶ್ವಾಸನೆಗಳನ್ನು ಕೊಟ್ಟಿದ್ದರೋ ಅದನ್ನೆಲ್ಲಾ ಇವರು ಪೂರೈಸುವುದಿಲ್ಲ ಎಂಬ ಭಾವನೆ ಜನರಲ್ಲಿ ಬರಬಾರದು. ಮಾನ್ಯ ಸರ್ಕಾರ ಏನೇನು ಕಾರ್ಯಕ್ರಮಗಳನ್ನು ಮುಂಗಡ ಪತ್ರದ ಮುಖಾಂತರ ಹಾಕಿಕೊಂಡಿದೆ ಅದನ್ನೆಲ್ಲಾ ಅನುಷ್ಠಾನಕ್ಕೆ ತರುವಲ್ಲಿ ಸಫಲವಾಗಲಿ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮದನ್ ಗೋಪಾಲ್ ನಾಯಕ್ (ಶೋರಾಪುರ್).—ಮಾನ್ಯ ಅಧ್ಯಕ್ಷರೇ, 1983-84ರ ಮುಂಗಡ ಪತ್ರವನ್ನು ನಾವು ಬಹಳ ಆಶಾದಾಯಕವಾಗಿ ನಿರೀಕ್ಷೆ ಮಾಡಿದ್ದೆವು. ಏಕೆಂದರೆ, ರಾಜಕಾರಣದಲ್ಲಿ

ಬಹಳ ನುರಿತಂತಹ ಮತ್ತು ವಿವಿಧ ಸಂಸ್ಥೆಗಳಲ್ಲಿ, ರಾಜಕೀಯದಲ್ಲಿ ಸೇವೆ ಸಲ್ಲಿಸಿರುವ ನಮ್ಮ ಮಾನ್ಯ ಮುಖ್ಯಮಂತ್ರಿಯವರು, ಹಿಂದೆ ಅರ್ಥಸಚಿವರಾಗಿದ್ದಂತಹ ಮಾನ್ಯ ಶ್ರೀರಾಮಕೃಷ್ಣ ಹೆಗ್ಗಡೆಯವರು ಏನೊಂದು ಮುಂಗಡ ಪತ್ರವನ್ನು ಕರ್ನಾಟಕ ಜನತೆಯ ಮುಂದೆ ಇಟ್ಟರೋ ಅದರ ಬಗ್ಗೆ ನಾವು ಬಹಳ ಭರವಸೆಯನ್ನು ಇಟ್ಟುಕೊಂಡಿದ್ದೆವು. ಆದರೆ ಈ ಮುಂಗಡ ಪತ್ರವನ್ನು ನೋಡಿದ ಮೇಲೆ ನಮ್ಮೆಲ್ಲರ ಆಸೆ ನಿರಾಶೆಯಾಗಿದೆ ಸರ್ಕಾರ ಪ್ರತಿಸಲವೂ ನಮಗೆ ಕೇಂದ್ರ ಸರ್ಕಾರದವರು ಸಹಕಾರ ಕೊಡುವುದಿಲ್ಲವೆಂದು ಹೇಳುತ್ತಾ ಬಂದಿವೆ. ಆದರೆ ಇಂದಿನ ದಿವಸ ಶ್ರೀಮತಿ ಇಂದಿರಾಗಾಂಧಿಯವರು ರಾಜ್ಯದ ಆಡಳಿತ ಮತ್ತು ಕೇಂದ್ರದ ಆಡಳಿತದ ನಡುವೆ ಭಿನ್ನಾಭಿಪ್ರಾಯ ಇರಬಾರದೆಂದು ಆರ್ಥಿಕ ಮತ್ತು ರಾಜಕೀಯವಾಗಿ ಅಲ್ಲಿನ ತೊಂದರೆಗಳನ್ನು ವೀಕ್ಷಿಸಲು ಒಂದು ಆಯೋಗವನ್ನು ನೇಮಿಸಿದ್ದಾರೆ. ಇದನ್ನು ನಾನು ಮನಃಪೂರ್ವಕವಾಗಿ ಸ್ವಾಗತಿಸುತ್ತೇನೆ ಮತ್ತು ಇದೇ ರೀತಿ ಎಲ್ಲಾ ಸದಸ್ಯರೂ ಕೂಡ ಈ ಒಂದು ಆಯವ್ಯಯವನ್ನು ಸ್ವಾಗತಿಸುತ್ತೀರಿ ಎಂದು ನಾನು ನಂಬಿದ್ದೇನೆ. ಅಧ್ಯಕ್ಷರೆ, ಜನತಾ ಮತ್ತು ಕ್ರಾಂತಿರಂಗದ ಪ್ರಣಾಳಿಕೆಯಲ್ಲಿ ಜನರಿಗೆ ಮತ್ತು ರೈತರಿಗೆ ಬಹಳಷ್ಟು ಆಶ್ವಾಸನೆಗಳನ್ನು ಕೊಟ್ಟಿದ್ದಾರೆ ಆದರೆ ಆ ಕೊಟ್ಟ ಆಶ್ವಾಸನೆಗಳನ್ನು ಈಡೇರಿಸುವಲ್ಲಿ ಅವರು ಹಿಂದುಳಿದಿದ್ದಾರೆ. ಈಗಾಗಲೇ ಈ ಬಗ್ಗೆ ಬಹಳ ಸದಸ್ಯರು ಈ ಮಾತನಾಡಿದ್ದಾರೆ. ಈಗ ರೈತರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವ ಬಗ್ಗೆ ಹೇಳುವುದಾದರೆ ಇವತ್ತು ಸರ್ಕಾರಕ್ಕೆ ಗೊತ್ತಿರುವ ಹಾಗೆ 19 ಜಿಲ್ಲೆಗಳಲ್ಲಿ ಇವತ್ತು 16 ಜಿಲ್ಲೆಗಳು ಬರಗಾಲಪೀಡಿತವಾಗಿವೆ ಇಂತಹ ಒಂದು ಸಮಯದಲ್ಲೂ ಸಹಾ ರೈತರಿಗೆ ತಾವು ಸಾಯಲೂ ಬಿಟ್ಟಿಲ್ಲ, ಬದುಕಲೂ ಬಿಟ್ಟಿಲ್ಲ ಈಗಾಗಲೇ ಮಳೆ ಇಲ್ಲದೇ ಬೆಳೆಗಳು ನಾಶವಾಗಿದ್ದು ಇವರು ಅಸಲನ್ನು ಜೂನ್ 31ರ ಒಳಗೆ ತುಂಬಿದರೆ ಬಡ್ಡಿಯನ್ನು ಏನು ಮಾಫಿ ಮಾಡುತ್ತೇವೆಂದು ಹೇಳಿದ್ದೀರಿ ಇದರಿಂದ ರೈತರಿಗೆ ಬಹಳ ಮೋಸವಾಗಿದೆ. ನಮ್ಮ ಹೈದರಾಬಾದ್ ಕರ್ನಾಟಕ ಪ್ರದೇಶ ಬಹಳ ಹಿಂದುಳಿದಿರತಕ್ಕ ಪ್ರದೇಶ. ನಮ್ಮ ಗುಲಬರ್ಗ, ಬೀದರ್, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳು ಬಹಳ ಹಿಂದುಳಿದ ಜಿಲ್ಲೆಗಳಾಗಿದ್ದು ಇವನ್ನು ಮೇಲೆತ್ತಲು ಹಿಂದಿನ ಸರ್ಕಾರ ಒಂದು ಕಾರ್ಯಕ್ರಮ ಹಾಕಿಕೊಂಡು ಸುಮಾರು 10 ವರ್ಷಗಳಲ್ಲಿ 350 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅಭಿವೃದ್ಧಿ ಮಾಡುವ ಯೋಜನೆಯನ್ನು ಹಾಕಿಕೊಂಡಿದ್ದರು. ಆದರೆ ಈ ಬಗ್ಗೆ ತಮ್ಮ ಮುಂಗಡ ಪತ್ರದಲ್ಲಿ ಏನನ್ನೂ ಹೇಳಿಲ್ಲ. ಹಾಗೂ 20 ಅಂಶಗಳ ಆರ್ಥಿಕ ಕಾರ್ಯಕ್ರಮಗಳನ್ನು ಮುಂದುವರೆಸಿಕೊಂಡು ಬರುವುದಾಗಿ ಹೇಳಿದ್ದೀರಿ. ಆದರೆ ಆ ಕಾರ್ಯಕ್ರಮದಲ್ಲಿ ಇರತಕ್ಕ ನೇಗಿಲ ಭಾಗ್ಯ, 'ಆಶಾಕಿರಣ', 'ಮುನ್ನಡೆ' ಎಂಬ ರೈತರಿಗೆ ಉಪಯೋಗವಾಗತಕ್ಕ, ಸಹಾಯವಾಗತಕ್ಕ ಕಾರ್ಯಕ್ರಮಗಳ ಬಗ್ಗೆ ತಾವು ಚಕಾರವನ್ನೂ ಸಹಾ ಎತ್ತಿಲ್ಲ. ಬರೀ ಅಂತ್ಯೋದಯ ಎಂಬ ಒಂದು ಸ್ಕೀಮನ್ನು ಮಾತ್ರ ಇಟ್ಟಿದ್ದೀರಿ. ಹಿಂದೆ ಕೇಂದ್ರದಲ್ಲಿ ಜನತಾ ಸರ್ಕಾರ ಇದ್ದಾಗ "ಅಂತ್ಯೋದಯ" ವನ್ನು ಜಾರಿಗೆ ತರಲಾಯಿತು ಈ ಅಂತ್ಯೋದಯವನ್ನು ಇಟ್ಟ ಜನತಾ ಸರ್ಕಾರ ಇಟ್ಟ ಎರಡೂವರೆ ವರ್ಷದಲ್ಲಿ ಅಂತ್ಯವಾಯಿತು. ಅದೇ ರೀತಿ ಇಲ್ಲಿನ ಜನತಾ ಸರ್ಕಾರದವರು ಇದೇ ಅಂತ್ಯೋದಯವನ್ನು ಅಳವಡಿಸಿಕೊಂಡು ಬಂದಿದ್ದಾರೆ. ಇವರ ಅಂತ್ಯ ಯಾವ ವೇಳೆಯಲ್ಲಿ ಆಗುತ್ತದೆಯೋ ದೇವರೇ ಬಲ್ಲ ಎಂದು ನನಗನ್ನಿಸುತ್ತದೆ.

5-30 p.m.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಇವರ 20 ಅಂಶ ಕಾರ್ಯಕ್ರಮ ಇದ್ದರೂ ಕೂಡ ಇವರ ಅಂತ್ಯ ಏತಕ್ಕೆ ಆಯಿತು ?

ಶ್ರೀ ಮದನ ಗೋಪಾಲ್.—ಸ್ವಾಮಿ, ವೃತ್ತಿ ತೆರಿಗೆ ಬಗ್ಗೆ ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ವೃತ್ತಿ ಮಾಡುವಂಥ ಜನರಿಗೆ ಮಾತ್ರವಲ್ಲ ಶಾಸಕರಿಗೂ ಸಹ ವೃತ್ತಿ ತೆರಿಗೆಯನ್ನು ಹಾಕಿದ್ದಾರೆ ಇದು ನಿಜವಾಗಿಯೂ ಜನರ ಪ್ರತಿನಿಧಿಗಳಾದ ಶಾಸಕರಿಗೆ, ಸದನಕ್ಕೆ ಹಾಗೂ ಪ್ರಜಾಪ್ರಭುತ್ವಕ್ಕೆ ಅವಮಾನ ಮಾಡಿದಂತೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ನಾವು ಜನರ ಪ್ರತಿನಿಧಿಗಳಾಗಿ ಜನರ ಕೂಗನ್ನು ಇಲ್ಲಿ ಚರ್ಚೆ ಮಾಡಿ, ಅವರಿಗೆ ಆಗತಕ್ಕಂಥ ಒಳ್ಳೆಯ ಕಾರ್ಯವನ್ನು ಮಾಡಲು ಬಂದಂಥ ಜನರ ಮೇಲೆ ವೃತ್ತಿ ತೆರಿಗೆ ಹಾಕುವುದು ಸರಿಯಲ್ಲ. ನಾವು ವೃತ್ತಿ ಮಾಡಲು ಬಂದಂಥ ಜನರಲ್ಲ ಸರ್ಕಾರದ ಬೊಕ್ಕಸದಲ್ಲಿ ಹಣ ಕಡಿಮೆ ಇದ್ದರೆ. ನಮ್ಮ ಪಗಾರದಲ್ಲಿ ಅರ್ಧ ಭಾಗ ಹಿಡಿದುಕೊಂಡು ರೈತರ ಏಳಿಗೆಗೆ ಉಪಯೋಗ ಮಾಡಲಿ. ವೃತ್ತಿ ತೆರಿಗೆಯನ್ನು ಶಾಸಕರ ಮೇಲೆ ಹಾಕಿರುವುದನ್ನು ತೆಗೆಯಬೇಕೆಂದು ಹೇಳುತ್ತೇನೆ. ಈ ಒಂದು ಮುಂಗಡ ಪತ್ರ ರೈತರಿಗೆ, ಕೆಳಮಟ್ಟದಲ್ಲಿರತಕ್ಕವರಿಗೆ, ಕಾರ್ಮಿಕರಿಗೆ ಹಾಗೂ ಹಿಂದುಳಿದ ಜನರಿಗೆ ಬರೀ ಕನ್ನಡಿಯಲ್ಲಿನ ಗಂಟು ತೋರಿಸಿದ್ದಾರೆ, ಇದು ಸರಾಸರಿ ಮೋಸದಾಗಿದೆಯೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ರಾಮಚಂದ್ರರಾವ್ (ಉಳ್ಳಾಲ್).—ಸಭಾಧ್ಯಕ್ಷರೇ, ನಮ್ಮ ಆರ್ಥಿಕ ಮಂತ್ರಿಗಳು ಈ ಆಯವ್ಯಯಪತ್ರವನ್ನು ಮಂಡನೆ ಮಾಡುವಾಗ ಈ ರೀತಿ ಹೇಳಿದ್ದಾರೆ.

"The budget must reflect the aspirations of the people and the responsibility of the Government to them. The Government is facing a challenging task."

ಸರ್ಕಾರ ದೊಡ್ಡ ಸವಾಲು ಎದುರಿಸುತ್ತಿದೆಯೆಂದು ಹೇಳಿದ್ದಾರೆ. ಆದರೆ, ಇದನ್ನೆಲ್ಲಾ ಓದಿದಾಗ ಮಾತ್ರ ಸವಾಲನ್ನು ನಿಜವಾಗಿಯೂ ಅವರು ಎದುರಿಸಲಿಲ್ಲವೆಂದು ಕಾಣುತ್ತದೆ. ಸವಾಲೇನೋ ದೊಡ್ಡದಾಗಿದೆ ; ಈ ಸವಾಲನ್ನು ಎದುರಿಸಬೇಕಾದರೆ, ಅದಕ್ಕೆ ಬೇಕಾದಂಥ ಧೈರ್ಯ ಇನ್ನು ಸಹ ಬರಲಿಲ್ಲ. ರಾಜ್ಯಪಾಲರ ಭಾಷಣದಲ್ಲಿ "ಆಲೋಚನಾ ಬ್ಯಾಂಕ್" ಮಾಡುತ್ತೇವೆಂದು ಹೇಳಿದ್ದಾರೆ ; ಅದರ ಸಹಾಯವೂ ಕೂಡ ಸಿಕ್ಕಲಿಲ್ಲನೆಂದು ಕಾಣುತ್ತದೆ. ಒಟ್ಟಿನಲ್ಲಿ ಈ ಆಯವ್ಯಯಪತ್ರವನ್ನು ನೋಡಿದಾಗ ಇದು ಸ್ಟೇಟಸಕೋ ಬಡ್ಜೆಟ್ಟಾಗಿದೆ. ಎಕಾನಾಮಿಕ್ ಸಿಚುಯೇಷನ್ 1982-83, ಕೇಂದ್ರಸರ್ಕಾರದ ಬಡ್ಜೆಟ್ ಹಾಗೂ ರಾಜ್ಯಸರ್ಕಾರದ ಬಡ್ಜೆಟ್ ಒಟ್ಟು ಮೂರನ್ನು ನೋಡಿದರೆ ; ಇದು ಎಷ್ಟು ಸ್ಟೇಟಸ್‌ಕೋ ಆಗಿದೆ ಎನ್ನುವುದು ಕಾಣುತ್ತೆ. 1982-83ರ ಎಕಾನಾಮಿಕ್ ಸಿಚುಯೇಷನ್ ಬಗ್ಗೆ ಕೆಲವು ವಾಕ್ಯಗಳನ್ನು ಹೇಳುತ್ತೇನೆ.

"There is a severe set back in the Agriculture sector. The State income at current prices is anticipated to go marginally. The per-capita income at current prices is estimated to decline from Rs. 1458 to Rs. 1436 The price situation continues to be a source of anxiety and there is absolutely no room for complacency. The chronic unemployment in the State is estimated at 5.39 lakhs of which unemployment among youths is around 4.23 lakhs. The total agricultural production is antipated to decline considerably. The foodgrains production is anticipated to fall to 49.5 lakhs tonne in the current year as compared to 67.4 lakhs tonnes last year The current year witnessed a considerable setback in the production.

ಭಾರತ ಸರ್ಕಾರದ ಮೂರೂವರೆ ಸಾವಿರ ಕೋಟಿ ರೂಪಾಯಿ ಡಿಫಿಸಿಟ್, ಟ್ಯಾಕ್ಸಸ್ ಹಾಗೂ ಓವರ್ ಡ್ರಾಫ್ಟ್ ಇದನ್ನೆಲ್ಲಾ ತೆಗೆದುಕೊಂಡರೆ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಯಾವ ರೀತಿಯ ಕಾರ್ಯಕ್ರಮಗಳನ್ನು ಹಾಕಿದ್ದೇವೆ ಎನ್ನುವ ಸ್ಪಷ್ಟವಾದ ರೂಪ-ರೇಖೆಗಳು ಇಲ್ಲ. ಕೆಲವೊಂದು ಆಶಾಕಿರಣಗಳನ್ನು ಹೇಳಿದ್ದಾರೆ. ಲ್ಯಾಂಡ್ ಆರ್ಮಿ ಬಗ್ಗೆ ಹೇಳಿದ್ದಾರೆ; ಒಟ್ಟಿನಲ್ಲಿ ಸ್ಟೇಟಸ್‌ಕೋ ಮೇಂಟೆಯಿನ್ ಮಾಡುವುದಕ್ಕೆ 6 ತಿಂಗಳ ಖರ್ಚು ಮಾತ್ರ ಹೇಳಿದ್ದಾರೆ. ಮತ್ತೆ 6 ತಿಂಗಳಿಗೆ ಅವರಿಗೆ ಧೈರ್ಯಇಲ್ಲವೆಂದು ಕಾಣುತ್ತದೆ. ನಾವು ಸದನದಲ್ಲಿ ಮಾತನಾಡುತ್ತಾ ; ಮಾರ್ಗಗಳು ಆಗಬೇಕು; ಶಾಲೆಗಳು ಆಗಬೇಕು; ಹಲವಾರು ಕಾಮಗಾರಿಗಳು ಆಗಬೇಕೆಂದು ಹೇಳುತ್ತೇವೆ. ಮಾನ್ಯ ಹಣಕಾಸಿನ ಮಂತ್ರಿಯವರು 6 ತಿಂಗಳಿಗೆ ಮಾತ್ರ ಹಣ ಕೇಳಿರುವುದನ್ನು ನೋಡಿದಾಗ; ಅವರಿಗೂ ಕೂಡ ಒಳಗೆ ಶಂಕೆ ಇದೆಯೆಂದು ಕಾಣುತ್ತದೆ. ಈ ದೃಷ್ಟಿಯಿಂದ ಒಂದೆರಡು ಸೂಚನೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ ಆದಾಯದ ಬಾಬ್ತು ಹೆಚ್ಚು ಮಾಡುವುದು ಹೇಗೆ? ಈ ವಿಚಾರದಲ್ಲಿ ಕೇಂದ್ರ ಸರ್ಕಾರದೊಡನೆ ಆಲೋಚನೆ ಮಾಡಬೇಕು. ಕೇಂದ್ರಸರ್ಕಾರ ಕೂಡ ಇತ್ತೀಚೆಗೆ ಒಂದು ಆಯೋಗವನ್ನು ನೇಮಕ ಮಾಡಿದೆ ಈ ಮಧ್ಯೆ ನಮ್ಮ ಸರ್ಕಾರವೂ ಕೂಡ ತನ್ನ ಆದಾಯವನ್ನು ಹೆಚ್ಚು ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ರಾಜ್ಯ ಸರ್ಕಾರದವರು ನಡೆಸುವಂಥ ಸುಮಾರು 61 ಕೈಗಾರಿಕೆಗಳು ಹಾಗೂ ವ್ಯಾಪಾರ ಸಂಸ್ಥೆಗಳಲ್ಲಿ ಇವತ್ತು ಒಟ್ಟು 210 ಕೋಟಿ ರೂಪಾಯಿ ನಷ್ಟವಾಗುತ್ತಿದೆ. ಇದು ಅಕೌಂಟಿಂಗ್ ಕ್ರಮ; ಸರ್ಕಾರಿ ಕ್ರಮ ಅಲ್ಲ ಈ ವಿಚಾರದಲ್ಲಿ ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಕೊಟ್ಟಂತ 15-16-17 ನೇ ವರದಿಯನ್ನು ಹಾಹು ಹೋದರೆ ತುಂಬ ಬೇಸರವಾಗುತ್ತದೆ. ಸರ್ಕಾರದಲ್ಲಿ ಆಲೋಚನೆ ಉಂಟೋ ಇಲ್ಲವೋ ಎನ್ನುವ ಅನುಮಾನ ಬರುತ್ತದೆ. ಎಷ್ಟು ಸಂಸ್ಥೆಗಳು ಸರ್ಕಾರದಿಂದ ಹಣ ತೆಗೆದುಕೊಳ್ಳುತ್ತವೆ ! ಲೆಕ್ಕ ಕೊಡುವುದಿಲ್ಲ! ಬಡ್ಡಿ ಕೊಡುವುದಿಲ್ಲ. ಜನಗಳಿಗೆ ಸಾಲ ಕೊಡುವುದಿಲ್ಲ. ಈ 210 ಕೋಟಿ ರೂಪಾಯಿಗಳನ್ನು ಭರ್ತಿ ಮಾಡಿದರೆ; ನಮಗೆ 400-500 ಕೋಟಿ ರೂಪಾಯಿ ಸಿಕ್ಕಿದಹಾಗೆ ಆಯಿತು. ಇದರಿಂದ ನಮ್ಮ ಆಸೆಗಳಾದ ಮಾರ್ಗಗಳನ್ನು! ದೀಪಗಳನ್ನು ಇನ್ನಿತರೆ ಕಾಮಗಾರಿಗಳನ್ನು ಮುಗಿಸುವುದಕ್ಕೆ ಸಾಧ್ಯವಾಗುತ್ತದೆ. 61 ಕೈಗಾರಿಕೆಗಳ ಪೈಕಿ ಕೆಲವನ್ನು ಮುಚ್ಚಿ ಲಾಭದಾಯಕವಾಗಿ ನಡೆಸುವುದಕ್ಕೆ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಈ ವಿಚಾರದಲ್ಲಿ ಸರ್ಕಾರ ಧೈರ್ಯ ಮಾಡಬೇಕು! ಆಲೋಚನಾ ಬ್ಯಾಂಕ್ ಕೂಡ ಈ

ದಿಕ್ಕಿನಲ್ಲಿ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಇನ್ನೊಂದು ಬಹಳ ಮುಖ್ಯವಾದ ವಿಚಾರ ಅಂದರೆ ಇವೊತ್ತು ನಮ್ಮಲ್ಲಿ ಕೃಷಿ ಉತ್ಪನ್ನ ಬಹಳ ಕಡಿಮೆಯಾಗುತ್ತಿದೆ. ಅಗ್ರಿಕಲ್ಚರಲ್ ಪ್ರೊಡಕ್ಷನ್ ನಮ್ಮ ಇಡೀ ರಾಜ್ಯದ ಆರ್ಥಿಕ ವ್ಯವಸ್ಥೆಗೆ ಹೊಂದಿಕೊಂಡಿರುತ್ತದೆ. ಕಳೆದ 30 ವರ್ಷದಿಂದಲೂ ನಮ್ಮ ರೈತರು ಬಾಯಿಬಿಟ್ಟಿರಲಿಲ್ಲ. ಇದುವರೆಗೂ ತಮ್ಮ ಓಟುಗಳನ್ನು ಕೊಟ್ಟುಕೊಂಡು ಬಂದು 30 ವರ್ಷಗಳು ಕಳೆದ ನಂತರ ಬೀದಿಗಿಳಿದಿದ್ದಾರೆ. ನಮ್ಮ ರಾಜ್ಯದಲ್ಲಿ ರೈತ ಕಳೆದ ಎರಡು ಮೂರು ವರ್ಷಗಳಿಂದ ಹೋರಾಟ ಮಾಡಿದರೂ ಆತ ಬೆಳೆದಂತ ಬೆಳೆಗೆ ನ್ಯಾಯವಾದ ಬೆಲೆ ಸಿಕ್ಕುತ್ತಿಲ್ಲ. ಆದು ಆತ ಕೊಂಡು ಕೊಳ್ಳುವ ವಸ್ತುಗಳ ಬೆಲೆ ಜಾಸ್ತಿಯಾಗಿದೆ. ಇವೊತ್ತು ಆತ ಹೊಸ ಬೆಳೆಯನ್ನು ಬೆಳೆಯಲಿಕ್ಕೆ ಸಾಧ್ಯವಿಲ್ಲ. ಅಂತಹ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಕೃಷಿ ಉತ್ಪನ್ನ ಕಡಿಮೆಯಾಗಿದೆ ಎನ್ನುವುದು ಸ್ಪಷ್ಟವಾಗಿದೆ. ಅದಿದಕ್ಕಾಗಿ ಜನ ಹೋರಾಟ ಮಾಡಿ ಸರ್ಕಾರವನ್ನು ಬದಲಾವಣೆ ಮಾಡಿದ್ದಾರೆ. ಇವೊತ್ತು ಮಾನ್ಯ ರಾಮಕೃಷ್ಣ ಹೆಗಡೆಯವರು ಧೈರ್ಯದಿಂದ ಮುಂದೆ ಬಂದು ರೈತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ರೈತರಿಗೆ ಒಂದು ನೂರು ಕೋಟಿ ರೂಪಾಯಿ ಕೊಡಲಿಕ್ಕೆ ತಯಾರಿದ್ದೇನೆಂದು ಹೇಳಬೇಕು. ಈಗ 32 ಕೋಟಿ ರೂಪಾಯಿ ಹೇಳಿದ್ದಾರೆ ಆದು ಸಹ ಸರಿಯಾದ ಲೆಕ್ಕ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಅದು ನಾಳೆ ಜೂನ್ ತಿಂಗಳಲ್ಲಿ ಕೊಟ್ಟರೆ ಸರಿ, ಇಲ್ಲದೇ ಇದ್ದರೆ ಆ ಲೆಕ್ಕ ಸರಿ ಬರುವುದಿಲ್ಲ. ನಾನು ಕೋ ಆಪರೇಟೀವ್ ರೂಲ್ಸ್ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಹೊಸ ಸರ್ಕಾರ ಬಂದಿರುವುದರಿಂದ ರೈತರಿಗೆ ಅನುಕೂಲ ಮಾಡಬೇಕಾಗಿದೆ. ನಾವು ಪತ್ರಿಕೆಗಳನ್ನು ಓದುವಾಗ ನೋಡಿದರೆ ಸಾಕಷ್ಟು ನಷ್ಟವಾಗಿದೆ ಎನ್ನುವುದನ್ನು ಕಂಡುಬಂದರೂ, ನಾವು ನಿಮಗೆ ಇನ್ನೂ ಒಂದು ನೂರು ಕೋಟಿ ರೂಪಾಯಿ ಕೊಡುತ್ತೇವೆ ನೀವು ಹೆಚ್ಚು ಹೆಚ್ಚು ಉತ್ಪತ್ತಿ ಮಾಡಬೇಕೆಂದು ರೈತರಿಗೆ ಹೇಳುವಂತಾಯ್ತು ಆಗಬೇಕು. ಇನ್ನು ಮೂರು ವರ್ಷ ನಿಮ್ಮಿಂದ ಹಣ ತೆಗೆದುಕೊಳ್ಳುವುದಿಲ್ಲ ಹೆಚ್ಚು ಉತ್ಪಾದನೆ ಮಾಡಿ ಎಂದು ಹೇಳಬೇಕು. ನಿಮಗೆ ಸಾಲವನ್ನು ವಜಾ ಮಾಡಲಿಕ್ಕೆ ಹಕ್ಕು ಇಲ್ಲದೇ ಇರಬಹುದು, ಇಂತಿಷ್ಟು ವಾದ (moratorium) ಮಾಡಲಿಕ್ಕೆ ಅವಕಾಶ ಇದೆ. ರೈತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ, ಅವರಿಂದ ಹೆಚ್ಚು ಕೃಷಿ ಅಭಿವೃದ್ಧಿಯಾದರೆ ನಿರುದ್ಯೋಗ ಸುಲಭವಾಗಿ ಬಗೆಹರಿಸಲಿಕ್ಕೆ ಸಾಧ್ಯವೆಂದು ಹೇಳುತ್ತೇನೆ. ಇನ್ನು ಅಲ್ಲಲ್ಲಿ ಆಶಾಕಿರಣವನ್ನು ಕಾಣುತ್ತಿದ್ದೇವೆ. ಲ್ಯಾಂಡ್ ಆರ್ಮಿ ಬಗ್ಗೆ ಹೇಳಬೇಕೆಂದರೆ, ನಿಜವಾಗಿ ಇದಕ್ಕೆ ಹೆಚ್ಚು ಹಣವನ್ನು ಒದಗಿಸಿ, ಸಾಕಷ್ಟು ಶ್ರಮ ಹಾಕಿದರೆ ಹೆಚ್ಚು ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆಗ ಮಾತ್ರ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಸಾಧ್ಯವಾದೀತು. ಹಿಂದಿನ ಸರ್ಕಾರದ ಒಂದೊಂದು ಐಟಂ ನೋಡಿದರೆ, ಒಂದೊಂದು ಡಿಪಾರ್ಟ್‌ಮೆಂಟ್‌ನಲ್ಲೂ ಎಷ್ಟೋ ಸ್ಥಾನಗಳನ್ನು ಖಾಲಿ ಇಟ್ಟಿರುವುದು ಕಂಡುಬರುತ್ತದೆ. ಏಕಾನಮಿಯನ್ನು ಆ ರೀತಿ ನೋಡಬಾರದು. ಅದು ಆಫೀಸರ್ ಹುದ್ದೆ ಇರಲಿ, ಟೈಪಿಸ್ಟ್ ಹುದ್ದೆ ಇರಲಿ, ಗುಮಾಸ್ತೆ ಹುದ್ದೆ ಇರಲಿ, ಟೆಕ್ನಿಷಿಯನ್ ಹುದ್ದೆ ಇರಲಿ, ಅವುಗಳನ್ನು ಭರ್ತಿ ಮಾಡಬೇಕಾಗುತ್ತದೆ. ಇದರ ಬಗ್ಗೆ ಆಲೋಚನಾ ಬ್ಯಾಂಕ್ ಯೋಜನೆ ಏನಿದೆ ಅದರಲ್ಲಿ ಪರಿಶೀಲನೆ ಮಾಡಿ ಖಾಲಿ ಇರತಕ್ಕ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಿದರೆ ಕೆಲಸ ಸುಗಮವಾಗಿ ನಡೆಯುತ್ತದೆ. ಆದ್ದರಿಂದ, ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಖಾಲಿ ಹುದ್ದೆಗಳಿವೆ ಅವೆಲ್ಲವನ್ನೂ ಭರ್ತಿ ಮಾಡಬೇಕು. ಕರ್ನಾಟಕದ ಆರ್ಥಿಕ ಪರಿಸ್ಥಿತಿ ಬಗ್ಗೆ ಹಿಂದೆ ವಿಶ್ವೇಶ್ವರಯ್ಯನವರು ಏನು ಮಾಡಿದ್ದರೂ ಅಲ್ಲಿಂದ ನೀವು ವಿಚಾರ ಮಾಡಬೇಕು. ಹಿಂದೆ ನಾವು ಬೇರೆಯವರಿಗೆ ವಿದ್ಯುಚ್ಛಕ್ತಿ ಕೊಡುತ್ತಿದ್ದೆವು. ಈಗ ನಾವು ಬೇರೆ ಕಡೆಯಿಂದ ವಿದ್ಯುಚ್ಛಕ್ತಿ ತರತಕ್ಕ ಪರಿಸ್ಥಿತಿ ಬಂದಿದೆ. ಇದನ್ನೆಲ್ಲಾ ಸರಿಮಾಡುವುದು ಹೇಗೆ ? ಅದರ ಬಗ್ಗೆ ಯೋಚನೆ ಮಾಡಬೇಕು. ಜೂನ್ ಜುಲೈ ತಿಂಗಳಿಗೆ ಮಳೆ ಬರಬಹುದು. ಅದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು, ಕೆಲವು ಹೆಜ್ಜೆಗಳನ್ನು ಮುಂದೆ ಇಡಬೇಕು. ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡಲಿಕ್ಕೆ ಒಂದು ವರ್ಷ ಅಲ್ಲ, ಎರಡು ವರ್ಷ ತೆಗೆದುಕೊಳ್ಳಿ. ನಮ್ಮ ರಾಷ್ಟ್ರದಲ್ಲಿ ಪಂಚವಾರ್ಷಿಕ ಯೋಜನೆ ಎಂದರೆ ಐದು ವರ್ಷಗಳ ಅವಧಿ ಇರುತ್ತದೆ. ಆ ರೀತಿ ಒಂದು ಪರ್‌ಫೆಕ್ಟ್ ಆಗಿ ನಮ್ಮ ಆರ್ಥಿಕ ವ್ಯವಸ್ಥೆಯನ್ನು ಬೆಳೆಸಲಿಕ್ಕೆ ಪ್ರಯತ್ನ ಮಾಡಬೇಕೆಂದು ತಿಳಿಸಿ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಸಿ. ಗಂಗಾಧರಪ್ಪ (ತಿಪಟೂರು).— ಸನ್ಮಾನ್ಯ ಸಭಾಧ್ಯಕ್ಷರೇ, 1983-84ರ ಆಯವ್ಯಯ ಪತ್ರದಲ್ಲಿ ನಮ್ಮ ರಾಜ್ಯದಲ್ಲಿರತಕ್ಕ 16 ಬರಗಾಲಪೀಡಿತ ಜಿಲ್ಲೆಗಳೇನಿವೆ ಆ ಜಿಲ್ಲೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿಲ್ಲ. ಎಲ್ಲಿ ನೀರಾವರಿಯಾಗಿದೆ ಆ ಜಾಗಗಳಿಗೆ ಹೆಚ್ಚಿನ ಹಣ ಖರ್ಚು ಮಾಡತಕ್ಕ ವ್ಯವಸ್ಥೆಯಾಗಿಲ್ಲ (too many cooks spoil the broth) ಅಂದ ಹಾಗೆ ಆಗಿದೆ. ನಮ್ಮ ದೇಶದಲ್ಲಿ ಹೆಚ್ಚು ಜನರು ವ್ಯವಸಾಯ ಮಾಡತಕ್ಕವರು ಏನಿದ್ದಾರೆ ಅವರು ಹೋಲ್ಡಿಂಗ್ ಸಣ್ಣದಾಗಿ ಆಗಿ ವ್ಯವಸಾಯ ಅಭಿವೃದ್ಧಿ ಹಿಂದುಳಿದಿದೆ. ವ್ಯವಸಾಯ ಮಳೆಯ ಮೇಲೆ ಅವಲಂಬಿಸಿರುವುದರಿಂದ, ಇಸ್ಪೀಟ್ ಆಟ ಆದ ಹಾಗೆ ಆಗಿದೆ

ನೂರಕ್ಕೆ ಎಂಭತ್ತು ಜನರ ಆರ್ಥಿಕ ಸ್ಥಿತಿ ಚಿಂತಾಜನಕವಾಗಿದೆ. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಕ್ಷಾಮಪರಿಹಾರವಾಗಬೇಕಾದರೆ ಅದಕ್ಕೆ ತಕ್ಕ ಕಾರ್ಯಕ್ರಮಗಳು ಆಗಬೇಕು. ಇವೊತ್ತು ಕಾಡಿನ ನಾಶದಿಂದಾಗಿ ಸರಾಸರಿ ಮಳೆ ಕಡಿಮೆಯಾಗಿದೆ, ಮಳೆ ನಮಗೆ ಹೆಚ್ಚು ಬರಬೇಕೆಂದರೆ ಕಾಡನ್ನು ಉಜ್ವಲವಾಗಿ ಬೆಳೆಸಬೇಕು. ಇವೊತ್ತು ನಾಲ್ಕಾರು ದೊಡ್ಡ ಪಟ್ಟಣಗಳ ಅಭಿವೃದ್ಧಿಗೋಸ್ಕರ ಚಿಂತನೆ ನಡೆಯುತ್ತಿದೆಯೇ ಹೊರತು ರಾಷ್ಟ್ರದ ಸರ್ವತೋಮುಖ ಏಳಿಗೆಗೋಸ್ಕರ, ಗ್ರಾಮಾಂತರ ಅಭಿವೃದ್ಧಿಗೋಸ್ಕರ ಕಾರ್ಯಕ್ರಮ ಬಹಳ ಕಡಿಮೆಯಾಗಿದೆ. ಒಬ್ಬ ಮನುಷ್ಯನ ಎಲ್ಲಾ ಅಂಗಾಂಗಗಳು ವ್ಯವಸ್ಥಿತವಾಗಿದ್ದರೆ ಯಾವ ರೀತಿ ಸುಂದರಾಂಗನಾಗುತ್ತಾನೆಯೋ ಅದೇ ರೀತಿ ರಾಷ್ಟ್ರ ಸಂಪದ್ಭರಿತವಾಗಿ ಕಾಣಬೇಕಾದರೆ, ಆರ್ಥಿಕ ವ್ಯವಸ್ಥೆಯಲ್ಲಿ ಅಭಿವೃದ್ಧಿಯಾಗಬೇಕಾದರೆ ಸರ್ಕಾರ ಎಲ್ಲಾ ಕಡೆ ಗಮನ ಕೊಡಬೇಕು ಇನ್ನು ಸಾಯಿಲ್ ಕನ್ಸರ್‌ವೇಷನ್‌ನಲ್ಲಿ ಕೋಕೊನೆಟ್ ಪ್ರದೇಶಗಳಲ್ಲಿ ಬಂಡನ್ನು ಹಾಕುವುದು, ನೀರು ನಿಂತುಕೊಳ್ಳುವ ಬಾವಿಗಳನ್ನು ಮಾಡಿದರೆ ವ್ಯವಸಾಯ ಅಭಿವೃದ್ಧಿಯಾಗುತ್ತದೆ ಮರಗಳನ್ನು ಬೆಳೆಸಲಿಕ್ಕೆ ಅನುಕೂಲವಾಗುತ್ತದೆ ಎನ್ನುವ ವಿಚಾರವನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕು ಸಾಯಿಲ್ ಕನ್ಸರ್‌ವೇಷನ್ ಡಿಸ್ಟ್ರಿಕ್ಟ್ ಆಫೀಸರ್ ಕೇಳಿದರೆ ನಮಗೆ 11 ಲಕ್ಷ ರೂಪಾಯಿ ಎಸ್ಟಾಬ್ಲಿಷ್‌ಮೆಂಟ್ ಖರ್ಚಿದೆ ಎಂದು ಹೇಳುತ್ತಾರೆ. ಕೇವಲ ಒಂದೂವರೆ ಲಕ್ಷ ರೂಪಾಯಿ ಖರ್ಚು ಮಾಡತಕ್ಕ ವ್ಯವಸ್ಥೆ ಮಾಡಿದ್ದಾರೆ. ಪ್ರಾಮಿನ್‌ನಲ್ಲಿ ದುಡ್ಡು ಕೊಟ್ಟರೆ ಮಳೆ ಬೀಳುವವರೆಗೆ ಗುದ್ದಲಿ ಹಾಕುವುದಿಲ್ಲ ಮಳೆ ಬಿದ್ದ ಮೇಲೆ ಕೆಲಸ ಮಾಡುವ ಹಾಗೆ ಇಲ್ಲ. ಈ ರೀತಿ mal coordination ಇದೆ. ಯಾವ ಡಿಪಾರ್ಟ್‌ಮೆಂಟ್‌ನಲ್ಲಿ ಹಣ ಖರ್ಚು ಮಾಡುವುದಕ್ಕೆ ವ್ಯವಸ್ಥೆ ಇದೆ ಅಲ್ಲಿ ಖರ್ಚುಮಾಡುವುದಕ್ಕೆ ಅವಕಾಶ ಇಲ್ಲ. ಯಾವ ಡಿಪಾರ್ಟ್‌ಮೆಂಟ್‌ನಲ್ಲಿ ಖರ್ಚುಮಾಡುವುದಕ್ಕೆ ದುಡ್ಡು ಇದೆ ಅವರಿಗೆ ಕೆಲಸಮಾಡುವುದಕ್ಕೆ ಅವಕಾಶ ಇಲ್ಲ. ಈ ರೀತಿಯ ವ್ಯವಸ್ಥೆಯಿಂದಾಗಿ ನಮ್ಮ ಎಲ್ಲ ಪ್ಲಾನ್‌ಗಳೂ ಯೋಜನೆಗಳೂ ಹಿಂದೆ ಬೀಳುತ್ತಿವೆ. ಸರ್ಕಾರಿ ಆಫೀಸ್‌ಗಳಲ್ಲಿರತಕ್ಕ ಕುರ್ಚಿ, ಮೇಜು, ಜೀಪು ಇದನ್ನೆಲ್ಲಾ ನೋಡಿದರೆ ಇದಕ್ಕೆ ನಾವು ಹೆಚ್ಚಿನ ಆದ್ಯತೆಯನ್ನು ಕೊಡುತ್ತಿರುವುದರಿಂದ ನಮ್ಮ ಆರ್ಥಿಕ ಪರಿಸ್ಥಿತಿ ಇಂದು ಕುಂಠಿತವಾಗುತ್ತಿದೆ ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ತೆಂಗು ಬಹಳ ಪ್ರಮುಖವಾದ ಬೆಳೆ. ಇವತ್ತು ತೆಂಗಿನ ಬೆಳೆ ಕಡಿಮೆಯಾಗಿದ್ದು ಅದರ ಬಳಕೆ ಮಾತ್ರ ಜಾಸ್ತಿಯಾಗುತ್ತಿದೆ. ಇದರಿಂದಾಗಿ ತೆಂಗಿನಕಾಯಿಯ ಬೆಲೆ ಗಗನಕ್ಕೆ ಹೋಗಿದೆ ಬೇರೆ ಬೇರೆ ಪದಾರ್ಥಗಳ ಬೆಲೆಗೆ ಈ ತೆಂಗನ್ನು ಹೋಲಿಸಿದರೆ ಸ್ವಾತಂತ್ರ್ಯ ಪೂರ್ವದಲ್ಲಿ 1 ರೂ ; 1ರೂ 4ಅಣೆ ಇದ್ದಂಥ ಅಕ್ಕಿ ಇವತ್ತು 1 ಕೆ. ಜಿ. ಗೆ 3 ರೂ ಆಗಿದೆ. ಕೊಬ್ಬರಿ 1 ಕೆ. ಜಿ ಗೆ 1-50ರೂ. ಇದ್ದುದು ಇವತ್ತು 15 ರೂ. ಆಗಿದೆ ಇದು ಏತಕ್ಕೆ ಇಷ್ಟು ಬೆಲೆ ಆಯಿತು ಎಂದರೆ ಈ ಬೆಳೆಗೆ ಎಷ್ಟು ಗಮನವನ್ನು ಕೊಡಬೇಕಾಗಿತ್ತೋ ಅಷ್ಟು ಗಮನವನ್ನು ನಾವು ಕೊಡುತ್ತಿಲ್ಲದಿರುವುದರಿಂದ. ಇವತ್ತು ನಮ್ಮ ದೇಶದಲ್ಲಿ ಎಷ್ಟು ತೆಂಗಿನ ಕಾಯಿಯ ಅವಶ್ಯಕತೆ ಇದೆ ಅದರಲ್ಲಿ ಶೇಕಡ 70 ರಷ್ಟನ್ನು ಬೆಳೆದು ಉಳಿದ 30 ಪರ್ಸೆಂಟ್‌ನ್ನು ಹೊರಗಿನಿಂದ ಆಮದುಮಾಡಿಕೊಳ್ಳುತ್ತಿದ್ದೇವೆ. ಒಂದು ಕಡೆ ನಾವು ಹೆಚ್ಚು ಹೆಚ್ಚು ತೆಂಗನ್ನು ಬೆಳೆದರೂ ಕೂಡ ಅದಕ್ಕನುಗುಣವಾಗಿ ಇನ್ನೊಂದು ಕಡೆ ಜನಸಂಖ್ಯೆಯೂ ಬೆಳೆಯುತ್ತಿದೆ. ಇದರಿಂದಾಗಿ ತೆಂಗಿನಕಾಯಿಗೆ ಬೇಡಿಕೆಯೂ ಜಾಸ್ತಿಯಾಗುತ್ತಿದೆ. ಹಿಂದಿನಿಂದ ಏನು 30 ಪರ್ಸೆಂಟ್ ಖೋತಾ ಏನಿದೆ ಅದು ಹಾಗೆಯೇ ಮುಂದುವರಿದುಕೊಂಡು ಬರುತ್ತಿದೆ. ಈ ತೆಂಗಿನ ಬೆಳೆಗೆ ಹೆಚ್ಚಿನ ನೀರಾವರಿ ಅಗತ್ಯವಿಲ್ಲ. ಸಾಮಾನ್ಯವಾಗಿ ಇದನ್ನು ಸೋಮಾರಿಯ ಸುಲಭವಾದ ವ್ಯವಸಾಯ ಎಂದು ಕರೆಯುತ್ತಾರೆ. ಏಕೆಂದರೆ ಭತ್ತ, ರಾಗಿ, ಕಡಲೇಕಾಯಿ ಮುಂತಾದ ಬೆಳೆಗಳನ್ನು ಯಾವ ಯಾವ ಸಂಧರ್ಭದಲ್ಲಿ ಇಡಬೇಕೋ ಇಡಲೇಬೇಕು. ಇಲ್ಲದಿದ್ದರೆ ಬಿತ್ತನೆಯಕಾಲ ಮುಗಿದು ಹೋಗುತ್ತದೆ. ಅದೇ ರೀತಿ ಸಮಯಕ್ಕೆ ಸರಿಯಾಗಿ ಕಳೆ ಕೀಳಿಸಬೇಕು ನೀರು ಹಾಯಿಸಬೇಕು. ಗೊಬ್ಬರ ಹಾಕಿಸಬೇಕು, ಕೊಯ್ಲು ಮಾಡಿಸಬೇಕು. ಆದರೆ ಈ ತೆಂಗಿನ ಬೇಸಾಯ ಆ ರೀತಿ ಅಲ್ಲ. ಅಕಸ್ಮಾತ್ ಒಂದೊಂದು ಸಾರಿ ವ್ಯವಸಾಯವನ್ನು ಮಾಡದಿದ್ದರೂ ತಡೆದುಕೊಳ್ಳುತ್ತದೆ. ಮಳೆ ಬರದಿದ್ದರೂ ತಡೆದುಕೊಳ್ಳುತ್ತದೆ ತೆಂಗಿನಕಾಯಿ ಮರದ ಮೇಲೆ ಇದ್ದರೆ ಅಲ್ಲೇ ಇರುತ್ತದೆ, ಮರದಿಂದ ಕೆಳಗೆ ಬಿದ್ದು ಯಾರು ತೆಗೆದುಕೊಂಡು ಹೋಗದಿದ್ದರೆ 3 ತಿಂಗಳಾದರೂ ಅಲ್ಲೇ ಬಿದ್ದಿರುತ್ತದೆ ಅದು ಕೆಟ್ಟು ಹೋಗವುದಿಲ್ಲ ಎಳನೀರನ್ನು ಹಾಗೆಯೇ ಮರದ ಮೇಲೆ ಬಿಟ್ಟರೆ ಕಾಯಿಯಾಗುತ್ತದೆ ಕಾಯನ್ನು ಕಿತ್ತು ಅಟ್ಟಕ್ಕೆ ಹಾಕಿದರೆ ಕೊಬ್ಬರಿಯಾಗುತ್ತದೆ. ಈ ವರ್ಷ ಸುಲಿಯುವ ಕೊಬ್ಬರಿಯನ್ನು ಮುಂದಿನ ವರ್ಷ ಸುಲಿದರೂ ಅದು ಕೆಟ್ಟು ಹೋಗುವುದಿಲ್ಲ. ಆದ್ದರಿಂದ ಈ ಬೆಳೆಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ನಮ್ಮ ತಾಲ್ಲೂಕಿನಲ್ಲಿ ಈಗ್ಗೆ 20 ವರ್ಷಕ್ಕೆ ಮುಂಚೆ 40-50 ಬಾವಿಗಳು ಇದ್ದುದು ಇವತ್ತು 1500 ಬಾವಿಗಳಾಗಿವೆ. ಮೊದಲು ಎಳನೀರನ್ನು ಕಿತ್ತರೆ ಮಿಳ್ಳೆಯಲ್ಲಿರುವಷ್ಟು ನೀರು ಇರುತ್ತಿತ್ತು. ಆದರೆ ಈಗ ಅದಕ್ಕೆ ನೀರಾವರಿ ಸೌಲಭ್ಯ ಜಾಸ್ತಿಯಾದ ಮೇಲೆ ಒಂದು ಚಂಬಿನಷ್ಟು ನೀರಿರುತ್ತದೆ. ಇದನ್ನು ತಾವು ನೋಡಿರಬಹುದು. ಹಿಂದೆ ತೆಂಗು ಎಷ್ಟು ಖರ್ಚಾಗುತ್ತಿತ್ತು ಇವತ್ತು ಅಷ್ಟು ಎಳನೀರು ಖರ್ಚಾಗುತ್ತಿದೆ. ಬೇರೆ ರಾಜ್ಯಗಳಲ್ಲಿ ಕೊಬ್ಬರಿಯಿಂದ 40 ಪರ್ಸೆಂಟ್ ಎಣ್ಣೆ

ಬಂಪರೆ ನಮ್ಮ ರಾಜ್ಯದ ಕೊಬ್ಬರಿಯಿಂದ 60 ಪರ್ಸೆಂಟ್ ಎಣ್ಣೆ ಬರುತ್ತದೆ. ನಮ್ಮ ಮೈಸೂರು ಜಿಲ್ಲೆಯಲ್ಲಿ ಬೆಳೆಯತಕ್ಕ ತೆಂಗಿನಲ್ಲಿ ಗ್ಲೂಕೋಸ್ ಕಂಟೆಂಟ್ಸ್ ಜಾಸ್ತಿ ಇದೆ ಅದೇ ರೀತಿ ರುಚಿ ಕೂಡ ಹೆಚ್ಚು ಇದೆ. ಕೇರಳದಲ್ಲಿ ತೆಂಗಿನ ಮರಗಳನ್ನು ಹೆಚ್ಚು ಹೆಚ್ಚು ಬೆಳೆಸುತ್ತಿದ್ದಾರೆ. ಅದೇ ರೀತಿ ನಮ್ಮ ರಾಜ ದಲ್ಲೂ ಕೂಡ ತೆಂಗಿನ ಮರಗಳನ್ನು ಬೆಳೆಯುವ ವ್ಯವಸ್ಥೆ ಮಾಡಬೇಕು ತೆಂಗಿನ ಮರಗಳನ್ನು ಎಲ್ಲಿ ಬೇಕಾದರೂ ಬೆಳೆಯ ಬಹುದು. ಇವತ್ತು ದಿನಂಗತ ವಿಶ್ವೇಶ್ವರಯ್ಯನವರನ್ನು ನಾವು ಜ್ಞಾಪಿಸಿಕೊಳ್ಳಬೇಕು. ಮಹಾತ್ಮಾ ಗಾಂಧಿ ಹೈಡ್ರೋ ಎಲೆಕ್ಟ್ರಿಕ್ ಪವರ್ ಸ್ಟೇಷನ್ ಅವರ ತಲೆಯಲ್ಲಿ ಬರಬೇಕಾದರೆ ಒಂದು ಕಾರಣ ಇದೆ. ಜನರು ಜೋಗ್ ಫಾಲ್ಸನ್ನು ನೋಡಿದಾಗ ಇದು ಎಷ್ಟು ರಮ್ಯವಾಗಿದೆ ಎಂದು ಹೇಳುತ್ತಿದ್ದರು. ಆದರೆ ಮಾನ್ಯ ವಿಶ್ವೇಶ್ವರಯ್ಯನವರು ಅಲ್ಲಿ ಹೋಗಿ ನೋಡಿದಾಗ ಇದು ಎಷ್ಟು ಭಾರೀ ಪ್ರಮಾಣದಲ್ಲಿ ವ್ಯರ್ಥವಾಗುತ್ತಿದೆ ಎಂದು ಅವರ ಮನಸ್ಸಿನಲ್ಲಿ ಬಂತು. ಇಂಥ ಪ್ರಕೃತಿದತ್ತ ಸಂಪತ್ತು ಅನಾವಶ್ಯಕವಾಗಿ ಈ ರೀತಿ ಹಾಳಾಗು ತ್ತಿದೆ, ಇದನ್ನು ಏನಾದರೂ ಮಾಡಿ ಸದುಪಯೋಗ ಮಾಡಿಕೊಳ್ಳಬೇಕೆಂದು ಮನಸ್ಸುಮಾಡಿದರು. ನಾನೂ ಒಬ್ಬ ವ್ಯವಸಾಯಗಾರ ನಾನು ಅಂಥ ಎತ್ತರ ಪ್ರದೇಶದಲ್ಲಿ ಬೋರ್‌ವೆಲ್‌ನ್ನು ತೆಗೆದು ನೀರಿನ ಉಪಯೋಗ ಮಾಡಿಕೊಂಡು ವ್ಯವಸಾಯವನ್ನು ಮಾಡುತ್ತಿರುವವನು ಆ ಭಾಗದಲ್ಲಿ ತೆಂಗಿನ ಮರಗಳು ಬಹಳ ಚೆನ್ನಾಗಿ ಬೆಳೆಯುತ್ತವೆ. ನೂರಾರು ಎಕರೆ ಜಮೀನು ಖಾಲಿ ಬಿದ್ದಿದೆ. ಆ ಪ್ರದೇಶವನ್ನು ನೋಡಿದಾಗ ಅಲ್ಲಿ ತೆಂಗಿನ ಸಸಿಗಳನ್ನು ತೆಗೆದುಕೊಂಡು ಹೋಗಿ ಇಟ್ಟುಬಿಡೋಣ ಎನ್ನುವ ಉತ್ಸಾಹ ನನಗೆ ಬರುತ್ತದೆ. ಇಂಥ ಕಾಂಕ್ರಿಟ್ ಜಂಗಲ್‌ನ್ನು ಮಾಡದೆ ಕೇವಲ ಸರ್ಕಾರೀ ಕಛೇರಿಗಳಿಗೆ ಜಾಗ ಇಲ್ಲವೆಂದು ಒಂದರ ಮೇಲೊಂದು ಕಟ್ಟಡಗಳನ್ನು ಕಟ್ಟುವ ಬದಲು ಕಾರ್ಖಾನೆಗಳಲ್ಲಿ ನಡೆಯುವಂತೆ ಒಂದೇ ಕಟ್ಟಡದಲ್ಲಿ 2-3 ಶಿಫ್ಟ್ ಮಾಡಿ ಆಫೀಸ್‌ಗಳನ್ನು ನಡೆಸಿದರೆ ಅಧಿಕಾರಿಗಳೂ, ನೌಕರರೂ ಬಂದು ಕೂತು ಕೆಲಸ ಮಾಡುತ್ತಾರೆ. ರಾಜ್ಯಕ್ಕೆ ಆದಾಯ ಬರತಕ್ಕ ಬಾಬನ್ನು ಬಿಟ್ಟು ಕೇವಲ ಹಣ ಖರ್ಚುಮಾಡುವ ಸಾಹಸ ಮಾಡುತ್ತಿದ್ದೇವೆ ಹಿಂದೆ ನಾವು ಮಿಡಲ್‌ಸ್ಕೂಲ್‌ಗೆ ಹೋಗುವಾಗ 3 ರೂ. ಬೆಲೆಬಾಳುವ ಒಂದು ಪೆನ್ ತೆಗೆದುಕೊಳ್ಳಬೇಕಾದರೆ 2 ಕೆ ಜಿ. ಕೊಬ್ಬರಿ ಕೊಡಬೇಕಾಗುತ್ತಿತ್ತು. ಆ ಪೆನ್ ಮನೆಗೆ ತರುವುದಕ್ಕೆ ಮೊದಲೇ ಲೀಕ್ ಆಗುತ್ತಿತ್ತು. ಆದರೆ ಇವತ್ತು 1 ಕೆ ಜಿ. ಕೊಬ್ಬರಿ 15ರೂ. ಆಗಿದೆ. ಆದರೆ ಅದೇ ಪೆನ್‌ನ ಬೆಲೆ 50 ಪೈಸೆ, 1ರೂ. ಆಗಿದೆ. ಇದು ಏತಕ್ಕೆ ಆಯಿತೆಂದರೆ ನಾವು ಕೈಗಾರಿಕಾ ರಂಗದಲ್ಲಿ ಪ್ರಗತಿಯನ್ನು ಸಾಧಿಸಿದ್ದರಿಂದ. ಅದೇ ರೀತಿ ವ್ಯವಸಾಯ ರಂಗದಲ್ಲೂ ಆಗಬೇಕು. In America, they were facing crisis. They were producing only 78% of their requirements. But now they are able to produce 150% of their annual requirements of food grains ಅವರು 78 ಪರ್ಸೆಂಟ್ ಇದ್ದುದರಲ್ಲಿ 8 ಪರ್ಸೆಂಟ್ ಬಿಟ್ಟು 70 ಪರ್ಸೆಂಟ್‌ನ್ನು ಬೇರೆ ಭಾಗಕ್ಕೆ ರಿಟ್ರೆಂಚ್ ಮಾಡಿ ಅವನಿಗೆ ಬೇಕಾದಂಥ ಎಲ್ಲಾ ಸೌಲಭ್ಯಗಳನ್ನೂ ಕೊಡುತ್ತಿದ್ದರು ಅವನು ಸೈನ್‌ಮಾಡಿದರೆ ಸರ್ಕಾರ ದವರು ಪೇಮೆಂಟ್ ಮಾಡುತ್ತಿದ್ದರು. ಇವತ್ತು ರೈತನಿಗೆ ಬಾವಿ ತೆಗೆಸಬೇಕೆಂದು ಮನಸ್ಸು ಬರುವುದು ಕಷ್ಟ, ಒಂದು ವೇಳೆ ಅವನು ತೆಗೆಸುವುದಕ್ಕೆ ಮನಸ್ಸು ಮಾಡಿದರೆ ಸಾಲ ಸಿಕ್ಕುವುದಿಲ್ಲ

ಉಪಾಧ್ಯಕ್ಷರು.–ಸ್ವಾಮಿ ತಾವು ಬೇಗ ಮುಗಿಸಬೇಕು. ಇನ್ನೂ ಬಹಳ ಜನ ಸದಸ್ಯರು ಮಾತನಾಡು– ವವರಿದ್ದಾರೆ.

ಶ್ರೀ ಎಸ್ ಪಿ. ಗಂಗಾಧರಪ್ಪ.—ನಾನು ರಾಜಕೀಯವನ್ನು ಮಾತನಾಡುತ್ತಿಲ್ಲ. ನಮ್ಮ ಭಾಗಕ್ಕೆ ಸರ್ಕಾರದವರು ಏನೇನು ಸೌಲಭ್ಯಗಳನ್ನು ಕೊಡದಿರುವುದರಿಂದ ನಾನು ಮಾತನಾಡಬೇಕಾಗಿದೆ. ಆದ್ದರಿಂದ ತಾವು ಅವಕಾಶವನ್ನು ಕೊಡಲೇಬೇಕು. ಯಾವ ರೈತ 100–150 ಎಕರೆ ಜಮೀನಿನಲ್ಲಿ ಬೇಸಾಯ ಮಾಡು ತ್ತಾನೆ ಅವನಿಗೆ ಸರ್ಕಾರದಿಂದ ಎಲ್ಲ ಸೌಲಭ್ಯಗಳನ್ನೂ ಅವನ ಮನೆಬಾಗಿಲಿಗೇ ಒದಗಿಸುವ ವ್ಯವಸ್ಥೆ ಮಾಡ ಬೇಕು ಬ್ಯಾಂಕ್‌ನವರು ಸಾಲ ಕೊಡುವುದಕ್ಕೆ ಸಿದ್ಧರಿರುತ್ತಾರೆ, ರೈತ ತೆಗೆದುಕೊಳ್ಳುವುದಕ್ಕೆ ಸಿದ್ಧರಿರುತ್ತಾರೆ. ಆದರೆ ಅದಕ್ಕೆ ಬೇಕಾದ ಪಹಣಿ, ಖಾತೆ, ಇಂಥಾದನ್ನು ನಿಮ್ಮ ಸರ್ಕಾರದ ಕಛೇರಿಯಲ್ಲಿ ಮಾಡಿಕೊಡಲು ಸತಾ ಯಿಸುತ್ತಾರೆ. ಇದನ್ನು ನೋಡಿದರೆ ಮನಸ್ಸಿಗೆ ಬಹಳ ನೋವಾಗುತ್ತದೆ. ಒಟ್ಟಿನಲ್ಲಿ ನಾವು ಜನರಿಗೆ ಹೆಚ್ಚು ಅನುಕೂಲವಾಗುವ ರೀತಿಯಲ್ಲಿ ನಡೆದುಕೊಳ್ಳೋಣ. ದೇಶದ ಸೇವೆಯನ್ನು ಮಾಡೋಣ ಕಷ್ಟದಲ್ಲಿರುವ ವರಿಗೆ ಸಹಾಯ ಮಾಡೋಣ. ನಾವು ರಾಜಕೀಯವನ್ನು ಮಾಡಿದರೂ ಗ್ರಾಮಾಂತರ ಪ್ರದೇಶದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡಬೇಕು. ಕೆರೆಗಳಲ್ಲಿ ಇಟ್ಟಿಗೆ ಹಾಕಲು ಮಣ್ಣನ್ನು ತೆಗೆದುಕೊಳ್ಳುವುದಕ್ಕೆ ಹೋದರೆ ಅವ ರಿಗೆ ಟ್ಯಾಕ್ಸ್ ಹಾಕುತ್ತೀರಿ. ಆದರೆ ಅದೇ ಕೆರೆಯಲ್ಲಿ ಹೂಳು ತೆಗೆಸಲು ಹಣವನ್ನು ಖರ್ಚು ಮಾಡುತ್ತೀರಿ. ಆದರೆ ಯಾರಾದರೂ ಒಬ್ಬ ಮುಂದೆಬಂದು ಅದೇ ಕರೆಯ ಮಣ್ಣಿನಿಂದ ಇಟ್ಟಿಗೆ ಹಾಕಿಕೊಂಡು ನೂರಾರು ಜನರಿಗೆ ಕೆಲಸ ಕೊಡುತ್ತೇನೆಂದು ಹೇಳಿದರೆ ಅವನ ಗುದ್ದಲಿ, ಹಾರೆ, ಪಿಕಾಸಿ, ಮಂಕರಿಯನ್ನು ನಿಮ್ಮವರು ಕಿತ್ತುಕೊಂಡು ಬರುತ್ತಾರೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಇದು ಸರಿಯಲ್ಲ. ಸರ್ಕಾರದವರು

ಅಂಥವರನ್ನು ಬರನೂಡಿಕೊಂಡು ಈ ಕೆರೆಯಲ್ಲಿ ಇಟ್ಟಿಗೆ ಹಾಕುವುದರ ಮೂಲಕ ಹೂಳನ್ನು ತೆಗೆದುಹಾಕಿ ಊರಿಗೆ ಬಹಳ ಉಪಕಾರ ಮಾಡಿದ್ದೀಯ ಎಂದು ಶ್ಲಾಘನೆ ಮಾಡಬೇಕು. ಆ ವ್ಯಕ್ತಿ ಇಟ್ಟಿಗೆ ಗೂಡು ಸುಡಲು ತನ್ನ ಸ್ವಂತ ತೋಟದಿಂದ ಮರವನ್ನು ಕಡಿದುಕೊಂಡು ಬಂದರೆ ಅವನಮೇಲೆ ಕೇಸು ಹಾಕುವುದು ಬೇಡ.

6-p.m.

ಇಂಥ ಒಂದು ಕಾರ್ಯಕ್ರಮಗಳಿಗೆ, ಇಂಥ ಒಂದು ತೊಂದರೆಗಳನ್ನು ನಿವಾರಣೆ ಮಾಡಲಿಕ್ಕೆ ಒಂದು ಉತ್ತಮವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇದರಲ್ಲಿ ರಾಜಕಾರಣ ಮಾಡುವುದರಿಂದ ಏನು ಪ್ರಯೋಜನವಾಗಲಾರದು. ಸಾರ್ವಜನಿಕವಾಗಿ ಎಲ್ಲರಿಗೂ ಅನುಕೂಲವಾಗುವಂತೆ ನಾವು ನೀವು ದುಡಿದೇ ಒಂದು ವ್ಯವಸ್ಥೆಯನ್ನು ಮಾಡೋಣ. ಬಡತನ ದೂರ ಮಾಡುತ್ತೇನೆಂಬ ಘೋಷಣೆಯನ್ನು ಮಾಡಿ ರಾಜಕೀಯ ಮಾಡಿದರೆ ಜನರು ಅಸಮಾಧಾನ ಮನೋಭಾವ ಬರತಕ್ಕಂಥದ್ದಕ್ಕೆ ಅವಕಾಶವಾಗುತ್ತದೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಿನಂತಿಮಾಡಿಕೊಳ್ಳುತ್ತಾ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಮಲ್ಲಪ್ಪ (ಹರಿಹರ).--ಸನ್ಮಾನ್ಯ ಸಭಾಧ್ಯಕ್ಷರೇ 1983-84 ನೇ ಸಾಲಿನ ನಮ್ಮ ರಾಜ್ಯದ ಆಯವ್ಯಯ ಪತ್ರವನ್ನು ಸ್ವಾಗತಿಸಿ ಅವರವರ ಅನಿಸಿಕೆಗಳನ್ನು ಈ ಸಭೆಯಲ್ಲಿ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ ನಮ್ಮ ವಿರೋಧ ಪಕ್ಷದ ನಾಯಕರು ಈ ಒಂದು ಬಡ್ಜೆಟ್ ಬಗ್ಗೆ ಬಹಳವಾಗಿ ವಿಶ್ಲೇಷಣೆ ಮಾಡಿ ಹೇಳಿದರು. ಅವರು ಹೇಳುವಾಗ ಈ ಒಂದು ಬಡ್ಜೆಟ್ ಬೋಳು ಬಡ್ಜೆಟ್ ಎಂದು ಹೇಳಿದರು. ಹಿಂದೆ ಸರ್ಕಾರ ಇದ್ದಂತ ಕಾಲದಲ್ಲಿ ಅದರೆ ಕಾಂಗ್ರೆಸ್ ವಿಭಜನೆ ಆದಂಥಕಾಲದಲ್ಲಿ ಆಡಳಿತ ಪಕ್ಷ ಮತ್ತು ಕಾಂಗ್ರೆಸ್ ಓ ಪಕ್ಷ ಎಂದು ಇತ್ತು 1970-71ರಲ್ಲಿ ಕೇಂದ್ರ ಸರ್ಕಾರದಲ್ಲಿ ಆಡಳಿತದಲ್ಲಿದ್ದಂಥ ಪಕ್ಷ ಗರೀಬಿ ಹಠಾವೋ ಎಂದು ಘೋಷಣೆ ಮಾಡಿ ಇಂದಿಗೆ ಹನ್ನೆರಡು ಹದಿಮೂರು ವರ್ಷಗಳಾದರೂ ಕೂಡ ಆ ಘೋಷಣೆ ಫಲಕಾರಿಯಾಗಲಿಲ್ಲ. ಈಗ ನಮ್ಮ ರಾಜ್ಯದ ಒಂದು ಹೊಸದಾದಂಥ ಜನತಾ ಪಕ್ಷ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಮಂಡಿಸಿರತಕ್ಕಂಥ ಆಯವ್ಯಯ ಪಟ್ಟಿಯ ಬಗ್ಗೆ ಇಲ್ಲಸಲ್ಲದ ಟೀಕೆಗಳನ್ನು ಮಾಡಿದರು. ಮಾನ್ಯ ವಿರೋಧ ಪಕ್ಷದ ನಾಯಕರನ್ನು ಒಂದು ಪ್ರಶ್ನೆ ಕೇಳುತ್ತೇನೆ 1970 ರಲ್ಲಿ ಘೋಷಣೆ ಮಾಡಿದ್ದರಲ್ಲ ಏನು ಬಡವರಿಗೆ ಉಪಕಾರವಾಗ ತಕ್ಕಂಥ ಸಾಧನೆಯನ್ನು ಮಾಡಿದ್ದೀರಿ ಎಂದು. ಇದಕ್ಕೆ ಅವರು ಉತ್ತರ ಕೊಡಲಿ ? ಮಾನ್ಯ ಬಂಗಾರಪ್ಪನವರು ಮಾತನಾಡುತ್ತಾ ಹಲವಾರು ಜಿಲ್ಲೆಗಳು ಬರಗಾಲಕ್ಕೆ ತುತ್ತಾಗಿ ಜನತೆಯು ಹಳ್ಳಿಗಳಿಂದ ವಲಸೆ ಹೋಗುತ್ತಿದ್ದಾರೆ ಸರ್ಕಾರ ಯಾವುದೇ ಕ್ರಮವನ್ನು ವ್ಯವಸ್ಥಿತವಾದ ರೀತಿಯಲ್ಲಿ ಮಾಡಲಿಲ್ಲ ಎನ್ನುವ ಮಾತನ್ನು ಹೇಳಿದರು. ಚುನಾಯಿತರಾಗಿ ಬರತಕ್ಕಂಥ ಸದಸ್ಯರು, ಚುನಾಯಿತರಾಗಿ ಬರುವುದಕ್ಕೆ ಮುಂಚೆ ಯಾವ ಕ್ಷೇತ್ರದಲ್ಲಿರುತ್ತಾರೋ ಅವರು ಚುನಾಯಿತರಾಗಿ ಬಂದಮೇಲೆ ಬೆಂಗಳೂರಿಗೆ ವಲಸೆ ಬಂದು ಬೀದಿ ಮನೆಗಳನ್ನು ನೋಡಿಬಿಟ್ಟರೆ ಆಯಿತು, ಇಡಿ ಕ್ಷೇತ್ರವನ್ನೇ ಮರೆತು ಬಿಡುತ್ತಾರೆ, ಇಡಿ ಕ್ಷೇತ್ರದ ಜನತೆಯನ್ನೇ ಮರೆತುಬಿಡುತ್ತಾರೆ ಆದ್ದರಿಂದ ಚುನಾಯಿತರಾದ ಸದಸ್ಯರು ಮುಖ್ಯವಾಗಿ ಕ್ಷೇತ್ರದ ಜನತೆಯ ಆಶಾಭಾವನೆಯನ್ನು ಅರಿತು ಜನತೆಗೆ ದ್ರೋಹವನ್ನು ಮಾಡದೆ ಅವರ ಆಶೆಯನ್ನು ಈಡೇರಿಸುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ

ಅನಂತರ 160 ಕೋಟಿ ಕೊರತೆಯ ಬಡ್ಜೆಟ್ ಇರುವಾಗ ಮಿತಿಯನ್ನು ಸರ್ಕಾರ ಯಾವ ರೀತಿ ಮಾಡುತ್ತದೆ ಎಂಬ ಅಭಿಪ್ರಾಯವನ್ನು ಅನೇಕ ಸದಸ್ಯರು ವ್ಯಕ್ತ ಪಡಿಸಿದ್ದಾರೆ ಈ ಕೊರತೆಯ ಬಡ್ಜೆಟ್ ಬರಬೇಕಾದರೆ ಕೇಂದ್ರ ಸರ್ಕಾರದ ನೀತಿಯೇ ಕಾರಣವೆಂದು ಹೇಳಬೇಕಾಗುತ್ತದೆ. ಕೇಂದ್ರ ಸರ್ಕಾರದ ಒಂದು ಧೋರಣೆ ಮತ್ತು ಒಂದು ಅಸಮರ್ಥತೆಯಿಂದ ಸಿಮೆಂಟ್, ಕಬ್ಬಿಣ ಇವೇ ಮುಂತಾದ ವಸ್ತುಗಳ ಮೇಲೆ ತಮ್ಮ ಹತೋಟಿಯನ್ನು ಇಟ್ಟುಕೊಳ್ಳುವುದಕ್ಕೆ ಸರ್ಕಾರಕ್ಕೆ ಇಲ್ಲದೆ ಹೋಯಿತು. ಇಂಥ ಅಸಮರ್ಥಒಂದ ಸರ್ಕಾರ ಇದು ಹರಿಂದಲೇ ದಾರಣವಾಸಿಗಳು ಹೆಚ್ಚಿ ಕೊರತೆಯ ಬಡ್ಜೆಟ್ ಆಗಲು ಕೇಂದ್ರ ಸರ್ಕಾರ, ಕಾಂಗೆ ಸರ್ಕಾರನೇ ಕಾರಣ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಇದಕ್ಕೆ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೆ ಹೇಳಲಿ ?

ಅನಂತರ ಸಹಕಾರಿ ಸಂಘಗಳ ಬಗ್ಗೆ ಒಂದು ಮಾತನ್ನು ವಿಷಾದದಿಂದ ಹೇಳಬೇಕಾಗಿದೆ. ಸಹಕಾರಿ ಸಂಘಗಳಿಗೆ ಕೊಡತಕ್ಕಂಥ ಹಣ ರೈತರ ಅಭಿವೃದ್ಧಿ ಕಾರ್ಯಗಳಿಗೆ ಕೊಡತಕ್ಕಂಥ ಹಣ ದುರುಪಯೋಗ ಪಡಿಸಿಕೊಳ್ಳತಕ್ಕಂಥದು ನಡೆಯುತ್ತಿದೆ. ಸಹಕಾರಿ ಸಂಘಗಳಲ್ಲಿ ಸರ್ಕಾರದಿಂದ ಪಡೆದಂಥ ಹಣವನ್ನು ದುರುಪಯೋಗಪಡಿಸಿಕೊಂಡು ಮೋಸ ಮಾಡುತ್ತಿರುತ್ತಾರೆ. ಇಂಥ ಅನ್ಯಾಯ, ಅಕ್ರಮಗಳನ್ನು ನಿಲ್ಲಿಸಬೇಕಾದರೆ ಒಂದು ವಿಶೇಷ ಪೋಲೀಸ್ ಅಧಿಕಾರಿಗಳನ್ನು ನೇಮಿಸಬೇಕು. 10- 20 ವರ್ಷಗಳಾದರೂ,

ಪೋಲೀಸ್ ಇನ್‌ವೆಸ್ಟಿಗೇಷನ್‌ಗೆ ಹೋದರೂ ಸಹ ಏನು ಕ್ರಮತೆಗೆದುಕೊಳ್ಳದೆ ಇರತಕ್ಕಂಥ ತುಂಬಾ ಶೋಚನೀಯವಾದ ವಿಚಾರವಾಗಿರುತ್ತದೆ. ಈ ರೀತಿ ಕಾಲ ವಿಳಂಬ ಮಾಡಿಕೊಂಡು ಹೋಗುತ್ತಿದ್ದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ದುರುಪಯೋಗವಾಗುವುದಕ್ಕೆ ಸರ್ಕಾರದವರೇ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ಈ ವಿಚಾರವನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಹೆಚ್ಚಿನ ದುರುಪಯೋಗವಾಗುವುದನ್ನು ತಡೆಗಟ್ಟಲು ಒಂದು ವಿಶೇಷವಾದ ಪೋಲೀಸ್ ಪಡೆಯನ್ನು ನೇಮಿಸಬೇಕು. ಒಂದೆರಡು ವರ್ಷಗಳಲ್ಲಿಯೇ ತೀರ್ಮಾನವಾಗತಕ್ಕಂಥ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮತ್ತೆ ಇನ್ನು ನೀರಾವರಿಯ ಬಗ್ಗೆ ಹೇಳುವುದಾದರೆ ಬೃಹತ್ ಯೋಜನೆಗಳನ್ನು ತೆಗೆದುಕೊಂಡು ಹಲವಾರು ವರ್ಷಗಳಾದರೂ ಮುಗಿಯದೆ ಜನತೆಗೆ ಹಲವಾರು ಸಂದರ್ಭಗಳಲ್ಲಿ ಮೋಸ ವಂಚನೆನಡೆದಿರುತ್ತದೆಂದು ಹಲವಾರು ಮಾನ್ಯ ಸ್ನೇಹಿತರು ಹೇಳಿರುತ್ತಾರೆ. ಆಗ ನಮ್ಮ ರಾಜ್ಯದಲ್ಲಿ ಏತ ನೀರಾವರಿ ಯೋಜನೆ, ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದುಕೊಂಡು ಮುಗಿಸುವುದಾದರೆ ಇದರಿಂದ ರಾಷ್ಟ್ರಕ್ಕೆ ಉತ್ಪಾದನೆಯೂ ಆಗುತ್ತದೆ ಮತ್ತು ಕೃಷಿ ಕಾರ್ಮಿಕರಿಗೆ ಅನುಕೂಲವು ಒದಗಿಸಿದಂತಾಗುತ್ತದೆ. ಅಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥವರಿಗೆ ಉದ್ಯೋಗವನ್ನೂ ಕೂಡ ಕಲ್ಪಿಸಿದಂತಾಗುತ್ತದೆ. ಇದರಿಂದ ಜಮೀನು ಮಾಲೀಕರು ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೂ ಸಾಧ್ಯವಾಗುತ್ತದೆಂದು ಈ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಇನ್ನು ಸ್ಪೆಷಲ್ ಫಂಡರಿ ಗ್ರಾಜ್ಯುಯಿಟ್ಸ್ ಬಗ್ಗೆ ಹೇಳುವುದಾದರೆ ಈ ವರ್ಷದ ಆಯವ್ಯಯದಲ್ಲಿ ಸೇರಿಸದೆ ಇದ್ದರೆ ಈ ವರ್ಷದ ಬಡ್ಜೆಟ್‌ನಲ್ಲಿ ಸೇರಿಸಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಚಲನ ಚಿತ್ರದ ಬಗ್ಗೆ ಹೇಳುವುದಾದರೆ, ಚಲನಚಿತ್ರಗಳಿಗೆ ಹೆಚ್ಚಿನ ರೀತಿಯಲ್ಲಿ ಸಹಾಯಧನವನ್ನು ಕೊಡಬೇಕೆಂದು ಸರ್ಕಾರದವರು ಇಟ್ಟುಕೊಂಡಿರತಕ್ಕಂಥ ವಿಷಯಕ್ಕೆ ಭಿನ್ನಾಭಿಪ್ರಾಯವೇನಿಲ್ಲ. ಈ ರೀತಿ ಒಂದು ಹೆಚ್ಚಿನ ಹಣವನ್ನು ಕೊಡತಕ್ಕಂಥ ಸಂದರ್ಭದಲ್ಲಿ ಕೆಲವಾರು ಷರತ್ತುಗಳನ್ನು ಹಾಕಬೇಕು. ನಮ್ಮ ರಾಜ್ಯದ, ನಮ್ಮ ರಾಷ್ಟ್ರದ ಪ್ರಜ್ಞೆಯನ್ನು ಮೂಡಿಸತಕ್ಕಂಥ ಚಿತ್ರಗಳನ್ನೇ ಕನ್ನಡದಲ್ಲಿ ತೆಗೆಯಬೇಕು. ಇಂಥ ಚಿತ್ರಗಳನ್ನು ತೆಗೆಯುವುದರಿಂದ ರಾಷ್ಟ್ರ ಪ್ರಜ್ಞೆಯನ್ನು ಜನತೆಯಲ್ಲಿ ಮೂಡಿಸಲಿಕ್ಕೆ ಸಾಧ್ಯವಾಗುತ್ತದೆಂದು ಸರ್ಕಾರಕ್ಕೆ ಈ ಮೂಲಕ ತಿಳಿಸಲು ಇಚ್ಛೆಪಡುತ್ತೇನೆ.

ಭಾರತೀಯರಾದಂಥ ನಾವೆಲ್ಲರೂ ಧಾರ್ಮಿಕ ಚಿಂತನೆ ಮಾಡುವವರಾದ ಕಾರಣ ನಮ್ಮ ಒಂದು ಭಾರತೀಯ ಸಂಸ್ಕೃತಿಯ ಆಧಾರದ ಮೇಲೆ ಹಾಗೂ ನಮ್ಮ ಒಂದು ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸುವಂತಹ ಚಿತ್ರಗಳನ್ನು ತೆಗೆಯಬೇಕೆಂದು ತಾವು ಷರತ್ತುಗಳನ್ನು ಹಾಕಬೇಕು ಮತ್ತು ಇಂತಹ ವಿಚಾರಗಳು ಇಲ್ಲದಂಥ ಸಾಮಾಜಿಕ ಚಿತ್ರಗಳಿಗೆ ತಾವು ಮನ್ನಣೆ ಕೊಡಬಾರದೆಂದು ಕೇಳಿಕೊಳ್ಳುತ್ತೇನೆ

ಇನ್ನು ಪುರಸಭೆಗಳು ಮತ್ತು ನಗರಸಭೆಗಳ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಸರ್ಕಾರದವರು ಆಕ್ಟ್ರಾಯ್ ಪದ್ಧತಿಯನ್ನು ರದ್ದುಗೊಳಿಸಿದ ಮೇಲೆ ಈ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿದೆ. ರಸ್ತೆ ಕೆಲಸ, ಕುಡಿಯುವ ನೀರಿನ ಕೆಲಸ ಹಾಗೂ ಬೀದಿ, ದೀಪಗಳ ಒಂದು ವ್ಯವಸ್ಥೆ ಮಾಡುವುದಕ್ಕೂ ಸಹ ಕಷ್ಟವಾಗಿದೆ. ಈ ಕಾರಣದಿಂದ ಸರ್ಕಾರದವರು ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಆರ್ಥಿಕ ನೆರವು ಒದಗಿಸಬೇಕೆಂದು ತನ್ಮೂಲಕ ಅವರು ಅಲ್ಲಿನ ಜನತೆಗೆ ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ಮೊದಲು ರೇಷ್ಮೆ ಬೆಳೆಗೆ ಊಜಿ ನೊಣದ ಹಾವಳಿಯಿಂದ ಹೆಚ್ಚಿನ ಹಾನಿಯಾಯಿತು. ಅದೇ ರೀತಿ ಅಡಿಕೆ ಬೆಳೆಗೂ ಸಹ ರೋಗ ಬಂದು ಹೆಚ್ಚಿನ ನಷ್ಟವಾಯಿತು. ಈ ರೀತಿ ನಷ್ಟಕ್ಕೊಳಗಾದವರಿಗೆ ನಷ್ಟವನ್ನು ತುಂಬಿಕೊಡುವುದಾಗಿ ಸರ್ಕಾರದವರು ಹೇಳಿದ್ದರು. ಆದರೆ ಇಲ್ಲಿಯವರೆಗೆ ಯಾವ ಸಹಾಯವನ್ನು ಸಹ ಬೆಳೆಗಾರರಿಗೆ ಒದಗಿಸಿಕೊಟ್ಟಿಲ್ಲ. ಪ್ರವಾಹ ಬಂದು ನಷ್ಟಕ್ಕೊಳಗಾದವರಿಗೂ ಹಣ ಪರಿಹಾರ ಒದಗಿಸುವ ಬಗ್ಗೆ ಈ ಆಯವ್ಯಯದಲ್ಲಿ ಸೂಚನೆ ಮಾಡಿಲ್ಲ. ಈ ಹಿಂದೆ ಕುರಿ ಸಾಕುವ ಜನರು ಏನಿದ್ದಾರೆ ಈ ಹಿಂದಿನ ಇವರುಗಳು ಸಾಕಿದ್ದ ಸಾವಿರಾರು ಕುರಿಗಳು ರೋಗ ಬಂದು ಸತ್ತಾಗ ಕೂಡ ಸರ್ಕಾರದವರು ಪರಿಹಾರ ಕೊಡುವುದಾಗಿ ಘೋಷಣೆ ಮಾಡಿದ್ದರು. ಆದರೆ ಇಲ್ಲಿಯವರೆಗೆ ಕುರಿಗಳನ್ನು ಕಳೆದುಕೊಂಡವರಿಗೆ ಪರಿಹಾರ ಕೊಡಲಿಲ್ಲ. ಕುರಿಗಳನ್ನು ಸಾಕುವುದರ ಮೂಲಕ ಉಣ್ಣೆಯ ಉತ್ಪಾದನೆ ಮಾಡುತ್ತಿದ್ದವರು ಇಂದು ಕಷ್ಟವನ್ನು ಅನುಭವಿಸುತ್ತಿದ್ದಾರೆ. ಆದಕಾರಣ ಹೀಗೆ ನಾನಾ ಕಷ್ಟಗಳಿಗೆ ಒಳಗಾದವರಿಗೆಲ್ಲಾ ಪರಿಹಾರವನ್ನು ಕೂಡಲೇ ಒದಗಿಸಲು ಈ ಆಯವ್ಯಯ ಪತ್ರದಲ್ಲಿ ಸಾಕಷ್ಟು ಹಣವನ್ನು ಮೀಸಲಾಗಿಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಫಸಲು ವಿಮೆ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಹಿಂದಿನ ಸರ್ಕಾರದವರು ಹೊಳಲ್ಕೆರೆಯಲ್ಲಿ ಇದನ್ನು ಪ್ರಾಯೋಗಿಕವಾಗಿ ಜಾರಿಗೆ ತಂದರು. ಆದರೆ ಇದು ಎಷ್ಟರ ಮಟ್ಟಿಗೆ

ಸಾಧನೆಯಾಗಿದೆ ಎಂಬುದು ನಮಗೆ ಗೊತ್ತಿಲ್ಲ. ಆದ್ದರಿಂದ ಇದರ ಒಂದು ಪ್ರಗತಿಯ ಬಗ್ಗೆ ಮತ್ತು ಹಿಂದಿನ ಸರ್ಕಾರದವರು ಈ ಬಗ್ಗೆ ಏನೇನು ಪರಿಹಾರ ಕೊಟ್ಟಿದ್ದಾರೆಂಬ ವಿವರಗಳನ್ನು ಸರ್ಕಾರದವರು ತಿಳಿಸಬೇಕು. ಮುಖ್ಯವಾಗಿ ರಾಜ್ಯದ ಎಲ್ಲ ಭಾಗಗಳಲ್ಲಿಯೂ ಬೆಳೆ ವಿಮೆಯನ್ನು ಜಾರಿಗೆ ತರಬೇಕು. ಈಗ ಹಲವಾರು ರೀತಿಯ ನಷ್ಟ ಅನುಭವಿಸಿದಾಗ ಮತ್ತು ಕಳ್ಳತನವಾದಾಗ ಕೂಡ ವಿಮೆ ಮೂಲಕ ಪರಿಹಾರ ಪಡೆಯಲು ಅವಕಾಶವಿರುವಾಗ ಒಕ್ಕಲುತನದ ಆಧಾರದ ಮೇಲೆ ಜೀವನ ನಡೆಸುತ್ತಿರುವವರು ಅನೇಕ ರೀತಿಯ ನಷ್ಟಗಳನ್ನು ಅನುಭವಿಸುತ್ತಿರುವುದರಿಂದ ಮತ್ತು ರೈತರ ಪರಿಸ್ಥಿತಿ ದಿನೇ ದಿನೇ ಶೋಚನೀಯವಾಗುತ್ತಿರುವುದರಿಂದ ಫಸಲು ವಿಮೆಯನ್ನು ಕೂಡಲೇ ಜಾರಿಗೆ ತರಬೇಕೆಂದು ಮತ್ತು ರೈತರಿಗೆ ಇದರ ಮೂಲಕ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಅಬ್ಕಾರಿ ಇಲಾಖೆಯ ಬಗ್ಗೆ ಹೇಳಬೇಕೆಂದರೆ, ಈಗ ಮಧ್ಯಪಾನಗಳನ್ನು ತಯಾರುಮಾಡುವಂತಹ ಕಾರ್ಖಾನೆಗಳು ಏನಿವೆ, ಇವುಗಳ ಮಾಲೀಕರು ಸರಿಯಾಗಿ ಸುಂಕ ಕೊಡದ ಕಾರಣ ಸರ್ಕಾರಕ್ಕೆ ಬರುವ ಆದಾಯದಲ್ಲಿ ದೊಡ್ಡ ಮೋಸವಾಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ನನ್ನ ಮಿತ್ರರು ಹೇಳುವ ಪ್ರಕಾರ ಈ ಮಧ್ಯಪಾನ ತಯಾರು ಮಾಡುವ ಕಂಪನಿಗಳು ಮತ್ತು ಅಬ್ಕಾರಿ ಇಲಾಖೆಯ ಅಧಿಕಾರಿಗಳು ಒಂದು ರೀತಿಯ ಹೊಂದಾಣಿಕೆ ಮಾಡಿಕೊಂಡಿರುವುದರಿಂದ ರಾಜ್ಯ ಸರ್ಕಾರದ ಆದಾಯಕ್ಕೆ ದೊಡ್ಡ ಹೊಡೆತಬಿದ್ದಿದೆ. ಆದ್ದರಿಂದ ಸರ್ಕಾರದವರು ಈ ಹಣದ ಸೋರಿಕೆಯನ್ನು ಕೂಡಲೇ ನಿಲ್ಲಿಸುವ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ

ಇನ್ನು ರೈತರು ಏನಾದರು ಪೋಲೀಸರ ಗುಂಡೇಟಿಗೆ ಬಲಿಯಾದರೆ ಅಂತಹ ರೈತರ ವಿಧವೆಯರಿಗೆ ತಿಂಗಳಿಗೆ ನೂರು ರೂಪಾಯಿಗಳ ಮಾಸಿಕ ಪರಿಹಾರ ಕೊಡಲಾಗವುದೆಂದು ಇಲ್ಲಿ ಹೇಳಿರುವುದನ್ನು ನಾನು ಹೆಚ್ಚಿನ ರೀತಿಯಲ್ಲಿ ಮೆಚ್ಚಿಕೊಳ್ಳುತ್ತೇನೆ. ಈ ರೀತಿ ಮಾಸಿಕ ಪರಿಹಾರ ಕೊಡುವುದಕ್ಕೆ ಬದಲು ಆ ಕುಟುಂಬದ ಒಬ್ಬರು ಸದಸ್ಯರಿಗೆ ಅವರ ಒಂದು ವಿದ್ಯಾರ್ಹತೆಯನ್ನು ನೋಡಿಕೊಂಡು ಸರ್ಕಾರದಲ್ಲಿ ಒಂದು ಕೆಲಸವನ್ನು ಯಾವ ಒಂದು ನಿಬಂಧನೆಗಳನ್ನೂ ಸಹ ಹಾಕದೆ ಕೊಟ್ಟರೆ ಅದು ಉತ್ತಮವಾದಂಥ ಕೆಲಸವಾಗುತ್ತದೆಂದು ಹೇಳುತ್ತೇನೆ. ಆದ್ದರಿಂದ ಈ ಕೆಲಸವನ್ನು ನಮ್ಮ ಸರ್ಕಾರ ಮಾಡಲಿ ಎಂದು ನಾನು ಆಸೆ ವ್ಯಕ್ತಮಾಡುತ್ತೇನೆ.

ಇನ್ನು ಕುಟುಂಬ ಯೋಜನೆಗೆ ಒಳಪಟ್ಟಂತಹ ಸಂದರ್ಭದಲ್ಲಿ ಹಲವಾರು ಮಹಿಳೆಯರು ಸತ್ತಿದ್ದಾರೆ. ಈ ರೀತಿ ಸತ್ತವರ ಕುಟುಂಬಕ್ಕೆ ಪರಿಹಾರ ಕೊಡುವಂತಹ ಒಂದು ಸೌಜನ್ಯತೆಯೂ ಸಹ ಇಲ್ಲದ ಸರ್ಕಾರ ಈ ಹಿಂದೆ ಅಧಿಕಾರದಲ್ಲಿತ್ತು. ಈ ರೀತಿ ಸತ್ತ ಮಹಿಳೆಯರ ಮಕ್ಕಳು ಈಗ ತೊಂದರೆಯಲ್ಲಿದ್ದಾರೆ. ಈ ಕಾರಣದಿಂದ ಈ ರೀತಿ ತೊಂದರೆಯಲ್ಲಿರುವವರಿಗೆ ಮತ್ತು ಕುಟುಂಬ ಕಲ್ಯಾಣ ಯೋಜನೆಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಇಂತಹ ಸಂದರ್ಭದಲ್ಲಿ ಯಾರಾದರೂ ಮಡಿದರೆ ಅಂತಹವರ ಕುಟುಂಬದವರಿಗೆ 250 ರೂಪಾಯಿಗಳ ಮಾಶಾಸನವನ್ನು ಕೊಡಬೇಕೆಂದು ಹೇಳುತ್ತೇನೆ. ನನ್ನ ಮಿತ್ರರು ಮಾತನಾಡುವಾಗ ಜನಸಂಖ್ಯೆಯ ಒಂದು ಒತ್ತಡದಿಂದಾಗಿ ಹಲವಾರು ಸಮಸ್ಯೆಗಳು ಉದ್ಭವವಾಗುತ್ತಿವೆ ಎಂಬುದಾಗಿ ಹೇಳಿದರು. ಆದ್ದರಿಂದ ಈ ಜನಸಂಖ್ಯೆಯ ಒಂದು ಬೆಳವಣಿಗೆಯನ್ನು ತಡೆಗಟ್ಟಲು ಕುಟುಂಬ ಕಲ್ಯಾಣ ಯೋಜನೆಗೆ ಸರ್ಕಾರ ಹೆಚ್ಚಿನ ಪ್ರೋತ್ಸಾಹ ಕೊಡಬೇಕು ಮತ್ತು ಈ ಯೋಜನೆಗೆ ಒಳಗಾದವರು ಏನಾದರು ಸತ್ತರೆ ಅವರ ಕುಟುಂಬದ ಸದಸ್ಯರಿಗೆ 250 ರೂಪಾಯಿಗಳ ಮಾಶಾಸನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಕ್ರಿಡಾಪಟುಗಳ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಈ ಹಿಂದಿನ ಸರ್ಕಾರದವರು ಪ್ರತಿ ತಾಲ್ಲೂಕ್ ಕೇಂದ್ರಗಳಲ್ಲಿಯೂ ಕ್ರೀಡಾಂಗಣಗಳನ್ನು ನಿರ್ಮಿಸುವುದಾಗಿ ಘೋಷಣೆ ಮಾಡಿತ್ತು, ಆದರೆ ಅದು ಕಾರ್ಯಗತವಾಗಲಿಲ್ಲ. ಜನರ ಒಂದು ನೈತಿಕ ಮಟ್ಟ ಹೆಚ್ಚಾಗಬೇಕಾದರೆ ನಾವು ಕ್ರೀಡೆಗೆ ಹೆಚ್ಚು ಪ್ರೋತ್ಸಾಹ ಕೊಡಬೇಕಾಗುತ್ತದೆ. ನಾವು ಒಳ್ಳೆಯ ಆಟಗಾರರನ್ನು ತಯಾರು ಮಾಡಬೇಕಾದರೆ ನಗರ ಪ್ರದೇಶಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡಾಂಗಣಗಳ ಅವಶ್ಯಕತೆ ಇದೆ. ಅದಕ್ಕಾಗಿ ಸರ್ಕಾರದವರು ಆಯವ್ಯಯದಲ್ಲಿ ಈ ಬಾಬಿಗೆ ಹೆಚ್ಚಿನ ಹಣ ಒದಗಿಸಬೇಕೆಂದು ಹೇಳುತ್ತೇನೆ ನಾವು ಒಳ್ಳೆಯ ಕ್ರಿಡಾಪಟುಗಳನ್ನು ತಯಾರು ಮಾಡುವುದಷ್ಟೇ ಮುಖ್ಯವಲ್ಲ, ಆಟದ ಮೈದಾನದಲ್ಲಿ ಆಟವಾಡುವಾಗ ಯಾರಾದರು ಒಂದು ವೇಳೆ ಸತ್ತರೆ ಅಂತಹವರ ಕುಟುಂಬಕ್ಕೆ 250 ರೂಪಾಯಿಗಳ ಮಾಶಾಸನವನ್ನು ಸರ್ಕಾರದವರು ಕೊಡಬೇಕು ಮತ್ತು ಯಾರಾದರು ಅಂಗವಿಕಲರಾದರೆ 300 ರೂಪಾಯಿಗಳ ಮಾಶಾಸನವನ್ನು ಕೊಡಬೇಕೆಂದು ಹೇಳುತ್ತೇನೆ.

ಇನ್ನು ಮೈಸೂರಿನಲ್ಲಿರುವಂತಹ ಪ್ರೇಕ್ಷಣೀಯ ಸ್ಥಳಗಳಾದಂಥ ಅರಮನೆ, ಪ್ರಾಣಿಸಂಗ್ರಹಾಲಯ, ಕನ್ನಂಬಾಡಿ ಕಟ್ಟೆ ಇತ್ಯಾದಿಗಳನ್ನು ನೋಡುವವರು ಪ್ರತಿಯೊಂದು ಕಡೆಯೂ ಪ್ರವೇಶಶುಲ್ಕ ಕೊಡಬೇಕಾಗಿದೆ. ಇದರಿಂದ ಬಡವರಿಗೆ ಮತ್ತು ದುರ್ಬಲ ವರ್ಗದವರಿಗೆ ಬಹಳ ತೊಂದರೆಯಾಗುತ್ತಿದೆ. ಅವರು ತೆಗೆದುಕೊಂಡು ಹೋದ ಹಣವೆಲ್ಲಾ ಇದಕ್ಕಾಗಿಯೇ ಖರ್ಚಾಗಿಬಿಟ್ಟು ಬಹಳ ತೊಂದರೆ ಪಡಬೇಕಾಗುತ್ತದೆ. ಈ ತೊಂದರೆಯನ್ನು ತಪ್ಪಿಸಲು ಈಗಿರುವಂತಹ ಪ್ರವೇಶಧನವನ್ನು ಮುಕ್ಕಾಲು ಭಾಗದಷ್ಟು ಕಡಿಮೆ ಮಾಡಿ

ಕಾಲುಭಾಗ ಮಾತ್ರ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ, ಇನ್ನೊಂದು ವಿಷಯ ಈಗ ಎಲ್ಲಿ ನೋಡಿದರೂ ನೀಲಗಿರಿ ಮರಗಳನ್ನು ಬೆಳಸುತ್ತಿದ್ದಾರೆ. ನೀಲಗಿರಿ ಮರಗಳನ್ನು ಬೆಳೆಸಿದರೆ ನೀರಿನ ಅಭಾವವಾಗುತ್ತದೆಂದು ಸರ್ಕಾರಿ ತಜ್ಞರ ಅಭಿಪ್ರಾಯವಿದೆ. ನೀಲಗಿರಿ ಮರಗಳನ್ನು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಗುಡ್ಡಗಳಲ್ಲಿ ಬೆಳೆಸುತ್ತಿದ್ದಾರೆ. ತಜ್ಞರ ಅಭಿಪ್ರಾಯ ಈ ರೀತಿ ಇದ್ದರೂ ಏತಕ್ಕೆ ಈ ಮರಗಳನ್ನು ಬೆಳೆಸುತ್ತಿದ್ದಾರೋ ಗೊತ್ತಿಲ್ಲ.

ಇನ್ನು ಹೆಂಡ ಸಾರಾಯಿಯ ಬಗ್ಗೆ ಹೇಳುವುದಾದರೆ, ನಾನು ಹೆಂಡ ಸಾರಾಯಿಯ ಬಗ್ಗೆ ವಿರೋಧ ಇದ್ದೇನೆ. ಬಡವರ ಬಗ್ಗೆ ಕಳಕಳಿ ವ್ಯಕ್ತಪಡಿಸಿ ನಮ್ಮ ಸರ್ಕಾರ ಹೆಂಡದ ಮೇಲೆ ವಿಧಿಸಿದ್ದ ತೆರಿಗೆಯನ್ನು ಕಡಿಮೆ ಮಾಡಿದೆ. ವಿರೋಧ ಪಕ್ಷದ ಸದಸ್ಯರು ಹಲವಾರು ಟೀಕೆ ಮಾಡಿದ್ದಾರೆ. ದುರ್ಬಲವರ್ಗದವರಿಗೆ ಕಡಿಮೆ ದರದಲ್ಲಿ ಹೆಂಡ ಸಾರಾಯಿ ಸಿಗುತ್ತದೆ ಎನ್ನುವುದನ್ನು ಯಾರೂ ಯೋಚನೆ ಮಾಡಿಲ್ಲ. ಹಿಂದೆ ರಾಸಾಯನಿಕ ವಸ್ತುಗಳನ್ನು ಮಿಶ್ರಣ ಮಾಡಿ ಹೆಂಡ ಸಾರಾಯಿ ಮಾರಾಟ ಮಾಡಿ ಜನಗಳನ್ನು ಸಾಯಿಸುತ್ತಿದ್ದರು. ನಮ್ಮ ಸರ್ಕಾರ ಅದರ ಕಡೆಗೆ ಹೆಚ್ಚಿನ ಗಮನವಹಿಸಿ ಬಡವರಿಗೆ ಸಹಾಯವಾಗುವಂತೆ ಮಾಡಿದೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ವಿಷಯಗಳನ್ನು ಸಂಕ್ಷಿಪ್ತವಾಗಿ ಹೇಳಿ. ವೇಳೆಯ ಪರಿಮಿತಿಯನ್ನು ಅರ್ಥಮಾಡಿಕೊಂಡು ಮಾತನಾಡಿ.

ಶ್ರೀ ಕೆ. ಮಲ್ಲಪ್ಪ.—ಒಳ್ಳೆಯ ಹೆಂಡ ಕುಡಿಸಿ. ಈಚಲ ಮರಗಳೇ ಇಲ್ಲ,

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ನಿಮ್ಮ ಅನುಭವಗಳನ್ನು ಹೇಳುತ್ತಿದ್ದೀರಿ. ಆದರೆ ನೀವು ಹೇಳುತ್ತಿರುವುದು "ಗೋರ್ಕಲ್ಲ ಮೇಲೆ ಮಳೆಗರೆದಂತೆ ಸರ್ವಜ್ಞ" ಎಂಬಂತಾಗಿದೆ. ನಿಮ್ಮ ಭಾಷಣವನ್ನು ಕೇಳುವವರೇ ಇಲ್ಲ.

ಶ್ರೀ ಪಿ. ರಾಂದೇವ್.—ನೀವು ಹಿಂದೆ ಭಾಷಣ ಮಾಡುವಾಗ ಯಾವ ರೀತಿ ಆಗಿತ್ತು, ಅದೇ ರೀತಿ ಆಗುತ್ತಿದೆ.

ಶ್ರೀ ಕೆ. ಮಲ್ಲಪ್ಪ.—ನೀಲಗಿರಿ ಮರಗಳನ್ನು ಬೆಳೆಸುವುದನ್ನು ನಿಲ್ಲಿಸಿಬಿಡಿ ಮದ್ಯಪಾನ ನಿಲ್ಲಿಸಿ. ಈಚಲ ಮರಗಳನ್ನು ಬೆಳೆಸಿ ಒಳ್ಳೆಯ ಹೆಂಡ ಕುಡಿಸಿ. ಈಚಲ ಮರಗಳನ್ನು ಬೆಳೆಸುವುದರ ಜೊತೆಗೆ ಬೇವಿನಮರ ಬೆಳೆಸಿ. ಬೇವಿನಮರ ಬೆಳೆಸಿದರೆ ಕಚ್ಚಾ ತೈಲ ಸಿಗುತ್ತದೆ ಹುಣಸೇಮರ ಬೆಳೆಸಿದರೆ ಹುಳಿ ಸಿಗುತ್ತದೆ ಹಾಗೆಯೇ ಈಚಲ ಮರಗಳನ್ನು ಬೆಳೆಸಿದರೆ ಹೆಂಡ ಸಿಗುತ್ತದೆ. ಇನ್ನು ಸೇಲ್ಸ್‌ಟ್ಯಾಕ್ಸ್ ಬಗ್ಗೆ ಹೇಳುವುದಾದರೆ,

ಉಪಾಧ್ಯಕ್ಷರು.—ತಾವು ಸಂಕ್ಷಿಪ್ತವಾಗಿ ಮಾತನಾಡಿ. ತಮ್ಮ ಭಾಷಣವನ್ನು ಪೂರ್ಣಮಾಡಿ. ಕಾಲದ ಪರಿಮಿತಿಯನ್ನು ಅರ್ಥಮಾಡಿಕೊಂಡು ಮಾತನಾಡಬೇಕು. ಇನ್ನೂ ಮಾತನಾಡುವ ಸದಸ್ಯರು ಇದ್ದಾರೆ.

ಶ್ರೀ ಕೆ. ಮಲ್ಲಪ್ಪ.—ನಾನು ಬಡ್ಜೆಟ್‌ಗೆ ಸಂಬಂಧಪಟ್ಟ ಹಾಗೆ ಹೇಳುತ್ತಿದ್ದೇನೆ. ಸೇಲ್ಸ್‌ಟ್ಯಾಕ್ಸ್‌ನ್ನು ರಾಗಿ ಜೋಳಕ್ಕೆ ಮಾತ್ರ 2 ಪರ್ಸೆಂಟ್ ಇಳಿಸಿದ್ದೀರಿ. ನಮ್ಮ ನಾಯಕರನ್ನು ಕೇಳುತ್ತಿದ್ದೇನೆ ಭತ್ತ, ಗೋಧಿ ಮತ್ತು ರಾಗಿ ಒಂದೇ ತರಹ ಧಾನ್ಯಗಳು ಅವುಗಳಿಗೆ ಸೇಲ್ಸ್‌ಟ್ಯಾಕ್ಸ್‌ನ್ನು ಒಂದೇ ರೀತಿಯಲ್ಲಿ ಹಾಕಬೇಕು. ಎಲ್ಲಕ್ಕೂ ಸಮತೋಲನವಾದ ಸೇಲ್ಸ್‌ಟ್ಯಾಕ್ಸ್‌ನ್ನು ಹಾಕಬೇಕು.

ಇನ್ನು ಕಡ್ಡಾಯ ಶಿಕ್ಷಣದ ಬಗ್ಗೆ ಹೇಳುವುದಾದರೆ, ಕಡ್ಡಾಯ ಶಿಕ್ಷಣವನ್ನು ನಾವು ಮಾಡುತ್ತೇವೆಂದು ಒಪ್ಪಿಕೊಂಡಿದ್ದೇವೆ. ಮಕ್ಕಳುಗಳಿಗೆ ಶಾಲಾ ಕಾಲೇಜುಗಳ ಕಟ್ಟಡಗಳೇ ಇಲ್ಲ ಶಾಲೆಯ ಮತ್ತು ಮಕ್ಕಳ ಹಿತದೃಷ್ಟಿಯಿಂದ ಕಟ್ಟಡಗಳನ್ನು ಕಟ್ಟಬೇಕಾಗಿದೆ ಇಂದು ಇರತಕ್ಕ ಆಯವ್ಯಯ ಪತ್ರದ ಪ್ರಕಾರ ಹಿಂದೆ ಯಾರೂ ಮಾಡಿರಲಿಲ್ಲ. ನಮ್ಮ ವಿರೋಧ ಪಕ್ಷದ ಸದಸ್ಯರು ಆತ್ಮವಂಚನೆ ಮಾಡಿಕೊಂಡು ವಿರೋಧ ಮಾಡುತ್ತಿದ್ದಾರೆ ಈ ಮುಂಗಡ ಪತ್ರವನ್ನು ವಿರೋಧ ಮಾಡುವುದಕ್ಕೆ ಹೋಗಬೇಡಿ. ಉತ್ತಮವಾದ ಆಯವ್ಯಯ ಪತ್ರವನ್ನು ತಯಾರುಮಾಡಲಾಗಿದೆ. ಇಂತಹ ಉತ್ತಮವಾದ ಆಯವ್ಯಯ ಪತ್ರವನ್ನು ತಯಾರುಮಾಡಿರುವುದಕ್ಕೆ ನಮ್ಮ ರಾಜ್ಯದ ಜನತೆ ಖುಷಿಪಟ್ಟಿದ್ದಾರೆ ಸಾಮಾನ್ಯ ಜನತೆಗೆ ಅನುಕೂಲವಾಗುವಂತೆ ಮುಂಗಡ ಪತ್ರವನ್ನು ಜನತಾ ಸರ್ಕಾರ ಮಾಡಿದೆ. ನಮ್ಮ ವಿರೋಧ ಪಕ್ಷದ ಸದಸ್ಯರು ವಿರೋಧಿಸಬೇಕೆನ್ನುವ ದೃಷ್ಟಿಯಿಂದ ವಿರೋಧ ಮಾಡುವುದರ ಮನೋಭಾವನೆಯನ್ನು ಬಿಟ್ಟು, ಸರ್ಕಾರ ಒಂದುಗೂಡಿ ರಾಜ್ಯದ ಅಭಿವೃದ್ಧಿಗೆ ವ್ಯವಸ್ಥಿತವಾದ ರೀತಿಯಿಂದ ತಾವೆಲ್ಲರೂ ಒಂದಾಗಿ ಸಹಕರಿಸಬೇಕೆಂದು ಕೇಳಿಕೊಂಡು ಅಧ್ಯಕ್ಷರು ಬೇಗ ಮುಗಿಸಬೇಕೆಂದು ಹೇಳುವುದರಿಂದ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಈ ಚಿಹ್ನೆಯು ಸಂಬಂಧ ಪಟ್ಟ ಸದಸ್ಯರು ಟಿಪ್ಪಣಿ ಅಥವ ಭಾಷಣವನ್ನು ಪರಿಸ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಗು. ತಿ. ಬಾಗಲಕೋಟಿ (ಜಮಖಂಡಿ).--ಸನ್ಮಾನ್ಯ ಉಪಾಧ್ಯಕ್ಷರೆ, ನಮ್ಮ ರಾಜ್ಯದ ಮುಖ್ಯಮಂತ್ರಿಗಳು 1983-84ರ ಸಾಲಿಗೆ ಮಂಡಿಸಿದ ಆಯವ್ಯಯ ಪತ್ರವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಇದಕ್ಕೆ ಕಾರಣೀಭೂತರಾದ ಕರ್ನಾಟಕ ಜನತೆಯನ್ನು ವಂದಿಸುತ್ತೇನೆ. ಈ ಆಯವ್ಯಯ ಪತ್ರದ ಬಗ್ಗೆ ಚರ್ಚಿಸುವಾಗ ಮತ್ತು ಇದನ್ನು ಟೀಕಿಸುವಾಗ ಕೆಲವು ಅಂಶಗಳನ್ನು ನಮ್ಮ ಮುಖ್ಯಮಂತ್ರಿಗಳು ನಮ್ಮ ಆಯವ್ಯಯ ಪತ್ರದಲ್ಲಿ ಉಲ್ಲೇಖಿಸಿದ್ದನ್ನು ತಾವು ಗಮನಿಸಿದರೆ ಬಹುಶ: ಈ ಆಯವ್ಯಯದ ಮೇಲಿನ ಟೀಕೆಗೆ ಹೆಚ್ಚು ಆಸ್ಪದ ಇರಲಾರದು ಎಂಬು ನನ್ನ ಭಾವನೆ.

1. ಈ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ 2 ತಿಂಗಳ ಮೇಲಾಯಿತು.
2. ಈ ಸರ್ಕಾರ ಅಧಿಕಾರಕ್ಕೆ ಬರುವಾಗ ಹಿಂದಿನ ಸರ್ಕಾರದಿಂದ ಬಳುವಳಿಯಾಗಿ ಬಂದಿರುವ ಬಹುಮುಖ ಮತ್ತು ಸಂಕೀರ್ಣ ಸಮಸ್ಯೆಗಳು.
3. ಈ ಸರ್ಕಾರ ಅಧಿಕಾರವಹಿಸಿಕೊಂಡಾಗ ಇದ್ದ ಆರ್ಥಿಕ ಪರಿಸ್ಥಿತಿ.
4. ನಮ್ಮ ರಾಜ್ಯದಲ್ಲಿ 16 ಜಿಲ್ಲೆಗಳಲ್ಲಿ ಈ ವರ್ಷ ಇರುವ ಭೀಕರ ಬರಗಾಲ
5. ರಾಜ್ಯದಲ್ಲಿ ಮೊದಲಿನಿಂದಲೂ ಬ ಹದಾಕಾರವಾಗಿ ಬೆಳೆದು ನಿಂತಿರುವ ಭ್ರಷ್ಟಾಚಾರ,

ಈ ದಿಸೆಯಲ್ಲಿ ನಾವು ವಿಚಾರಿಸಿದಾಗ ಇದ್ದಂಥ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಶ್ರಮವಹಿಸಿ ತಯಾರಿಸಿದ ಈ ಆಯವ್ಯಯ ಪತ್ರವನ್ನು ನಾವು ಸ್ವಾಗತಿಸಬೇಕಾಗುತ್ತದೆ. ಇದಲ್ಲದೆ ಸರ್ಕಾರ ಕೆಲವು ವಿಷಯಗಳಲ್ಲಿ ದಿಟ್ಟ ಹೆಜ್ಜೆಯನ್ನಿಡಲು ಪ್ರಾರಂಭಿಸಿದೆ ಎಂದು ಧೈರ್ಯವಾಗಿ ಹೇಳಬಹುದು. ಬರಪೀಡಿತ ಪ್ರದೇಶಗಳ ಅಭಿವೃದ್ಧಿಗೋಸ್ಕರ ದೀರ್ಘಾವಧಿ ಯೋಜನೆಗಳನ್ನು ಪ್ರಾರಂಭಿಸಿ ಅದರ ಅಂಗವಾಗಿ ರಾಜ್ಯದಲ್ಲಿ ಡಿವಿಜನ್‌ಗೆ ಒಂದರಂತೆ ಬರಗಾಲ ಪೀಡಿತ ಪ್ರದೇಶ ಅಭಿವೃದ್ಧಿ ಬೋರ್ಡ್‌ಗಳ ರಚನೆ. ಹಿಂದಿನ ಸರ್ಕಾರ ಅನೇಕ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಹೆಚ್ಚಿನ ಕಾಮಗಾರಿಗಳು ಪೂರ್ಣವಾಗದೇ ಮೊದಲಿನ ಹಂತದಲ್ಲಿ ಅಥವಾ ಅರ್ಧ ಹಂತದಲ್ಲಿ ನಿಂತ ಉದಾಹರಣೆಗಳಿವೆ. ಇದಕ್ಕೆ ಉದಾಹರಣೆಯಾಗಿ ವಿಜಾಪೂರ ಜಿಲ್ಲೆಯ ಹಿಪ್ಪರಗಿ ಅಣೆಕಟ್ಟು ಕಳೆದ 10-12 ವರ್ಷಗಳಿಂದ ಫೌಂಡೇಷನ್ ಹಂತದಲ್ಲಿಯೇ ಇದೆ. 5-6 ಕೋಟಿ ರೂಪಾಯಿ ಹಣ ಖರ್ಚುಮಾಡಿ ಏನೂ ಕೆಲಸವಿಲ್ಲದೆ ಪ್ರತಿ ತಿಂಗಳು ಲಕ್ಷಗಟ್ಟಲೇ ಪಗಾರ ಕೊಡುತ್ತಿದ್ದರು ಕಳೆದ 2-3 ವರ್ಷದಿಂದ ಕೆಲಸ ನಿಂತುಹೋಗಿದೆ ಇದನ್ನು ಮನಗಂಡ ಈ ಸರ್ಕಾರ ಈಗ ಮುಂದುವರಿದ ಕಾಮಗಾರಿಗಳನ್ನು ಪೂರ್ಣಗೊಳಿಸುವ ಭರವಸೆ ನೀಡಿದೆ. ಈ ತರಹ ಅನೇಕ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ. ಇನ್ನೂ ಹೆಚ್ಚಿನ ಸವಲತ್ತುಗಳನ್ನು ಕೊಡಬೇಕೆಂದು ಸೂಚಿಸಿ ಈ ಆಯವ್ಯಯ ಪತ್ರವನ್ನು ಮತ್ತೊಮ್ಮೆ ಸ್ವಾಗತಿಸಿ ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.--The discussion on the budgst is closed. Tomorrow the Hon'ble Chief Minister will reply. Hence the House is adjourned to meet tomorrow at 9.00 A. M.

(The House adjourned at Thirty Seven minutes past Six of the clock to meet again at Nine of the clock on Saturday the 26th March 1983.

Annexure

ಕರ್ನಾಟಕ ವಿಧಾನ ಮಂಡಲ (ಪಕ್ಷಾಂತರ ನಿಷೇಧ) ವಿಧೇಯಕ. 1983

(ವಿ. ಸ. ವಿಧೇಯಕ ಸಂಖ್ಯೆ 6)

ರಾಜ್ಯ ವಿಧಾನಸಭಾ ಸದಸ್ಯರು, ತಮ್ಮನ್ನು ಅಭ್ಯರ್ಥಿಯಾಗಿ ನಿಲ್ಲಿಸಿದ ರಾಜಕೀಯ ಪಕ್ಷದಿಂದ ಪಕ್ಷಾಂತರ ಮಾಡುವುದನ್ನು ನಿಷೇಧಿಸುವ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಕುರಿತ ವಿಧೇಯಕ.

ಪ್ರತಿಯೊಂದು ರಾಜ್ಯದ ವಿಧಾನಸಭೆಗೆ ನಡೆಯುವ ಚುನಾವಣೆಗಳ ಪಾವಿತ್ರ್ಯ ರಕ್ಷಣೆಯ ಹಿತದೃಷ್ಟಿಯಿಂದ ರಾಜಕೀಯ ಪಕ್ಷಗಳಿಗೆ ಮನ್ನಣೆ ನೀಡುವುದು, ಅಂಥ ಪಕ್ಷಗಳಿಗೆ ಚಿಹ್ನೆಗಳನ್ನು ಮೀಸಲಿಡುವುದು ಮತ್ತು ಇತರ ಸಂಬಂಧಪಟ್ಟ ವಿಚಾರಗಳ ಕುರಿತು ಉಪಬಂಧಿಸುವುದು ಅಗತ್ಯ ಮತ್ತು ಯುಕ್ತವೆಂದು ಪರಿಗಣಿಸಿ ಚುನಾವಣಾ ಚಿಹ್ನೆಗಳ (ಮೀಸಲಾತಿ ಮತ್ತು ಹಂಚಿಕೆ) ಆದೇಶ 1968ನ್ನು ರಚಿಸಿರುವುದರಿಂದ.

ಮತ್ತು ರಾಜಕೀಯ ಪಕ್ಷಗಳ ಮನ್ನಣೆ, ಮನ್ನಣೆ ನೀಡಲಾದ ರಾಜಕೀಯ ಪಕ್ಷಗಳಿಗೆ ಚಿಹ್ನೆಗಳ ಹಂಚಿಕೆ, ಮನ್ನಣೆ ಪಡೆದ ರಾಜಕೀಯ ಪಕ್ಷಗಳ ಅಭರ್ಥಿಗಳನ್ನು ನಿಲ್ಲಿಸುವಿಕೆ ಮತ್ತು ಪಕ್ಷದ ಆಧಾರದ ಮೇಲೆ ಚುನಾವಣೆಗಳನ್ನು ನಡೆಸುವುದರ ಕುರಿತು ಆ ಆದೇಶ, ಉಪಬಂಧಿಸಿರುವುದರಿಂದ.--

ಮತ್ತು ಇತ್ತೀಚೆಗೆ, ರಾಜ್ಯ ವಿಧಾನಮಂಡಲದ ಸದಸ್ಯರಲ್ಲಿ ತಮ್ಮನ್ನು ಚುನಾವಣೆಗೆ ನಿಲ್ಲಿಸಿದ ಚುನಾವಣೆಯ ಅನಂತರ ತಾವು ಸೇರಿದ ರಾಜಕೀಯ ಪಕ್ಷವನ್ನು ಬದಲಾಯಿಸುವಂಥ ಪ್ರವೃತ್ತಿ ಹೆಚ್ಚಿರುವುದರಿಂದ.

ಮತ್ತು ಅಂಥ ಪ್ರವೃತ್ತಿ ಚುನಾವಣೆ ಚಿಹ್ನೆಗಳ (ಮೀಸಲಾತಿ ಮತ್ತು ಹಂಚಿಕೆ) ಆದೇಶ 1868ರ ಉದ್ದೇಶಗಳಿಗೆ ಮತ್ತು ಪ್ರಜಾಪ್ರಭುತ್ವದ ತತ್ವಗಳಿಗೆ ಪ್ರತಿಕೂಲವಾಗಿರುವುದರಿಂದ.

ಮತ್ತು ಅಂಥ ಪ್ರವೃತ್ತಿಯನ್ನು ನಿಷೇಧಿಸಬೇಕೆಂದು ವೃತ್ತ ಪತ್ರಿಕೆ ಮತ್ತು ಅನ್ಯ ರೀತಿಯಲ್ಲಿ ಸಾರ್ವಜನಿಕರಿಂದ ಕೋರಿಕೆ ಬಂದಿರುವುದರಿಂದ.

ಮತ್ತು ಆ ಉದ್ದೇಶಕ್ಕಾಗಿ, ರಾಜ್ಯ ವಿಧಾನಮಂಡಲದ ಯಾವನೆ ಸದಸ್ಯನು ತನ್ನನ್ನು ಒಂದು ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ನಿಲ್ಲಿಸಿದ ರಾಜಕೀಯ ಪಕ್ಷದಿಂದ ಅಥವಾ ತಾನು ಚುನಾವಣೆಯ ಅನಂತರ ಸೇರಿದ ರಾಜಕೀಯ ಪಕ್ಷದಿಂದ ಪಕ್ಷಾಂತರ ಮಾಡುವುದನ್ನು ನಿಲ್ಲಿಸುವುದು ಯುಕ್ತವೆಂದು ಪರಿಗಣಿಸುವುದರಿಂದ.

ಭಾರತ ಗಣರಾಜ್ಯದ ಮೂವತ್ತ ನಾಲ್ಕನೆಯ ವರ್ಷದಲ್ಲಿ ಕರ್ನಾಟಕ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ,--

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**—(1) ಈ ಅಧಿನಿಯಮವನ್ನು ಕರ್ನಾಟಕ ವಿಧಾನ ಮಂಡಲ (ಪಕ್ಷಾಂತರ ನಿಷೇಧ) ಅಧಿನಿಯಮ 1983 ಎಂದು ಕರೆಯತಕ್ಕದ್ದು

(2) ಇದು ಈ ಕೂಡಲೇ ಜಾರಿಯಲ್ಲಿ ಬರತಕ್ಕದು

2. **ಪರಿಭಾಷೆಗಳು.**--(1) ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ.—

(ಎ) ಒಬ್ಬ ಸದಸ್ಯನು, -

(ಅ) ವಿಧಾನಸಭೆಗೆ ಒಬ್ಬ ಸದಸ್ಯನಾಗಿ ಚುನಾಯಿತನಾಗಿದ್ದು, ಅಂಥ ಚುನಾವಣೆಯಲ್ಲಿ ಅವನನ್ನು ಒಬ್ಬ ಅಭ್ಯರ್ಥಿಯಾಗಿ ನಿಲ್ಲಿಸಿದ ರಾಜಕೀಯ ಪಕ್ಷದ ಅಥವಾ ಅಂಥ ಚುನಾವಣೆಯ ಅನಂತರ ಅವನು ಸದಸ್ಯನಾದ ರಾಜಕೀಯ ಪಕ್ಷದ, ಸದಸ್ಯತನವನ್ನು ಬಿಟ್ಟುಕೊಟ್ಟರೆ, ಅಥವಾ

(ಆ) ಅಂಥ ರಾಜಕೀಯ ಪಕ್ಷದಿಂದ ಈ ವಿಚಾರದಲ್ಲಿ ಅಧಿಕೃತನಾದ ಯಾವನೇ ವ್ಯಕ್ತಿಯು ನೀಡಿದ ನಿರ್ದೇಶನ ಅಥವಾ ಸಚೇತಕ ಆದೇಶದ ವಿರುದ್ಧವಾಗಿ, ವಿಧಾನಸಭೆಯಲ್ಲಿ ಅಂಥ ರಾಜಕೀಯ ಪಕ್ಷದ ನಾಯಕರ ಅಥವಾ ಅಂಥ ವ್ಯಕ್ತಿಯ ಪೂರ್ವಾನುಮತಿಯನ್ನು ಪಡೆದುಕೊಳ್ಳದೆ, ಮತ ನೀಡಿದರೆ ಅಥವಾ ನೀಡದಿದ್ದರೆ, ಅವನು ಪಕ್ಷಾಂತರ ಮಾಡುವನಾಗಿ ಹೇಳತಕ್ಕದು.

(ಬಿ) ‹‹ಸದಸ್ಯ''. ಎಂದರೆ ರಾಜ್ಯ ವಿಧಾನಸಭೆಯ ಒಬ್ಬ ಸದಸ್ಯ,

(ಸಿ) ‹‹ರಾಜಕೀಯ ಪಕ್ಷದ ಸದಸ್ಯ" ಎಂಬುದು [illegible] ಪಕ್ಷದ ಸಹ ಸದಸ್ಯನು ಸೇರಿರುತ್ತಾನೆ.

(ಡಿ) ‘‘ರಾಜಕೀಯ ಪಕ್ಷ" ಎಂದರೆ ಚುನಾವಣೆ ಚಿಹ್ನೆಗಳ (ಮೀಸಲಾತಿ ಮತ್ತು ಹಂಚಿಕೆ) ಆದೇಶ 1968 ರ ವಾಕ್ಯವೃಂದ 6 ರ ಅನುಸಾರವಾಗಿ ಅಥವಾ ಯಾವುದೇ ಇತರ ಕಾನೂನಿನ ಅಥವಾ ರಾಜ್ಯ ವಿಧಾನಸಭೆಯ ಚುನಾವಣೆಗೆ ಸಂಬಂಧಿಸುವ ಅಥವಾ ಅನ್ವಯಿಸುವ ವಿಚಾರಗಳ ಕುರಿತು ಮಾಡಲಾದ ಅಥವಾ ನೀಡಲಾದ, ಕಾನೂನು ಬಲವಿರುವ ಯಾವುದೇ ನಿಯಮ, ವಿನಿಯಮ, ಆದೇಶ ಅಥವಾ ಅಧಿಸೂಚನೆಯ ಕೆಳಗೆ ಮನ್ನಣೆ ಪಡೆದ ರಾಜಕೀಯ ಪಕ್ಷವೆಂದು ಪರಿಗಣಿಸಲಾದ ಒಂದು ರಾಜಕೀಯ ಪಕ್ಷ.

(2) ಈ ಅಧಿನಿಯಮದಲ್ಲಿ ಬಳಸಲಾದ ಆದರೆ ಪರಿಭಾಷಿಸದಿರುವ ಪದಗಳು ಮತ್ತು ಪದಪ್ರಯೋಗಗಳು, ಚುನಾವಣೆ ಚಿಹ್ನೆಗಳ (ಮೀಸಲಾತಿ ಮತ್ತು ಹಂಚಿಕೆ) ಆದೇಶ 1968 ರಲ್ಲಿ ಅವುಗಳಿಗೆ ಯಾವ ಅರ್ಥವನ್ನು ಕೊಡಲಾಗಿದೆಯೋ ಅದೇ ಅರ್ಥವನ್ನು ಹೊಂದಿರತಕ್ಕದು

(3) **ಪಕ್ಷಾಂತರ ನಿಷೇಧ,**--(1) ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ, ಒಬ್ಬ ಸದಸ್ಯನು ಪಕ್ಷಾಂತರ ಮಾಡುವುದನ್ನು ನಿಷೇಧಿಸಲಾಗಿದೆ.

ಪರಂತು, ಯಾವುದೇ ರಾಜಕೀಯ ಪಕ್ಷದಿಂದ ಒಂದು ಚುನಾವಣೆಯಲ್ಲಿ ನಿಲ್ಲಿಸಲ್ಪಡದ ಒಬ್ಬ ಸದಸ್ಯನು ಅಂಥ ಚುನಾವಣೆಯ ಅನಂತರ ಯಾವುದೇ ರಾಜಕೀಯ ಪಕ್ಷದ ಸದಸ್ಯನಾಗಬಹುದು. ಮತ್ತು ಅಂಥ ಒಬ್ಬ ಸದಸ್ಯನು ಅಂಥ ಚುನಾವಣೆಯಲ್ಲಿ ಆ ರಾಜಕೀಯ ಪಕ್ಷದಿಂದ ಅಭ್ಯರ್ಥಿಯಾಗಿ ನಿಲ್ಲಿಸಲಾಗಿದ್ದನು ಎಂಬುದಾಗಿ ಭಾವಿಸತಕ್ಕದು.

(2) ಈ ಅಧಿನಿಯಮದ ಪ್ರಾರಂಭದ ತರುವಾಯ ಪಕ್ಷಾಂತರ ಮಾಡಿದ ಯಾವನೆ ಸದಸ್ಯನು—

(ಎ) ಅವನ ಅಧಿಕಾರದ ಅವಧಿಯ ಉಳಿದ ಸಮಯದಲ್ಲಿ,—

(ಎ) ರಾಜ್ಯ ವಿಧಾನಸಭೆಯ ಒಬ್ಬ ಸದಸ್ಯನಾಗಿ ಉಪಸ್ಥಿತನಾಗಿರುವುದು ಮತ್ತು ಮತ ನೀಡುವುದು ನಿಷೇಧವಾಗಿರತಕ್ಕದ್ದು, ಮತ್ತು

(ಎ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನು ಅಥವಾ ಆದೇಶದಲ್ಲಿ ಏನೇ ಒಳಗೊಂಡಿದ್ದರೂ, ಕರ್ನಾಟಕ ವಿಧಾನಮಂಡಲ ವೇತನ, ವಿಶ್ರಾಂತಿ ವೇತನ ಮತ್ತು ಭತ್ಯಗಳ ಅಧಿನಿಯಮ, 1956 ಕರ್ನಾಟಕ ಅಧಿನಿಯಮ 2, 1957) ರ ಕೆಳಗೆ,--

(i) ತತ್ಕಾಲದಲ್ಲಿ ಸಂದಾಯವಾಗಿರುವ ವೇತನ ಮತ್ತು ಭತ್ಯಗಳ ಶೇಕಡ ಹತ್ತರಷ್ಟನ್ನು ಮಾತ್ರ ಪಡೆಯಲು ಹಕ್ಕುಳ್ಳವನಾಗತಕ್ಕದ್ದು, ಮತ್ತು

(ii) ತತ್ಕಾಲದಲ್ಲಿ ಅನುಮತಿ ಇರುವ ಎಲ್ಲಾ ಸೌಲಭ್ಯಗಳನ್ನು ಮತ್ತು ರಿಯಾಯಿತಿಗಳನ್ನು ಪಡೆದುಕೊಳ್ಳಲು ಹಕ್ಕು ಇಲ್ಲದವನಾಗಿರತಕ್ಕದ್ದು

(ಬಿ) ಕರ್ನಾಟಕ ವಿಧಾನಮಂಡಲ ವೇತನ, ವಿಶ್ರಾಂತಿ ವೇತನ ಮತ್ತು ಭತ್ಯಗಳ ಅಧಿನಿಯಮ 1956 (ಕರ್ನಾಟಕ ಅಧಿನಿಯಮ 2, 1957) ರ ಕೆಳಗೆ ಅವನಿಗೆ ಅನುಮತಿಸಬಹುದಾದ ವಿಶ್ರಾಂತಿ ವೇತನವನ್ನು ನಿರ್ಧರಿಸುವಲ್ಲಿ ಅವನ ಅಧಿಕಾರದ ಉಳಿದ ಅವಧಿಯನ್ನು ಲೆಕ್ಕ ಹಾಕುವ ಹಕ್ಕನ್ನು ಕಳೆದುಕೊಳ್ಳತಕ್ಕದ್ದು.

(3) ಪಕ್ಷಾಂತರ ಮಾಡಿದ ಒಬ್ಬ ಸದಸ್ಯನ ಮತ ಅಮಾನ್ಯನಾಗತಕ್ಕದ್ದು ಮತ್ತು ಯಾವುದೇ ಪರಿಣಾಮವನ್ನೂ ಹೊಂದಿರತಕ್ಕದ್ದಲ್ಲ.

(4) ಒಬ್ಬ ಸದಸ್ಯನು ಪಕ್ಷಾಂತರ ಮಾಡಿದ್ದಾನೆಯೇ ಇಲ್ಲವೆ ಎಂಬ ಯಾವುದೆ ಪ್ರಶ್ನೆ ಉದ್ಭವಿಸಿದಾಗ ಆ ಪ್ರಶ್ನೆಯನ್ನು ವಿಧಾನಸಭೆಯ ಅಧ್ಯಕ್ಷರ ತೀರ್ಮಾನಕ್ಕೆ ಒಪ್ಪಿಸತಕ್ಕದ್ದು ಮತ್ತು (೨)ನೆಯ ಉಪಪ್ರಕರಣಕ್ಕೆ ಒಳಪಟ್ಟು ಅವರ ತೀರ್ಮಾನ ಅಂತಿಮವಾಗಿರತಕ್ಕದ್ದು.

(5) ಒಬ್ಬ ಸದಸ್ಯನು ಒಂದು ರಾಜಕೀಯ ಪಕ್ಷದ ಸದಸ್ಯನಾಗಿರುವನೋ ಅಥವಾ ಒಂದು ಸಚೇತನಾದೇಶವನ್ನು ಹೊರಡಿಸಲಾಗಿದೆಯೋ ಎಂಬ ಪ್ರಶ್ನೆಯನ್ನು ವಿಧಾನಸಭೆಯಲ್ಲಿರುವ ಆ ರಾಜಕೀಯ ಪಕ್ಷದ ನಾಯಕನು ನೀಡಿದ ಪ್ರಮಾಣಪತ್ರದ ಆಧಾರದ ಮೇಲೆ ನಿರ್ಧರಿಸತಕ್ಕದ್ದು ಮತ್ತು ಒಬ್ಬ ಸದಸ್ಯನು ಹೇಗೆ ಮತ ನೀಡಿದ್ದಾನೆ ಅಥವಾ ಅವನು ಮತ ನೀಡದೆ ಇದ್ದನೊ ಎಂಬ ಪ್ರಶ್ನೆಯನ್ನು ವಿಧಾನ ಮಂಡಲದ ಸಚಿವಾಲಯವು ಇಟ್ಟುಕೊಂಡ ದಾಖಲೆಗಳ ಆಧಾರದ ಮೇಲೆ ನಿರ್ಧರಿಸತಕ್ಕದ್ದು. ಅಂಥ ಒಂದು ಪ್ರಮಾಣಪತ್ರದಲ್ಲಿ ಅಥವಾ ದಾಖಲೆಗಳಲ್ಲಿ ಅಡಕವಾದ ವಿಷಯವು ಅವುಗಳಲ್ಲಿ ಅಡಕವಾದ ವಿಷಯಗಳ ಕುರಿತು ನಿರ್ಣಾಯಕ ರುಜುವಾತಾಗಿರತಕ್ಕದ್ದು. ನಿರ್ಧಾರವನ್ನು ತೆಗೆದುಕೊಳ್ಳುವ ಮುಂಚೆ ಅಧ್ಯಕ್ಷರು ಆ ಸದಸ್ಯನಿಗೆ ತನ್ನ ನಿಲುವನ್ನು ಖುದ್ದಾಗಿ ಶೃತಪಡಿಸಿಕೊಳ್ಳಲು ಒಂದು ಅವಕಾಶವನ್ನು ಕೊಡತಕ್ಕದ್ದು.

(4) ನಿಯಮ ರಚನಾಧಿಕಾರ.—(1) ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವ ಉದ್ದೇಶಕ್ಕಾಗಿ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಮೂಲಕ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ವರೆಗೆ ಇರಿಸತಕ್ಕದ್ದು ಮತ್ತು ಅದನ್ನು ಹಾಗೆ ಇರಿಸಿದ ಅಧಿವೇಶನವು ಅಥವಾ ಅದಕ್ಕೆ ನಿಕಟ ತರುವಾಯದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ ಅಧಿನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡು ಸದನಗಳು ಒಪ್ಪಿದರೆ ಆ ನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದಲ್ಲ ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ಶೂನ್ಯತೆಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ವಿಷಯದ ಕಾನೂನು ಮಾನ್ಯತೆಗೆ ಬಾಧಕವಾಗದಂತೆ ಇರತಕ್ಕದ್ದು.

ಉದ್ದೇಶಗಳ ಮತ್ತು ಕಾರಣಗಳ ವಿವರಣೆ

ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ತಮ್ಮ ಅಭ್ಯರ್ಥಿಗಳನ್ನು ನಿಲ್ಲಿಸುವುದು, ರಾಜಕೀಯ ಪಕ್ಷಗಳ ಆಧಾರದ ಮೇಲೆ ಚುನಾವಣೆಗಳು ನಡೆಯುವುದು ನಮ್ಮ ದೇಶದ ರಾಜಕೀಯ ವ್ಯವಸ್ಥೆಯಲ್ಲಿ ರೂಢಿಯಾಗಿ ಹೋಗಿದೆ. ದೇಶದ ಮತದಾರರ ಪೈಕಿ ಬಹು ಸಂಖ್ಯಾತರು ಅನಕ್ಷರಸ್ಥರಾಗಿರುವುದರಿಂದ, ಅನಕ್ಷರಸ್ಥ ಮತದಾರನೂ ಸಹ ತಾನು ಇಷ್ಟಪಡುವಂಥ ಅಭ್ಯರ್ಥಿಗೆ ಮತ ನೀಡಲು ಅನುಕೂಲವಾಗುವಂತೆ ರಾಜಕೀಯ ಪಕ್ಷಗಳಿಗೆ ಚಿಹ್ನೆಗಳನ್ನು ಗೊತ್ತುಪಡಿಸುವುದು ಅಗತ್ಯ. ರಾಜಕೀಯ ಪಕ್ಷವೊಂದು ನಿಲ್ಲಿಸಿದ ಅಭ್ಯರ್ಥಿಯು ನಿರ್ದಿಷ್ಟ ಚಿಹ್ನೆಯಿರುವ ಅಂಥ ರಾಜಕೀಯ ಪಕ್ಷದ ಅಭ್ಯರ್ಥಿಯಾಗಿ ಚುನಾಯಿತನಾದರೆ ವಿಧಾನ ಸಭಾ